


# ಪ್ರವಾದಿ ಮುಹಮ್ಮದ್ (ಸ) ಜೀವನ ಮತ್ತು ಸಂದೇಶ

ಮೌಲಾನಾ ವಹೀದುದ್ದೀನ್ ಖಾನ್



# ಪ್ರವಾದಿ ಮುಹಮ್ಮದ್ (ಸ)
# ಜೀವನ ಮತ್ತು ಸಂದೇಶ

(ಮುಸ್ಲಿಮೇತರ ವಿದ್ವಾಂಸರ ಸಂಶೋಧನಾ ಪ್ರಬಂಧಗಳು)


**ಮೌಲಾನಾ**
**ವಹೀದುದ್ದೀನ್ ಖಾನ್**



Goodword Books CPS International centre for peace & spirituality
CPS Karnataka
shamuhallur2@gmail.com

First published 2024
This book is copyright free

Urdu version: Paigambare Islam
By Maulana Wahiduddin Khan

Kannada version:
Parwadi Muhammad Jeewan Mathu Sandeha
(Muslimetara Vidwamsara Samshodhana Prabandhagalu)

Translated by:
Ibraheem Sayeed Omari

GOODWORD BOOKS
A-21, Sector 4, NOIDA-201301, Delhi NCR, India
Tel. +91 120 4131448, Mob. +91 8588822672
email: info@goodwordbooks.com
www.goodwordbooks.com

CPS INTERNATIONAL
Centre for Peace and Spirituality International
1, Nizamuddin West Market, New Delhi-110 013, India
Mob. +91-9999944119
e-mail: info@cpsglobal.org
www.cpsglobal.org

CPS KARNATAKA
Kasimsab Ameenasab Hallur,
M/s Hallur Petroleum’s, Nalatwad Road,
Mehaboob Nagar, At, Post, Tq: Muddebihal,
District: Vijayapura. State: Karnataka,
India, Pin -586212,
Mob, +91-9880155608, +91- 9945806156
e-mail: shamuhallur2@gmail.com

Printed in India

# ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

## ಮುನ್ನುಡಿ

ಅಮೇರಿಕಾದಲ್ಲಿ '100 ಪ್ರಭಾವಶಾಲಿ ವ್ಯಕ್ತಿಗಳು' (100 ಇನ್ ಫ್ಲುಯೆನ್ಶಲ್ ಪ್ಯೂಪಲ್) ಎಂಬ ಹೆಸರಿನ ಪುಸ್ತಕವೊಂದನ್ನು ಪ್ರಕಟಿಸಲಾಯಿತು. ಈ ಪುಸ್ತಕವು ಇತಿಹಾಸದ ಮೇಲೆ ಅತ್ಯಂತ ಹೆಚ್ಚು ಪ್ರಭಾವ ಬೀರಿದ 100 ಮಹಾನ್ ವ್ಯಕ್ತಿಗಳ ಪರಿಚಯವನ್ನು ಮಾಡಿಸುತ್ತದೆ. ಈ ಪುಸ್ತಕದ ಲೇಖಕರು ಸಂಪ್ರದಾಯಸ್ಥ ಕ್ರಿಶ್ಚಿಯನ್ ಕುಟುಂಬಕ್ಕೆ ಸೇರಿದ ಆಧುನಿಕ ಜಗತ್ತಿನ ಓರ್ವ ವಿಜ್ಞಾನಿ ಆಗಿರುವರು. ಆದರೆ, ಲೇಖಕರು ತಮ್ಮ ಈ ಪುಸ್ತಕದ 100 ವ್ಯಕ್ತಿಗಳ ಪಟ್ಟಿಯಲ್ಲಿನ ಅಗ್ರ ಸ್ಥಾನವನ್ನು ಯೇಸುಕ್ರಿಸ್ತರಿಗೋ, ನ್ಯೂಟನ್ ರಿಗೋ ನೀಡಿಲ್ಲ ಎಂಬುದಿಲ್ಲಿ ಅಚ್ಚರಿಯ ಸಂಗತಿ. ಲೇಖಕರ ಪ್ರಕಾರ ಇತಿಹಾಸದ 100 ಮಹಾನ್ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ತನ್ನ ಅಪ್ರತಿಮ ಸಾಧನೆಯ ಮೂಲಕ ಅಗ್ರಸ್ಥಾನಕ್ಕೆ ಅರ್ಹರಾಗಿರುವರು ಇಸ್ಲಾಮಿನ ಕೊನೆಯ ಪ್ರವಾದಿಯಾದ ಮುಹಮ್ಮದರು (ಸಲ್ಲಲ್ಲಾಹು ಅಲೈಹಿ ವಸ್ಸಲಮ್ಮ್-ಅವರ ಮೇಲೆ ದೇವನ ಶಾಂತಿಯು ವರ್ಷಿಸುತ್ತಿರಲಿ).

ಬೇರಾವುದೇ ಧಾರ್ಮಿಕ ಅಥವಾ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆಗೈದ ವ್ಯಕ್ತಿಗಳು ಪ್ರವಾದಿ ಮುಹಮ್ಮದರಷ್ಟು ಗಾಢವಾಗಿ ಇತಿಹಾಸದ ಮೇಲೆ ಪ್ರಭಾವ ಬೀರಿಲ್ಲ ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಪ್ರವಾದಿ ಮುಹಮ್ಮದರ ವ್ಯಕ್ತಿತ್ವದಿಂದ ಪ್ರಭಾವಿತಗೊಂಡ ಲೇಖಕರು ತಾನು ಪ್ರವಾದಿ ಮುಹಮ್ಮದರಿಗೆ ತನ್ನ ಪುಸ್ತಕದ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಕೊಟ್ಟ ಕಾರಣದ ಕುರಿತು ಹೀಗೆ ಬರೆಯುತ್ತಾರೆ,

Who was the only man in history who was supremely successful on both religious and secular levels.

(ಇತಿಹಾಸದಲ್ಲಿ ಧಾರ್ಮಿಕ ಮತ್ತು ಲೌಕಿಕ ಈ ಎರಡೂ ಕ್ಷೇತ್ರಗಳಲ್ಲಿ ಅದ್ಭುತವೆನ್ನಿಸುವ ಯಶಸ್ಸನ್ನು ಪಡೆದವರು ಯಾರಾದರೂ ಇದ್ದರೆ ಅದು ಕೇವಲ ಪ್ರವಾದಿ ಮುಹಮ್ಮದರು (ಸ.ಅ.) ಮಾತ್ರ ಆಗಿರುವರು.)

Dr. Micheal H. HART, The 100, New York 1978

ಥಾಮಸ್ ಕಾರ್ಲೈಲ್ (ಆಂಗ್ಲವ್ಯಕ್ತಿ) ಪ್ರವಾದಿ ಮುಹಮ್ಮದರನ್ನು ಪ್ರವಾದಿಗಳ ನಾಯಕ ಎಂದು ಕರೆದಿರುವರು. ಅಮೆರಿಕದ ಲೇಖಕ ಮೈಕಲ್ ಹಾರ್ಟ್ ಪ್ರವಾದಿ ಮುಹಮ್ಮದರನ್ನು **'ಮಾನವ ಇತಿಹಾಸದ ಅತ್ಯಂತ ಮಹಾನ್ ವ್ಯಕ್ತಿ'** ಎಂದು ಹೆಸರಿಸಿರುವರು. ಪ್ರವಾದಿವರ್ಯರು ಎಷ್ಟೊಂದು ಮಹಾನ್ ವ್ಯಕ್ತಿತ್ವ ಹೊಂದಿದವರಾಗಿದ್ದವರೆಂದರೆ, ಕೇವಲ ಇಸ್ಲಾಮಿನ ಅನುಯಾಯಿಗಳಷ್ಟೇ ಅಲ್ಲ, ಇತಿಹಾಸವನ್ನು ಅರಿತಿರುವ ಪ್ರತಿಯೋರ್ವ ವ್ಯಕ್ತಿಯೂ ಪ್ರವಾದಿವರ್ಯರ ವ್ಯಕ್ತಿತ್ವವನ್ನು ಒಪ್ಪಿಕೊಳ್ಳುವಲ್ಲಿ ನಿರ್ಬಂಧಿತನಾಗಿಬಿಡುತ್ತಾನೆ. ಮೈದಾನದಲ್ಲಿ ನಿಂತಿರುವ ವ್ಯಕ್ತಿಯೋರ್ವ ಮೇಲ್ಗಡೆ ದೃಷ್ಟಿ ಹಾಯಿಸಿದಲ್ಲಿ ವಿಶಾಲವಾದ ಆಕಾಶವು ಎಲ್ಲಾ ದಿಕ್ಕುಗಳಿಂದಲೂ ಸುತ್ತುವರಿದಿರುವುದನ್ನು ಕಾಣಬಲ್ಲನು. ಅದೇ ರೀತಿ, ಪ್ರವಾದಿವರ್ಯರ ಜೀವನದತ್ತ ನಾವು ದೃಷ್ಟಿ ಹಾಯಿಸಿದಾಗ ಮಾನವ ಜೀವನದ ಎಲ್ಲಾ ಕೋನಗಳಲ್ಲೂ ಪ್ರವಾದಿ ಮುಹಮ್ಮದರು ನೀಡಿ ಹೋದಶಿಕ್ಷಣದ ಪ್ರಭಾವವು ಪ್ರಮುಖವಾಗಿ ಆವರಿಸಿಕೊಂಡಿರುವುದನ್ನು ನಮಗೆ ಕಾಣಲು ಸಾಧ್ಯವಿದೆ.

ಇಂದು ಜಗತ್ತಿನಲ್ಲಿ ಪ್ರಾಮುಖ್ಯತೆ ಪಡೆದಿರುವ ಎಲ್ಲಾ ಉತ್ತಮ ಮೌಲ್ಯಗಳು ಹಾಗೂ ಉದಾತ್ತ ಸಂದೇಶಗಳು ನೇರ ಅಥವಾ ಪರೋಕ್ಷವಾಗಿ ಪ್ರವಾದಿವರ್ಯರು ತನ್ನ ಕಾಲದಲ್ಲಿ ತಂದ ಕ್ರಾಂತಿಯ ಫಲಿತಾಂಶಗಳಾಗಿವೆ. ಧಾರ್ಮಿಕ ಕೇಂದ್ರಗಳಲ್ಲಿ ವ್ಯಕ್ತಿಪೂಜೆಯ ಬದಲು, ದೇವಾರಾಧನೆಗೆ ಮಹತ್ವಕೊಟ್ಟವರು ಯಾರು?, ಧಾರ್ಮಿಕ ನಂಬಿಕೆಗಳು, ಆರಾಧನೆಗಳು ಇವೆಲ್ಲವೂ ಊಹಾ–ಪೋಹಗಳ ಬದಲು, ಸತ್ಯದ ಆಧಾರದಲ್ಲಿ ಆಗಬೇಕು ಎಂದು ಕಲಿಸಿಕೊಟ್ಟವರು ಯಾರು?, ಪ್ರಕೃತಿ ಪೂಜೆಯ ಬದಲು ಪ್ರಕೃತಿಯನ್ನು ನಿಯಂತ್ರಿಸಬಲ್ಲ ವಿಜ್ಞಾನಕ್ಕೇ ಪ್ರಾಶಸ್ತ್ಯ ಕೊಟ್ಟವರು ಯಾರು?, ರಾಜಕೀಯಾತ್ಮಕವಾಗಿ ವಂಶಾಡಳಿತದ ರಾಜಪ್ರಭುತ್ವದ ಬದಲು, ಪ್ರಜಾಪ್ರಭುತ್ವದ ಮಾರ್ಗವನ್ನು ತೋರಿಸಿಕೊಟ್ಟವರಾರು?, ವಾಸ್ತವಸತ್ಯವನ್ನು ತಲುಪಲು ಜ್ಞಾನದ ದೀಪ ಬೇಕೇ ಹೊರತು ಕಲ್ಪನೆಯ ಕಾರ್ಗತ್ತಲಿನಲ್ಲಿ ವಾಸ್ತವವನ್ನು ತಲುಪುವುದು ಅಸಾಧ್ಯದ ಮಾತು ಎಂಬುದನ್ನು ಮನದಟ್ಟು ಮಾಡಿಕೊಟ್ಟವರಾರು?, ಸಾಮಾಜಿಕ ಸಂಘಟನೆಗೆ ಕ್ರೌರ್ಯದ ಬದಲು ನ್ಯಾಯದ

ಬುನಾದಿಯನ್ನು ಹಾಕಿಕೊಟ್ಟವರಾರು?, ಮಾನವ ಸಮಾಜಕ್ಕೆ ಇವೆಲ್ಲವೂ ದೊರೆತ ಮೂಲ ಯಾವುದು? ಎಂಬೆಲ್ಲಾ ಪ್ರಶ್ನೆಗಳಿಗಿರುವ ಏಕೈಕ ಹಾಗೂ ಸಮಂಜಸವಾದ ಉತ್ತರವೇ ಪ್ರವಾದಿ ಮುಹಮ್ಮದರು (ಸ.ಅ.). ಈ ಎಲ್ಲ ಅಪ್ರತಿಮ ಮೌಲ್ಯಗಳ, ವೈಚಾರಿಕ ಕ್ರಾಂತಿಯ ಮೂಲವನ್ನು ಹುಡುಕಿದಲ್ಲಿ ಅದರ ಮೂಲಕೊಂಡಿ ಕೊನೆಗೆ ಬಂದು ಸೇರುವುದು ಪ್ರವಾದಿವರ್ಯರ (ಸ.ಅ.) ಕಡೆಗೇ ಆಗಿದೆ. ಬೇರೆ ಯಾರನ್ನೆಲ್ಲಾ ನಾವು ವೈಚಾರಿಕ ಕ್ರಾಂತಿಯ ಹರಿಕಾರರೆಂದು–ಕೊಂಡಿರುವೆವೋ ಅವರೆಲ್ಲರೂ ಪ್ರವಾದಿವರ್ಯರ ವಿಚಾರಧಾರೆಗಳನ್ನು ತಮ್ಮ ಉನ್ನತಿಯ ಮೆಟ್ಟಿಲಾಗಿ ಬಳಸಿಕೊಂಡವರೇ ಹೊರತು, ಖಂಡಿತವಾಗಿಯೂ ಅವರ್ಯಾರೂ ಆ ಉನ್ನತ ಮೌಲ್ಯಗಳನ್ನು ಅಸ್ತಿತ್ವಕ್ಕೆ ತಂದ ಹರಿಕಾರರಲ್ಲ.

ಸೃಷ್ಟಿಕರ್ತ ದೇವನು ಪ್ರವಾದಿ ಮುಹಮ್ಮದರನ್ನು ಇತಿಹಾಸದ ಶ್ರೇಷ್ಠ ವ್ಯಕ್ತಿಯನ್ನಾಗಿ ಮಾಡಿ, ಮಾನವಕುಲದ ಮೇಲೆ ಮಹಾ ಅನುಗ್ರಹ ಮಾಡಿರುವನು. ಈ ಮೂಲಕ ಇತಿಹಾಸವನ್ನರಿತ ವ್ಯಕ್ತಿಯೋರ್ವ ಯಾವ ಕೋನಗಳಲ್ಲೂ ನೋಡಿದರೂ ಪ್ರವಾದಿವರ್ಯರ ಸುಂದರ ವ್ಯಕ್ತಿತ್ವವು ಎಲ್ಲ ಕಡೆಗಳಿಂದಲೂ ಪ್ರತಿಫಲಿಸುವಂತೆ ದೇವನು ವ್ಯವಸ್ಥೆ ಮಾಡಿರುವನು. ವ್ಯಕ್ತಿಯೋರ್ವನು ತನ್ನ ಮಾರ್ಗದರ್ಶಕನ ಹುಡುಕಾಟದಲ್ಲಿ ಹೊರಟಾಗ; ಮೊತ್ತಮೊದಲು ಅವನ ದೃಷ್ಟಿ ಪ್ರವಾದಿವರ್ಯರ ಕಡೆಗೆ ಹೊರಳಲಿ, ಸತ್ಯದ ಮಾರ್ಗ ಯಾವುದೆಂದು ಆತನು ತಿಳಿಯ ಬಯಸಿದಲ್ಲಿ; ಪ್ರವಾದಿವರ್ಯರು ತನ್ನ ಉನ್ನತ ವ್ಯಕ್ತಿತ್ವದೊಂದಿಗೆ, ತನ್ನ ಸಚ್ಚಾರಿತ್ರ್ಯದೊಂದಿಗೆ ನಡೆದ ಮಾರ್ಗ ಆತನನ್ನು ಆಕರ್ಷಿಸಲಿ ಎಂಬುದೇ ದೇವನ ಉದ್ದೇಶ.

ಪ್ರವಾದಿವರ್ಯರನ್ನು ಮಾನವಕುಲದ ಮಹಾನ್ ಮಾರ್ಗದರ್ಶಿಯನ್ನಾಗಿ ಮಾಡಲಾಗಿದೆ. ಈ ನೆಲೆಯಲ್ಲೇ ಅವರಿಗೆ ಇತಿಹಾಸದ ಅತ್ಯುನ್ನತ ವ್ಯಕ್ತಿತ್ವವುಳ್ಳ ಮಹಾನ್ ವ್ಯಕ್ತಿ ಎಂಬ ಐತಿಹಾಸಿಕ ಸ್ಥಾನ–ಮಾನವನ್ನು ನೀಡಿ ಗೌರವಿಸಲಾಗಿದೆ. ಯಾವುದೇ ದೃಷ್ಟಿಯುಳ್ಳ ವ್ಯಕ್ತಿಯು ತನ್ನ ತಲೆಯೆತ್ತಿ ನಡೆಯುವಾಗ, ಪ್ರವಾದಿವರ್ಯರ ಉನ್ನತ ವ್ಯಕ್ತಿತ್ವವು ಅವನಿಂದ ಮರೆಯಾಗಬಾರದು ಎಂಬುದೇ ಇದರ ಸದುದ್ದೇಶವಾಗಿದೆ.

**ಮೌಲಾನಾ ವಹೀದುದ್ದೀನ್ ಖಾನ್**

# ಸನ್ಮಾನ್ಯ ಪ್ರವಾದಿ ಮುಹಮ್ಮದ್ (ಸ.ಅ.)

ಪ್ರವಾದಿ ಮುಹಮ್ಮದರ ಆಗಮನದ ಮುಂಚೆ ಅರಬ್ ದೇಶದ ಜನರ ಧಾರ್ಮಿಕ ಜೀವನ, ಅವರ ಸಾರ್ವಜನಿಕ ಜೀವನ, ನೈತಿಕತೆ ಎಲ್ಲವೂ ಅಧೋಗತಿಗೆ ತಲುಪಿತ್ತು. ಅವರ ಜೀವನದ ಎಲ್ಲಾ ರಂಗಗಳಲ್ಲಿಯೂ ಕೆಡುಕು ವ್ಯಾಪಿಸಿತ್ತು. ಅಲ್ಲಿನ ಜನರು ಮನುಷ್ಯರ ಜೀವವನ್ನು ಆಟಿಕೆಯ ವಸ್ತುವಿನಂತೆ ಪರಿಗಣಿಸಿ ಅದರೊಂದಿಗೆ ಚೆಲ್ಲಾಟವಾಡುತ್ತಿದ್ದರು. ತೀರಾ ಕ್ಷುಲ್ಲಕ ವಿಷಯಕ್ಕೆ ಯಾರದಾದರೂ ಜೀವವನ್ನು ತೆಗೆಯುವುದು ಅವರಿಗೊಂದು ತಮಾಷೆಯ ವಿಷಯವಾಗಿತ್ತು. ಅವರ ದೃಷ್ಟಿಯಲ್ಲಿ ಮಹಿಳೆಯರಿಗೆ ಯಾವುದೇ ಸಾಮಾಜಿಕ ಸ್ಥಾನ–ಮಾನವಿರಲಿಲ್ಲ. ಅವರು ತಮ್ಮೆದುರು ಮಹಿಳೆಯರನ್ನು ತೀರಾ ಕೀಳೆಂದೇ ಭಾವಿಸುತ್ತಿದ್ದರು. ಅಲ್ಲಿನ ಪುರುಷರು ಏಕಕಾಲದಲ್ಲಿ ಎಂಟು, ಹತ್ತು ಅಥವಾ ಅದಕ್ಕಿಂತ ಹೆಚ್ಚು ಮಹಿಳೆಯರೊಂದಿಗೆ ವಿವಾಹವಾಗುವುದು ತೀರಾ ಸಾಮಾನ್ಯ ವಿಷಯವಾಗಿತ್ತು. ಹೆಣ್ಣು ಮಗುವಿನ ಜನನವಾಗುವುದು ತಂದೆಯ ಪಾಲಿಗೆ ತೀರಾ ಅವಮಾನದ ವಿಷಯವೆಂದು ಭಾವಿಸಲಾಗುತ್ತಿತ್ತು. ಇದರಿಂದಾಗಿ, ನವಜಾತ ಹೆಣ್ಣು ಶಿಶು ಹುಟ್ಟಿದ ಕೂಡಲೇ ಅದನ್ನು ಜೀವಂತ ಸಮಾಧಿ ಮಾಡುವ ತೀರಾ ಅಮಾನವೀಯ ಪದ್ಧತಿ ಅರಬ್ ಭೂಮಿಯಲ್ಲಿ ನಡೆದು ಬಂದಿತ್ತು. ಜನರನ್ನು ಗುಲಾಮರನ್ನಾಗಿ ವ್ಯಾಪಾರದ ವಸ್ತುಗಳಂತೆ ಮಾರುವುದು ಅಲ್ಲಿನ ತೀರಾ ಸಾಮಾನ್ಯ ಸಂಗತಿಯಾಗಿತ್ತು. ಅಲ್ಲಿನ ಜನರು ಶರಾಬು ತುಂಬಿದ ಮಡಿಕೆಗಳನ್ನು ನೀರಿನ ಮಡಿಕೆಗಳಂತೆ ತಮ್ಮ ಮನೆಗಳಲ್ಲಿ ಸಂಗ್ರಹ ಮಾಡಿ ಇಟ್ಟುಕೊಳ್ಳುತ್ತಿದ್ದರು. ಜೂಜಾಡುವುದು ಅಲ್ಲಿನ ಮಾಮೂಲಿ ದಿನಚರಿಯಾಗಿತ್ತು. ವಿಗ್ರಹಾರಾಧನೆ ಎಷ್ಟು ದೊಡ್ಡ ಮಟ್ಟದಲ್ಲಿ ಹರಡಿತ್ತೆಂದರೆ, ಪ್ರತಿಯೊಂದು ಕುಲ–ಜನಾಂಗಕ್ಕೂ ಅವುಗಳದೇ ಆದ ಬೇರೆ ಬೇರೆ ದೇವರುಗಳು ಅಸ್ತಿತ್ವಕ್ಕೆ ಬಂದಿದ್ದವು.

ಅರಬ್ ಜನರ ಈ ಶೋಚನೀಯ ಸ್ಥಿತಿಯನ್ನು ಮೌಲಾನಾ ಹಾಲಿ (ರ.ಅ.) ತಮ್ಮ ಕವಿತೆ 'ಹಸ್ದಸೆ ಹಾಲಿ' ಯಲ್ಲಿ ಬಹಳ ಚೆನ್ನಾಗಿ ಚಿತ್ರಿಸಿರುವರು. ಅರಬರ ಈ ಶೋಚನೀಯ ಸ್ಥಿತಿಯಿಂದ ಅವರನ್ನು ಹೊರತಂದು, ಅವರಿಗೊಂದು ಹೊಸ ಜೀವನದ ಕಡೆಗೆ ಮಾರ್ಗದರ್ಶನ

ಮಾಡಲು ಸೃಷ್ಟಿಕರ್ತ ದೇವನ ಕಡೆಯಿಂದ ನಿಯೋಜಿತಗೊಂಡ ಮಾರ್ಗದರ್ಶಕನೊಬ್ಬನ ತುರ್ತು ಆವಶ್ಯಕತೆ ಅಲ್ಲಿತ್ತು. (ಕಾಲದ ಬೇಡಿಕೆಗನುಸಾರ ಜನರ ಮಾರ್ಗದರ್ಶನಕ್ಕಾಗಿ ತನ್ನ ವತಿಯಿಂದ ಸಂದೇಶವಾಹಕರನ್ನು ಕಳಿಸುವುದು ಮೊದಲಿನಿಂದಲೂ ನಡೆದು ಬಂದ ದೇವನ ನಿಯಮವಾಗಿದೆ.)

ಈ ಸದುದ್ದೇಶದ ಹಿನ್ನೆಲೆಯಲ್ಲಿ ಅರಬ್ ಜನಾಂಗದ ಕುರೈಶ್ ಮನೆತನದ ನಾಯಕ ಅಬ್ದುಲ್ ಮುತ್ತಲಿಬ್ ರ ಮಗ ಅಬ್ದುಲ್ಲಾರ ಮಗನಾಗಿ 29 ಆಗಷ್ಟ್, 571ನೇ ಇಸವಿಯಲ್ಲಿ ಅಲ್ಲಾಹನ ಪ್ರವಾದಿ ಮುಹಮ್ಮದರು (ಮಕ್ಕಾದಲ್ಲಿ) ಜನಿಸಿದರು. ಪ್ರವಾದಿ ಮುಹಮ್ಮದರು ಜನಿಸುವ ಕೆಲವೇ ತಿಂಗಳುಗಳ ಮೊದಲು ಅವರ ತಂದೆಯಾದ ಅಬ್ದುಲ್ಲಾರು ತನ್ನ 24ನೇ ವಯಸ್ಸಿನಲ್ಲಿ ರೋಗಕ್ಕೆ ತುತ್ತಾಗಿ ಮರಣಹೊಂದಿದ್ದರು. ತಂದೆಯ ಮರಣವಾದ ಕಾರಣ, ಮುಹಮ್ಮದರ ತಾತ ಅಬ್ದುಲ್ ಮುತ್ತಲಿಬರು ತನ್ನ ಅನಾಥ ಮೊಮ್ಮಗನ ಪಾಲನೆಯ ಪೋಷಣೆಯ ಹೊಣೆ ಹೊತ್ತುಕೊಂಡರು. ಜನಿಸಿದ ಕೆಲವು ದಿನಗಳ ತನಕ ಮುಹಮ್ಮದರ ತಾಯಿ ಆಮಿನಾ ಮಗುವಿಗೆ ಎದೆಹಾಲುಣಿಸಿದರು. ಆ ಬಳಿಕ ಆಗಿನ ಕಾಲದ ಪದ್ಧತಿಯಂತೆ ಹಲೀಮಾ ಸಅದಿಯಃ ಎಂಬ ಗ್ರಾಮೀಣ ಮಹಿಳೆಗೆ ಮಗುವಿಗೆ ಹಾಲುಣಿಸುವ, ಅದರ ಲಾಲನೆ ಪೋಷಣೆಯ ಜವಾಬ್ದಾರಿಯನ್ನು ನೀಡಲಾಯಿತು. ಮುಹಮ್ಮದರಿಗೆ ಆರು ವರ್ಷ ತುಂಬುವೇ ಮೊದಲೇ ತಾಯಿ ಆಮಿನಾರೂ ಮರಣ ಹೊಂದಿದರು. ತಾಯಿಯ ನಿಧನವಾಗಿ ಒಂದೆರಡು ವರ್ಷ ಕಳೆಯುವುದರೊಳಗೆ ಪ್ರವಾದಿ ಮುಹಮ್ಮದರು ತನ್ನ ಪ್ರೀತಿಯ ತಾತ ಅಬ್ದುಲ್ ಮುತ್ತಲಿಬ್ ರನ್ನೂ ಕಳೆದುಕೊಂಡರು. ತಾತ ಅಬ್ದುಲ್ ಮುತ್ತಲಿಬರ ಮರಣದ ಬಳಿಕ ಮುಹಮ್ಮದರ ಜವಾಬ್ದಾರಿ ಅವರ ದೊಡ್ಡಪ್ಪ ಅಬೂ ತಾಲಿಬ್ ರ ಹೆಗಲಿಗೇರಿತು.

ಮೊದಲಿನಿಂದಲೂ ಪ್ರಕೃತಿಯ ಆಗು–ಹೋಗುಗಳ ಕುರಿತು ಚಿಂತಿಸುವುದು ಅವರ ಹವ್ಯಾಸವಾಗಿತ್ತು. ಹೆಚ್ಚಿನ ವೇಳೆ ಏಕಾಂತದಲ್ಲಿ ಕೂತು, ತನ್ನ ಸುತ್ತಮುತ್ತಲಿನ ಪರಿಸರದ ಕುರಿತು ಪ್ರವಾದಿವರ್ಯರು ಆಳವಾಗಿ ಅವಲೋಕಿಸುತ್ತಿದ್ದರು. ದೊಡ್ಡಪ್ಪ ಅಬೂ ತಾಲಿಬರು ವ್ಯಾಪಾರಕ್ಕಾಗಿ ಪ್ರಯಾಣಿಸುವಾಗ ಮುಹಮ್ಮದರನ್ನು ತನ್ನೊಂದಿಗೆ ಕರೆದೊಯ್ಯುತ್ತಿದ್ದರು. ಈ ಮೂಲಕ ಅವರ ಬೇಸರ ನೀಗಲಿ ಜೊತೆಗೆ ವ್ಯಾಪಾರದ ರೀತಿ–ರಿವಾಜುಗಳನ್ನೂ ಅವರು

ಕಲಿಯಲಿ ಎಂಬುದು ಅಬೂ ತಾಲಿಬರ ಉದ್ದೇಶವಾಗಿತ್ತು. ಬಾಲ್ಯದಿಂದಲೂ ಸತ್ಯಸಂಧತೆ ಹಾಗೂ ಪ್ರಾಮಾಣಿಕತೆ ಪ್ರವಾದಿ ಮುಹಮ್ಮದರಿಗೆ ಪ್ರಕೃತಿಯಿಂದ ಒಲಿದು ಬಂದ ವರವಾಗಿತ್ತು. ಅನೇಕ ಜನರು ಮುಹಮ್ಮದರ ಬಳಿ ಬಂದು ತಮ್ಮ ಜಗಳ ಮತ್ತು ವಿವಾದಗಳಿಗೆ ಇತಿಶ್ರೀ ಹಾಡುವಂತಹ ಪರಿಹಾರ ಪಡೆದುಕೊಂಡು ಹೋಗುತ್ತಿದ್ದರು. ತನ್ನ ದೊಡ್ಡಪ್ಪನ ಜೊತೆಗೆ ವ್ಯಾಪಾರ ನಿಮಿತ್ತ ಮಾಡುತ್ತಿದ್ದ ಪ್ರಯಾಣದ ಮಧ್ಯೆ ಸಾಗರ ಪರ್ವತಗಳ ದೃಶ್ಯಗಳು ಮುಹಮ್ಮದರ ಮನಸೂರೆಗೊಳ್ಳುವುದರ ಜೊತೆಗೆ ಅವರಿಗೆ ಸೃಷ್ಟಿಕರ್ತನ ಮಹಿಮೆಯನ್ನು ಮನದಟ್ಟು ಮಾಡಿಸುತ್ತಿದ್ದವು.

ಮುಹಮ್ಮದರಿಗೆ 25 ವರ್ಷ ತುಂಬಿದಾಗ ಮಕ್ಕಾದ ಪ್ರಸಿದ್ಧ ಶ್ರೀಮಂತ ಮಹಿಳೆಯಾಗಿದ್ದ ಹಝ್ರತ್ ಖದೀಜಾ ಅವರ ಪರಿಚಯವಾಯಿತು. ಅವರು ಓರ್ವ ಕುಲೀನ ಸ್ತ್ರೀಯೂ, ಪ್ರಸಿದ್ಧ ವ್ಯಾಪಾರಸ್ಥೆಯೂ ಆಗಿದ್ದರು. ಮುಹಮ್ಮದರ ಸತ್ಯಸಂಧತೆ, ಅವರ ಪ್ರಾಮಾಣಿಕತೆಯ ಕುರಿತು ಬಹಳಷ್ಟು ಜನರಿಂದ ಕೇಳಲ್ಪಟ್ಟಿದ್ದ ಅವರು, ದೊಡ್ಡ ಪ್ರಮಾಣದ ತನ್ನ ಮಾರಾಟದ ಸರಕುಗಳನ್ನು ಯಮನ್ ನಲ್ಲಿ ಮಾರಾಟ ಮಾಡುವ ಸಲುವಾಗಿ ಪ್ರವಾದಿ ಮುಹಮ್ಮದರ ಸುಪರ್ದಿಗೆ ಕೊಟ್ಟು ಕಳುಹಿಸಿದರು. ತನ್ನ ದೊಡ್ಡಪ್ಪನೊಂದಿಗೆ ಮಾಡಿದ್ದ ಪ್ರಯಾಣಗಳಿಂದಾಗಿ ವ್ಯಾಪಾರದಲ್ಲಿ ಮುಹಮ್ಮದರಿಗೆ ಸಾಕಷ್ಟು ಅನುಭವವಿತ್ತು. ಈ ಅನುಭವದ ಆಧಾರದಲ್ಲಿ ಖದೀಜಾರ ಸರಕುಗಳನ್ನು ದೊಡ್ಡ ಮಟ್ಟದ ಲಾಭದೊಂದಿಗೆ ಮಾರುವುದರಲ್ಲಿ ಯಶಸ್ವಿಯಾದರು. ಖದೀಜಾರು ಮುಹಮ್ಮದರ ಕಾರ್ಯನಿರ್ವಹಣೆಯಿಂದ ಹರ್ಷಗೊಂಡು ನಿಗದಿತ ಮೊತ್ತಕ್ಕಿಂತ ದುಪ್ಪಟ್ಟು ಮೊತ್ತವನ್ನು ನೀಡಿದರು. ಪ್ರವಾದಿವರ್ಯರ ಗುಣ–ನಡತೆಯಿಂದ ಬಹಳ ಪ್ರಭಾವಿತರಾಗಿದ್ದ ಹಝ್ರತ್ ಖದೀಜಾರು ಕೆಲವು ದಿನಗಳ ಬಳಿಕ ಖುದ್ದು ಮುಹಮ್ಮದರಿಗೆ ವಿವಾಹ ಸಂದೇಶವನ್ನು ಕಳಿಸಿದರು. ಮುಹಮ್ಮದರು ಈ ಕುರಿತು ತನ್ನ ದೊಡ್ಡಪ್ಪ ಅಬೂತಾಲಿಬರೊಂದಿಗೆ ಸಮಾಲೋಚಿಸಿ ಅವರ ಸಲಹೆಯಂತೆ ಖದೀಜಾರನ್ನು ವಿವಾಹವಾದರು. (ಆಗ ಮುಹಮ್ಮದರ ವಯಸ್ಸು 25 ಮತ್ತು ಖದೀಜಾರ ವಯಸ್ಸು ಸರಿಸುಮಾರು 40). ಸರಿಸುಮಾರು 25 ವರುಷಗಳ ದೀರ್ಘ ದಾಂಪತ್ಯದ ಬಳಿಕ ಖದೀಜಾರು ಮುಹಮ್ಮದರನ್ನು ಅಗಲಿದರು. ಹ.ಖದೀಜಾರ ಮರಣ ಮುಹಮ್ಮದರನ್ನು ಬಹಳ

ದುಃಖಿತಪ್ತರನ್ನಾಗಿ ಮಾಡಿತು. ಖದೀಜಾರು ಎಷ್ಟು ಉತ್ತಮ ಪತ್ನಿಯಾಗಿದ್ದರೆಂದರೆ, ಪ್ರವಾದಿ ಮುಹಮ್ಮದರು ಜೀವನದುದ್ದಕ್ಕೂ ಅವರನ್ನು ಬಹಳ ಪ್ರೀತಿ ಮತ್ತು ಕೃತಜ್ಞತೆಯೊಂದಿಗೆ ಆಗಾಗ್ಗೆ ನೆನಪಿಸಿಕೊಳ್ಳುತ್ತಲೇ ಇರುತ್ತಿದ್ದರು. ಹ.ಖದೀಜಾರ ಬಳಿ ಝೈದ್ ಬಿನ್ ಹಾರಿಸ್ ಎನ್ನುವ ಗುಲಾಮರೊಬ್ಬರಿದ್ದರು. ಅವರನ್ನು ಖದೀಜಾರು ಮುಹಮ್ಮದರ ಸೇವೆಗಾಗಿ ನಿಯೋಜಿಸಿದ್ದರು. ಪ್ರವಾದಿ ಮುಹಮ್ಮದರು (ಸ) ಝೈದ್ ರನ್ನು ಗುಲಾಮಗಿರಿಯಿಂದ ಸ್ವತಂತ್ರಗೊಳಿಸಬೇಕೆಂದು ಖದೀಜಾರ ಬಳಿ ಕೇಳಿಕೊಂಡಿದ್ದರು. ಮುಹಮ್ಮದರ ಅಭಿಲಾಷೆಯಂತೆ ಖದೀಜಾರು ಅವರನ್ನು ಸ್ವತಂತ್ರಗೊಳಿಸಿಯೂ ಇದ್ದರು. ಝೈದ್ ಮುಹಮ್ಮದರ ಉನ್ನತ ವ್ಯಕ್ತಿತ್ವದಿಂದ ಎಷ್ಟು ಗಾಢವಾಗಿ ಪ್ರಭಾವಿತರಾಗಿದ್ದರೆಂದರೆ ತಾನು ಗುಲಾಮಗಿರಿಯಿಂದ ಸ್ವತಂತ್ರಗೊಂಡ ಬಳಿಕವೂ ತನ್ನ ತವರಿಗೆ ಹಿಂದಿರುಗದೇ ಜೀವನದುದ್ದಕ್ಕೂ ಪ್ರವಾದಿ ಮುಹಮ್ಮದರ ಜೊತೆಗಿರುವುದನ್ನೇ ಇಷ್ಟ ಪಟ್ಟರು.

ಮುಹಮ್ಮದರು ತಮ್ಮ ಜನಾಂಗದಲ್ಲಿ ಹರಡಿರುವ ಅಜ್ಞಾನ ಮತ್ತು ಕೆಡುಕಿನಿಂದಾಗಿ ಸದಾ ದುಃಖಿಸುತ್ತಿದ್ದರು. ಅವರು ಏಕಾಂತದಲ್ಲಿ ಧ್ಯಾನಾಸಕ್ತರಾಗಿ, '**ಸರ್ವಶಕ್ತನಾದ ದೇವನೇ, ಈ ಜನರನ್ನು ಕೆಡುಕಿನಿಂದ ರಕ್ಷಿಸು ಮತ್ತು ಅವರ ಮನಸ್ಸನ್ನು ಸನ್ಮಾರ್ಗದತ್ತ ಒಲಿಯುವಂತೆ ಮಾಡು**' ಎಂದು ದೇವನಲ್ಲಿ ಪದೇ ಪದೇ ಮೊರೆಯಿಡುತ್ತಿದ್ದರು. ಕೊನೆಗೂ ದೇವನು ಅವರ ಪ್ರಾರ್ಥನೆಯನ್ನು ಆಲಿಸಿ, ಅವರ ಕೋಮಲ ಹೃದಯದಲ್ಲಿ ಸನ್ಮಾರ್ಗದ ಪ್ರಕಾಶವನ್ನು ತುಂಬಿದನು. 'ದೇವನು ನನ್ನನ್ನು ಅವನ ಸಂದೇಶವಾಹಕನನ್ನಾಗಿ ಮಾಡಿ, ನನ್ನ ಮೂಲಕ ಅವನ ಸಂದೇಶಗಳನ್ನು ಜನರಿಗೆ ತಲುಪಿಸುವ, ಜನರಿಗೆ ದೇವಾರಾಧನೆಯ ನೈಜ ಮಾರ್ಗವನ್ನು ತೋರಿಸುವ ಹೊಣೆಯನ್ನು ನನಗೆ ನೀಡಲಿರುವನು' ಎಂಬುದು ಅವರ ಮನಸ್ಸಿನಾಳದ ಅರಿವಿಗೆ ಬರುತ್ತಿತ್ತು.

ಮುಹಮ್ಮದರಿಗೆ ಈಗ 40 ವರ್ಷ ತುಂಬಿತ್ತು. ಅವರ ತಮ್ಮ ಎಂದಿನ ದಿನಚರಿಯಂತೆ ಮಕ್ಕಾದ ಬಳಿಯಿರುವ ಹಿರಾಗುಹೆಯಲ್ಲಿ ದೇವ ಧ್ಯಾನಸಕ್ತರಾಗಿ ಕುಳಿತಿದ್ದರು. ಇದಕ್ಕಿದ್ದಂತೆ ಅವರ ಕಿವಿಯ ಬಳಿ ಅಶರೀರ ವಾಣಿಯೊಂದು ಕೇಳತೊಡಗಿತು. "**ಓ ಮುಹಮ್ಮದ್, ಏಳಿರಿ ಮತ್ತು ನಿಮ್ಮ ಪಾಲಕಪ್ರಭುವಿನ ನಾಮದೊಂದಿಗೆ ಓದಿರಿ. ಇದೋ, ನೀವು ಅರಸುತ್ತಿದ್ದ ಸನ್ಮಾರ್ಗವು ನಿಮ್ಮ ಪಾಲಿಗೆ ತೆರೆಯಲ್ಪಟ್ಟಿದೆ.**" ಈ ಅನಿರೀಕ್ಷಿತ ಅಶರೀರವಾಣಿಯಿಂದಾಗಿ ಪ್ರವಾದಿ

ಮುಹಮ್ಮದರು ಹೆದರಿ ನಡುಗತೊಡಗಿದರು. ತೀವ್ರ ಭಯಗೊಂಡ, ಬೆವರಿನಿಂದ ಒದ್ದೆಯಾದ ಸ್ಥಿತಿಯಲ್ಲಿ ಅವರು ಮನೆಗೆ ತಲುಪಿ, ಪತ್ನಿ ಖದೀಜಾರ ಬಳಿ ನಡೆದ ಎಲ್ಲ ವೃತ್ತಾಂತವನ್ನು ವಿವರಿಸಿದರು. ಇದನ್ನು ಕೇಳಿದ ಪತ್ನಿ ಖದೀಜಾ, 'ತಮ್ಮನ್ನು ಸೃಷ್ಟಿಕರ್ತ ಪ್ರಭುವು ನಿಮ್ಮೊಂದಿಗಿರುವನು. ಅವನು ತನ್ನ ಸಂದೇಶವಾಹಕನನ್ನಾಗಿ ನಿಮ್ಮನ್ನು ಆಯ್ಕೆ ಮಾಡಿರುವನು. ಆ ದೇವನು ನಿಮಗೆ ಖಂಡಿತವಾಗಿಯೂ ಯಶಸ್ಸನ್ನು ದಯಪಾಲಿಸುವನು.' ಇಷ್ಟು ಹೇಳಿದ ಅವರು, ತನ್ನ ಪತಿಯನ್ನು '**ದೇವ ಸಂದೇಶವಾಹಕ**' ಎಂಬ ನೆಲೆಯಲ್ಲಿ ಅವರ ಮೇಲೆ ವಿಶ್ವಾಸ ತಂದರು. ಈ ಮೂಲಕ ಮೊತ್ತ ಮೊದಲು ಪ್ರವಾದಿವರ್ಯರ ಸಂದೇಶದ ಮೇಲೆ ವಿಶ್ವಾಸ ತಂದ ಸೌಭಾಗ್ಯಕ್ಕೂ ಅವರು ಪಾತ್ರರಾದರು. ಹ. ಖದೀಜಾರ ಬಳಿಕ, ಪ್ರವಾದಿವರ್ಯರ ದೊಡ್ಡಪ್ಪನ ಮಗ ಹಝ್ರತ್ ಅಲಿ, ಅವರ ಆಪ್ತ ಸ್ನೇಹಿತ ಹಝ್ರತ್ ಅಬೂಬಕರ್, ಗುಲಾಮಗಿರಿಯಿಂದ ಸ್ವತಂತ್ರಗೊಳಿಸಿ ತನ್ನ ದತ್ತುಪುತ್ರನನ್ನಾಗಿಸಿಕೊಂಡಿದ್ದ ಹಝ್ರತ್ ಝೈದ್ ಬಿನ್ ಹಾರಿಸ್ ಮುಂತಾದ ಅತ್ಯಾಪ್ತ ಬಳಗವೂ ಮುಹಮ್ಮದರ ಪ್ರವಾದಿತ್ವವನ್ನು ದೃಢೀಕರಿಸುವ ಮೂಲಕ ಅವರು ತಂದ ಸಂದೇಶದ ಮೇಲೆ ವಿಶ್ವಾಸ ತಂದು ಸತ್ಯವಿಶ್ವಾಸಿಗಳ ಸಾಲಿನ ಅಗ್ರಗಣ್ಯರೆಂಬ ಹಿರಿಮೆಗೆ ಪಾತ್ರರಾದರು.

ಪ್ರವಾದಿತ್ವದ ಮೊದಲ ಮೂರು ವರ್ಷಗಳಷ್ಟು ಕಾಲ ಮುಹಮ್ಮದರು (ಸ), ಸೃಷ್ಟಿಕರ್ತ ಪ್ರಭುವಿನ ಏಕದೇವಾರಾಧನೆಯ ಸಂದೇಶವನ್ನು ತಮ್ಮ ಆಪ್ತ ಬಳಗಕ್ಕಷ್ಟೇ ಮೀಸಲಿಟ್ಟಿದ್ದರು. ದೇವನ ಸಂದೇಶವನ್ನು ಅವರು ಗುಪ್ತವಾಗಿ ತಮ್ಮ ಆಪ್ತ ಬಳಗಕ್ಕೆ ಮಾತ್ರ ತಲುಪಿಸುತ್ತಿದ್ದರು. ಕೊನೆಗೆ ಬಹಿರಂಗವಾಗಿ ಸಂದೇಶಪ್ರಚಾರವನ್ನು ಆರಂಭಿಸಬೇಕೆಂಬ ದೇವನಾಜ್ಞೆಯನುಸಾರ, ಅವರೊಂದು ದಿನ ತಮ್ಮ ಎಲ್ಲ ಸಂಬಂಧಿಕರು, ಸ್ನೇಹಿತರು ಹಾಗೂ ಕುಲಬಾಂಧವರನ್ನು ಆಮಂತ್ರಿಸಿ, 'ನಾನು ನಿಮ್ಮೆಲ್ಲರ ಏಕೈಕ ಆರಾಧ್ಯನೂ ಸೃಷ್ಟಿಕರ್ತ ಪ್ರಭುವೂ ಆದ ಅಲ್ಲಾಹನಿಂದ ನೇಮಿಸಲ್ಪಟ್ಟ ಅವನ ಸಂದೇಶವಾಹಕನಾಗಿರುವೆನು. ನೀವೆಲ್ಲರೂ ಬಹುದೇವವಿಶ್ವಾಸವನ್ನು ತೊರೆದು, ಆ ಏಕೈಕ ಆರಾಧ್ಯನ ಮೇಲೆ ವಿಶ್ವಾಸವಿಡುತ್ತಾ ಕೇವಲ ಅವನನ್ನು ಮಾತ್ರ ಆರಾಧಿಸಬೇಕು, ಇನ್ನಿತರ ಎಲ್ಲ ಸಾಮಾಜಿಕ ಕೆಡುಕುಗಳನ್ನು ತೊರೆದು ದೇವನಬಳಿ ಪಶ್ಚಾತ್ತಾಪ ಪಟ್ಟು ಅವನೆಡೆಗೆ ಮರಳಬೇಕು ಎಂಬ ದೇವಸಂದೇಶವನ್ನು ತಂದಿರುವೆನು' ಎಂದರು.

ಪ್ರವಾದಿ ಮುಹಮ್ಮದರ (ಸ) ಮಾತನ್ನು ಕೇಳಿ ನೆರೆದಿದ್ದ ಜನರು ಕೋಲಾಹಲವನ್ನೆಬ್ಬಿಸಿದರು. ಅವರೆಲ್ಲರೂ ಸೇರಿ ವ್ಯಂಗ್ಯವಾಡುತ್ತಾ, ಪ್ರವಾದಿವರ್ಯರನ್ನು (ಸ) ಮೂದಲಿಸುತ್ತಾ, ಅವರು ತಂದ ದೇವಸಂದೇಶಕ್ಕೆ ವಿರೋಧ ವ್ಯಕ್ತಪಡಿಸ ತೊಡಗಿದರು. ಆದರೆ, ಪ್ರವಾದಿವರ್ಯರು (ಸ) ಮಾತ್ರ ತನ್ನ ಜನಾಂಗದ ಯಾವುದೇ ವಿರೋಧವನ್ನೂ ಲೆಕ್ಕಿಸದೆ, ಅವಕಾಶ ದೊರೆತಾಗಲೆಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಬಹಿರಂಗವಾಗಿ ದೇವ ಸಂದೇಶವನ್ನು ಜನರಿಗೆ ತಲುಪಿಸುವಲ್ಲಿ ಮಗ್ನರಾದರು.

ಪ್ರವಾದಿ ಮುಹಮ್ಮದರ ಬಹಿರಂಗ ಸಂದೇಶಪ್ರಚಾರ ಕಾರ್ಯವು ಮಕ್ಕಾದ ಬಹುದೇವವಿಶ್ವಾಸಿ ಕುರೈಷ್ ನಾಯಕರುಗಳಿಗೆ ಇರಿಸುಮುರಿಸನ್ನುಂಟುಮಾಡತೊಡಗಿತು. ಅವರೆಲ್ಲರೂ ಒಂದು ತಂಡದ ರೂಪದಲ್ಲಿ ಪ್ರವಾದಿವರ್ಯರ ದೊಡ್ಡಪ್ಪ ಅಬೂ ತಾಲಿಬರ ಬಳಿ ಬಂದು, "ನಿಮ್ಮ ಭ್ರಾತೃಜ ಮುಹಮ್ಮದ್ ಹೊಸಧರ್ಮವನ್ನು ತಂದು ಅದರ ಪ್ರಚಾರದಲ್ಲಿ ತೊಡಗಿದ್ದಾನೆ. ನಮ್ಮ ಪೂರ್ವಜರ ಸಂಪ್ರದಾಯದ ಕುರಿತು ಅಪನಂಬಿಕೆ ಬಿತ್ತುತ್ತಿದ್ದಾನೆ. ನೀವು ಅವನನ್ನು ಈ ಕೂಡಲೇ ಈ ಕಾರ್ಯದಿಂದ ತಡೆಯಬೇಕು. ಇಲ್ಲವಾದಲ್ಲಿ ನಾವು ಆತನನ್ನು ಸುಮ್ಮನೆ ಬಿಡಲಾರೆವು." ಎಂಬ ಎಚ್ಚರಿಕೆಯನ್ನು ರವಾನಿಸಿದರು.

ಪ್ರವಾದಿವರ್ಯರ (ಸ) ದೊಡ್ಡಪ್ಪ ತನ್ನ ಭ್ರಾತೃಜನನ್ನು ಕರೆಸಿಕೊಂಡು, "ಮುಹಮ್ಮದ್, ನಿನ್ನ ಕುಟುಂಬದ ಜೊತೆ ಸುಖ-ಸಂತೋಷದಿಂದ ಜೀವನ ನಡೆಸುವ ಬದಲು, ಸುಖಾ-ಸುಮ್ಮನೆ ನಿನ್ನ ಜನಾಂಗದ ದ್ವೇಷವನ್ನು ಏಕೆ ಆಮಂತ್ರಿಸಿಕೊಳ್ಳುತ್ತಿರುವಿ? ಸಿಟ್ಟಿನಲ್ಲಿ ಅವರೇನಾದರೂ ನಿನಗೆ ಹಾನಿಯುಂಟು ಮಾಡಿದರೆ ಏನು ಮಾಡುವಿ?" ಎಂದು ಸಮಜಾಯಿಸತೊಡಗಿದರು. ಅದಕ್ಕುತ್ತರವಾಗಿ ಮುಹಮ್ಮದರು(ಸ), "ದೊಡ್ಡಪ್ಪಾ, ಇದು ದೇವನು ನನಗೆ ವಹಿಸಿರುವ ಮಹತ್ತರ ಹೊಣೆಯಾಗಿದೆ. ಈ ಮಹತ್ಕಾರ್ಯದಿಂದ ನಾನು ಒಂದಿಂಚೂ ಹಿಂದೆ ಸರಿಯಲಾರೆ. ಅದಕ್ಕಾಗಿ ನನ್ನ ಜನಾಂಗದವರು ನನ್ನ ಪ್ರಾಣ ತೆಗೆದರೂ ಸರಿಯೇ!." ಎಂದು ಖಡಾಖಂಡಿತವಾಗಿ ಹೇಳಿದರು.

ಮುಹಮ್ಮದರು (ಸ) ಈ ವಿಷಯದಲ್ಲಿ ಪರ್ವತದಂತೆ ಸುಸ್ಥಿರವಾಗಿರುವರು. ಯಾವುದೇ ಕಾರಣಕ್ಕೆ ಮಕ್ಕಾದ ಬಹುದೇವವಿಶ್ವಾಸಿ ನಾಯಕರೊಂದಿಗೆ ಅವರು ರಾಜಿಯಾಗಲು

ಸಿದ್ಧರಿಲ್ಲ ಎಂಬುದನ್ನು ಮನಗಂಡ ಅಬೂ ತಾಲೀಬರು, 'ಆಯಿತು, ನಿನಗೆ ಸರಿಕಂಡಂತೆ ಮಾಡು. ನಿನ್ನ ರಕ್ಷಣೆಗೆ ನಾನಿರುವೆ. ನಿಶ್ಚಿಂತನಾಗಿರು' ಎಂದು ಹೇಳಿದರು. ದೊಡ್ಡಪ್ಪನ ಹುರಿದುಂಬಿಸುವ ಮಾತು, ಪ್ರವಾದಿ ಮುಹಮ್ಮದರ (ಸ) ಉತ್ಸಾಹವನ್ನು ಇಮ್ಮಡಿಗೊಳಿಸಿತು. ದೇವಸಂದೇಶವನ್ನು ಅವನ ದಾಸರಿಗೆ ತಲುಪಿಸುವ ತನ್ನ ಧ್ಯೇಯವಾದ ಸಂದೇಶಪ್ರಚಾರ ಕಾರ್ಯದಲ್ಲಿ ಅವರು ಇನ್ನಷ್ಟು ಹುರುಪಿನೊಂದಿಗೆ ಮಗ್ನರಾದರು.

ದಿನದಿಂದ ದಿನಕ್ಕೆ ಪ್ರವಾದಿವರ್ಯರ (ಸ) ಅನುಯಾಯಿಗಳ ಸಂಖ್ಯೆಯು ಏರತೊಡಗಿತು. ಜೊತೆ–ಜೊತೆಗೆ ಮಕ್ಕಾದ ಕುರೈಷ್ ನಾಯಕರುಗಳ ವಿರೋಧವೂ ಹೆಚ್ಚತೊಡಗಿತು. ಪ್ರವಾದಿವರ್ಯರನ್ನು ಸಂದೇಶಪ್ರಚಾರ ಕಾರ್ಯದಿಂದ ತಡೆಯಲು, ವಿವಿಧ ರೀತಿಯ ಆಮಿಷಗಳನ್ನು ನೀಡಲಾಯಿತು. ಆಮಿಷಗಳೆದುರು ಪ್ರವಾದಿವರ್ಯರು ಮಂಡಿಯೂರಲಾರರು ಎಂಬುದನ್ನು ಮನಗಂಡ ಕುರೈಷರು ಬೆದರಿಕೆಗಳನ್ನು ಒಡ್ಡತೊಡಗಿದರು. ಹಲವಾರು ಬಾರಿ ಕೊಲೆಯತ್ನಗಳೂ ನಡೆದವು. ಆದರೆ, ಪ್ರವಾದಿ ಮುಹಮ್ಮದರು (ಸ) ಇದ್ಯಾವುದರಿಂದಲೂ ಸ್ವಲ್ಪವೂ ಧೃತಿಗೆಡಲಿಲ್ಲ. ಸೃಷ್ಟಿಕರ್ತನ ಸಂದೇಶಗಳನ್ನು ಅವನ ಸೃಷ್ಟಿಗಳಿಗೆ ತಲುಪಿಸುವ ತಮ್ಮ ಧ್ಯೇಯೋದ್ದೇಶದಿಂದ ಸ್ವಲ್ಪವೂ ಹಿಂದೆ ಸರಿಯಲಿಲ್ಲ.

ಸ್ವತಃ ಪ್ರವಾದಿವರ್ಯರ (ಸ) ಚಿಕ್ಕಪ್ಪ ಅಬೂಲಹಬ್ ಮತ್ತವನ ಪತ್ನಿ ಮುಹಮ್ಮದರ (ಸ) ತೀವ್ರ ವಿರೋಧಿಗಳಾದರು. ಅವರಿಬ್ಬರೂ ಸೇರಿ ಪ್ರವಾದಿವರ್ಯರಿಗೆ ತರಹತರಹದ ಕಿರುಕುಳಗಳನ್ನು ಕೊಡಲಾರಂಭಿಸಿದರು. ಬೆಳಗಿನ ಜಾವ ಪ್ರವಾದಿವರ್ಯರು ದೇವಾರಾಧನೆಗಾಗಿ ತೆರಳುವ ಮಾರ್ಗದಲ್ಲಿ ದುರುದ್ದೇಶಪೂರ್ವಕವಾಗಿ ಅಬೂಲಹಬ್ ನ ಪತ್ನಿ ಉಮ್ಮೆ–ಜಮೀಲ್ ಮುಳ್ಳುಗಳನ್ನು ಹರಡಿರುತ್ತಿದ್ದಳು. ಕತ್ತಲೆಯಿಂದಾಗಿ ಅವಳು ಹರಡಿದ ಮುಳ್ಳುಕಂಟೆಗಳ ಮೇಲೆ ಹೆಜ್ಜೆಯಿಟ್ಟ ಪ್ರವಾದಿವರ್ಯರ (ಸ) ಪಾದಗಳಿಗೆ ಗಾಯವಾಗಿ ರಕ್ತ ಸೋರತೊಡಗುತ್ತಿತ್ತು. ಪ್ರವಾದಿ ಮುಹಮ್ಮದರ (ಸ) ನೆರೆಯಲ್ಲೇ ವಾಸಿಸುತ್ತಿದ್ದ ಈ ಇಬ್ಬರು ಪತಿ–ಪತ್ನಿಯರು, ಮುಹಮ್ಮದರು (ಸ) ಊಟಕ್ಕೆ ಕೂತಾಗ ಅವರ ಊಟದ ತಟ್ಟೆಗೆ ತ್ಯಾಜ್ಯವನ್ನು ಎಸೆಯುವ, ಬೇಕು ಬೇಕೆಂದೇ ಅವರ ಮೈ ಮೇಲೆ ಮಣ್ಣು–ಕಸಗಳನ್ನು ಎಸೆಯುವ ಮೂಲಕ ಪ್ರವಾದಿವರ್ಯರಿಗೆ, ಮಾನಸಿಕ–ದೈಹಿಕ ಕಿರುಕುಳಗಳನ್ನು ನೀಡುತ್ತಾ ವಿಕೃತ ಆನಂದ

ಪಡುತ್ತಿದ್ದರು. ಮುಹಮ್ಮದರ ಬಟ್ಟೆಯ ಮೇಲೆ ಅವರ ಕಡು ವಿರೋಧಿಗಳು ಎಸೆದ ತ್ಯಾಜ್ಯವನ್ನು ಅವರ ಪುಟ್ಟ ಮಗಳು ಅಳುತ್ತಾ ನೀರಿನಲ್ಲಿ ತೊಳೆಯುತ್ತಿದ್ದರೆ, ಪ್ರವಾದಿವರ್ಯರೇ (ಸ) ಖುದ್ದು ಮಗಳಿಗೆ ಸಮಾಧಾನ ಮಾಡುತ್ತಾ, 'ರೋದಿಸಬೇಡ ಮಗಳೇ, ಸರ್ವಶಕ್ತ ದೇವನು ನಿನ್ನ ತಂದೆಯನ್ನು ವಿರೋಧಿಗಳಿಂದ ರಕ್ಷಿಸುವನು' ಎನ್ನುತ್ತಿದ್ದರು. ಒಮ್ಮೆ ಮಕ್ಕಾದ ದೇವಭವನದಲ್ಲಿ (ಕಅಬಾ) ಪ್ರವಾದಿವರ್ಯರು ಪ್ರಾರ್ಥನೆಯಲ್ಲಿ ನಿರತರಾಗಿದ್ದಾಗ, ಅವರ ವಿರೋಧಿಯೊಬ್ಬ ಹಿಂದಿನಿಂದ ಬಂದು ಪ್ರವಾದಿವರ್ಯರ (ಸ) ಕೊರಳನ್ನು ರುಮಾಲಿನಿಂದ ಬಿಗಿದು ಅವರ ಕೊಲೆಗೆ ಯತ್ನಿಸಿದ. ಸರಿಯಾದ ಸಮಯಕ್ಕೆ ಪ್ರವಾದಿವರ್ಯರ (ಸ) ಆಪ್ತ ಅಬೂಬಕರ್ (ರ) ಬಂದು, ವಿರೋಧಿಯ ಹಿಡಿತದಿಂದ ಪ್ರವಾದಿವರ್ಯರನ್ನು ರಕ್ಷಿಸಿದರು.

ಪ್ರವಾದಿವರ್ಯರ (ಸ) ಅನುಯಾಯಿಗಳಿಗೂ ಇದೇ ರೀತಿಯ ಚಿತ್ರಹಿಂಸೆಗಳನ್ನು ನೀಡಲಾಗುತ್ತಿತ್ತು. ಅವರ ಪೈಕಿ ಕೆಲವರನ್ನು ಅರೇಬಿಯಾದ ಸುಡುಬಿಸಿಲಿನಲ್ಲಿ ಬರಿಮೈಯಲ್ಲಿ ಮಲಗಿಸಿ, ಅವರ ಎದೆಯ ಮೇಲೆ ಭಾರವಾದ ಕಲ್ಲುಗಳನ್ನಿಟ್ಟು ಅವರಿಗೆ ತೀವ್ರತರದ ಹಿಂಸೆ ನೀಡಲಾಗುತ್ತಿತ್ತು. ಮಹಿಳಾ ಅನುಯಾಯಿಗಳನ್ನು ನಗ್ನವನ್ನಾಗಿಸಿ ಅವರನ್ನು ಅಪಮಾನಕ್ಕೀಡು ಮಾಡಲಾಗುತ್ತಿತ್ತು. ಪ್ರವಾದಿವರ್ಯರ ಸಂಗಾತಿಗಳಾಗಿದ್ದ ಈ ಸತ್ಯವಿಶ್ವಾಸಿಗಳು, ಮಕ್ಕಾದ ಕುರೈಷ್ ನಾಯಕರ ಕೈಯಲ್ಲಿ ಎಲ್ಲ ರೀತಿಯ ಚಿತ್ರಹಿಂಸೆ–ದೌರ್ಜನ್ಯಗಳನ್ನು ಅನುಭವಿಸಿತ್ತಲೇ ಇಸ್ಲಾಮಿನ ಮೇಲೆ ತಾವಿಟ್ಟಿರುವ ದೃಢವಿಶ್ವಾಸವನ್ನು ಸಾಬೀತುಪಡಿಸಿದರು. ಸರ್ವಶಕ್ತನ ಏಕದೇವನ ಮೇಲೆ ಅವರಿಟ್ಟಿರುವ ವಿಶ್ವಾಸ ದಿನೇದಿನೇ ಹೆಚ್ಚುತ್ತಿತ್ತೇ ವಿನಃ ಅವರ ಪೈಕಿ ಯಾರೊಬ್ಬರೂ ಕುರೈಷರ ದೌರ್ಜನ್ಯಕ್ಕೆ ಬೆದರಿ ಇಸ್ಲಾಮನ್ನು ತೊರೆಯಲಿಲ್ಲ.

ಪ್ರವಾದಿವರ್ಯರ ತಂದ ದೇವಸಂದೇಶದ ಅನುಯಾಯಿಗಳಾಗಿದ್ದ ಸತ್ಯವಿಶ್ವಾಸಿಗಳ ಮೇಲೆ ಕುರೈಷ್ ನಾಯಕರುಗಳ ಹಿಂಸೆ–ದೌರ್ಜನ್ಯಗಳು ಮಿತಿಮೀರತೊಡಗಿದಾಗ, ಪ್ರವಾದಿವರ್ಯರ (ಸ) ಸಲಹೆಯನುಸಾರ ಅವರಲ್ಲನೇಕರು ಕ್ರೈಸ್ತ ದೊರೆ ನಜ್ಜಾಶಿಯ ಆಡಳಿತವಿದ್ದ ಇಥಿಯೋಪಿಯಾದ ಕಡೆಗೆ ವಲಸೆ ಹೋದರು. ದೊರೆ ನಜ್ಜಾಶಿ ಮಕ್ಕಾದ ನವಮುಸ್ಲಿಮರಿಗೆ ಆಶ್ರಯವಿತ್ತರು. ಕುರೈಷರ ಸಹವಾಸವೇ ಬೇಡವೆಂದು ಬಹದೂರ ವಲಸೆ ಹೋದರೂ, ಅಲ್ಲಿಯೂ ಬೆಂಬಿಡದ ವಿರೋಧಿಗಳು ಇಥಿಯೋಪಿಯಾದ ರಾಜನಾಸ್ಥಾನಕ್ಕೆ

ತಲುಪಿ, 'ನಿಮ್ಮ ಬಳಿ ಆಶ್ರಯಕೋರಿ ಬಂದಿರುವ ಜನರು ತಮ್ಮ ತಂದೆ–ಮುತ್ತಾತಂದಿರ ಪ್ರಾಚೀನ ಧರ್ಮವನ್ನು ತೊರೆದು, ಹೊಸ ಧರ್ಮದ ಅನುಯಾಯಿಗಳಾಗಿ ಬದಲಾಗಿರುವರು. ಅವರು ಅನುಸರಿಸುತ್ತಿರುವ ಆ ಹೊಸ ಧರ್ಮ ನಿಮ್ಮ ಕ್ರೈಸ್ತಧರ್ಮದ ವಿರೋಧಿ ಸಿದ್ಧಾಂತವನ್ನೂ ಹೊಂದಿರುವುದು. ಆದುದರಿಂದ ನೀವು ಅವರಿಗೆ ನೀಡಿದ ಆಶ್ರಯವನ್ನು ಹಿಂಪಡೆದು ಅವರೆಲ್ಲರನ್ನೂ ನಮ್ಮೊಂದಿಗೆ ವಾಪಾಸ್ಸು ಕಳಿಸಬೇಕು' ಎಂದು ಭಿನ್ನವಿಸತೊಡಗಿದರು.

ನಜ್ಜಾಶಿ ರಾಜ ತನ್ನ ಬಳಿ ಆಶ್ರಯಕೋರಿ ಬಂದ ಮುಸ್ಲಿಮ್ ವಲಸಿಗರನ್ನು ಆಸ್ಥಾನಕ್ಕೆ ಕರೆಸಿಕೊಂಡು, 'ನಿಮ್ಮ ಮೇಲೆ ಮಾಡಲಾಗುತ್ತಿರುವ ಸತ್ಯಾಂಶವೇನು?' ಎಂದು ಕೇಳಿದರು. ವಲಸಿಗರ ಪರವಾಗಿ ಜಾಅಫರ್ (ರ) ಎದ್ದುನಿಂತು, 'ಮಹಾರಾಜರೇ! ನಾವೊಂದು ಅಜ್ಞಾನಿ ಜನಾಂಗದವರೂ, ಮೂರ್ತಿಗಳ ಆರಾಧಕರೂ ಆಗಿದ್ದೆವು. ಸದಾ ಅಶ್ಲೀಲ ಮತ್ತು ಕೆಡುಕಿನ ಕಾರ್ಯಗಳಲ್ಲಿ ಮಗ್ನರಾಗಿರುತ್ತಿದ್ದೆವು. ಹೆಣ್ಣು ಮಕ್ಕಳನ್ನು ಜೀವಂತವಾಗಿ ಹೂಳುವ ಅಮಾನವೀಯ ಪದ್ಧತಿ ನಮ್ಮಲ್ಲಿ ಸರ್ವೇ ಸಾಮಾನ್ಯವಾಗಿತ್ತು. ಶರಾಬು–ಜೂಜು ಇವೆಲ್ಲವೂ ನಮ್ಮ ದಿನನಿತ್ಯ ಬದುಕಿನ ಭಾಗವಾಗಿದ್ದವು. ಒಟ್ಟಾರೆ ಎಲ್ಲ ರೀತಿಯ ಸಾಮಾಜಿಕ–ನೈತಿಕ ಕೆಡುಕುಗಳು ನಮ್ಮಲ್ಲಿ ಬೇರೂರಿದ್ದವು. ಇಂತಹ ಸ್ಥಿತಿಯಲ್ಲಿ ದೇವನು ನಮಗಾಗಿ ನಮ್ಮ ನಡುವಿನಿಂದಲೇ ಓರ್ವ ಸಂದೇಶವಾಹಕನನ್ನು ಕಳಿಸಿದನು. ಅವರ ಸಜ್ಜನಿಕೆ ಪ್ರಾಮಾಣಿಕತೆ ಬಗ್ಗೆ ನಮಗೆ ಈ ಮೊದಲೇ ತಿಳಿದಿತ್ತು. ಅವರು ನಮ್ಮನ್ನು ಈ ಎಲ್ಲಾ ಕೆಡುಕಿನಿಂದ ತಡೆದರು. ದೇವನು ಮೆಚ್ಚುವ ಹಾಗೆ ಬದುಕುವ ಒಳಿತಿನ ದಾರಿಯನ್ನು ತೋರಿಸಿದರು.' ಇದೆಲ್ಲವನ್ನೂ ಮೌನವಾಗಿ ಆಲಿಸಿದ ನಜ್ಜಾಶಿ ರಾಜ, 'ತಮ್ಮ ನೆಲದಲ್ಲಿ ತುಳಿತಕ್ಕೊಳಗಾಗಿ, ನನ್ನ ಆಶ್ರಯ ಕೋರಿ ವಲಸೆ ಬಂದ ಈ ಜನರಿವರು. ಇವರನ್ನು ಇಲ್ಲಿಂದ ಹೊರದಬ್ಬುವುದಂತೂ ಸಾಧ್ಯವಿಲ್ಲದ ಮಾತು.' ಎಂದು ಖಡಾಖಂಡಿತವಾಗಿ ಹೇಳಿದರು. ನಜ್ಜಾಶಿ ರಾಜರ ಈ ಉತ್ತರವನ್ನು ಕೇಳಿದ ಕುರೈಷ್ಣ ರಾಯಭಾರಿಗಳಿಗೆ ಭಾರೀ ಮುಖಭಂಗವುಂಟಾಯಿತು. ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಅವರು ಸಪ್ಪೆಮೋರೆ ಹಾಕಿಕೊಂಡು ವಾಪಾಸ್ಸು ತೆರಳಬೇಕಾಯಿತು.

ಮುಸಲ್ಮಾನರು ಇಥಿಯೋಪಿಯಾ ತೆರಳಿದ ಬಳಿಕವೂ ಪ್ರವಾದಿವರ್ಯರು (ಸ) ದೇವಸಂದೇಶವನ್ನು ಜನರಿಗೆ ತಲುಪಿಸುವ ಮಹತ್ಕಾರ್ಯವನ್ನು ನಿರಂತರವಾಗಿ

ಮುಂದುವರಿಸಿಕೊಂಡು ಹೋದರು. ಈ ತನ್ಮಧ್ಯೆ ಮಕ್ಕಾದ ಇಬ್ಬರು ಮಹಾನ್ ವ್ಯಕ್ತಿಗಳು ಇಸ್ಲಾಮ್ ಸ್ವೀಕರಿಸಿದರು. ಮೊದಲನೆಯವರು ಖುದ್ದು ಪ್ರವಾದಿವರ್ಯರ ಚಿಕ್ಕಪ್ಪರೂ, ಬಹಳ ಪ್ರಭಾವಶಾಲಿಯೂ ಆದ ಹಂಝ (ರಝಿಯಲ್ಲಾಹು ಅನ್ ಹು– ದೇವನು ಅವರಿಂದ ಸಂಪ್ರೀತನಾಗಲಿ). ಎರಡನೆಯವರು ಮಹಾಧೈರ್ಯಶಾಲಿ ವ್ಯಕ್ತಿ ಉಮರ್ (ರ). ಉಮರ್ (ರ) ಇಸ್ಲಾಮ್ ಸ್ವೀಕಾರಕ್ಕೂ ಮೊದಲು ಪ್ರವಾದಿವರ್ಯರ ಕಡುವೈರಿಯಾಗಿದ್ದವರು. ಕೈಯಲ್ಲಿ ನಗ್ನ ಖಡ್ಗವನ್ನು ಹಿಡಿದು ಪ್ರವಾದಿವರ್ಯರನ್ನು ಕೊಲ್ಲಲು ಹೊರಟಿದ್ದವರು. ಕುರ್ ಆನಿನ ಕೆಲವು ಸೂಕ್ತಗಳನ್ನು ಕೇಳಿಸಿಕೊಂಡ ಬಳಿಕ, ಹೃದಯ ಪರಿವರ್ತನೆಯಾಗಿ ಸತ್ಯವಿಶ್ವಾಸವನ್ನು ಸ್ವೀಕರಿಸಿದರು. ಕೆಲವೇ ಕೆಲವು ವರ್ಷಗಳಲ್ಲಿ ಪ್ರವಾದಿವರ್ಯರ ಅತ್ಯಂತ ಆಪ್ತಬಳಗದಲ್ಲಿ ಒಬ್ಬರೆನಿಸಿದರು.

ಇದಾದ ಕೆಲವೇ ದಿನಗಳಲ್ಲಿ ಪ್ರವಾದಿವರ್ಯರ ದೊಡ್ಡಪ್ಪ ಅಬೂತಾಲಿಬ್ ರು ಮರಣ ಹೊಂದಿದರು. ಅವರ ಮರಣದ ಬಳಿಕ ಕುರೈಷರ ವೈರತ್ವ ಎಲ್ಲೆ ಮೀರತೊಡಗಿತು. ಮಕ್ಕಾದ ಕುರೈಷರ ವೈರತ್ವದಿಂದ ಬೇಸತ್ತು ಪ್ರವಾದಿವರ್ಯರು ತಾಯಿಫ್ ನೆಡೆಗೆ ವಲಸೆ ಹೋಗಲು ಬಯಸಿದರು. ತಾಯಿಫ್ ನ ಜನರ ಬಳಿ ಕುರೈಷರು ಈ ಮೊದಲೇ ಪ್ರವಾದಿವರ್ಯರ ಕುರಿತು ಇಲ್ಲಸಲ್ಲದ ಅಪಪ್ರಚಾರ ಹರಡಿ ಬಿಟ್ಟಿದ್ದರು. **ಏಕದೇವತ್ವದ ಮತ್ತು ತನ್ನ ಪ್ರವಾದಿತ್ವ ಮತ್ತು ಪರಲೋಕದ ಸಂದೇಶವನ್ನು ತಲುಪಿಸುವ ಸಲುವಾಗಿ** ಪ್ರವಾದಿವರ್ಯರು (ಸ) ತಾಯಿಫ್ ಗೆ ತಲುಪಿದರು. ಜನರನ್ನುದ್ದೇಶಿಸಿ ಸಂದೇಶವನ್ನು ನೀಡುತ್ತಿರುವಾಗಲೇ, (ಈ ಮೊದಲೇ ಮುಹಮ್ಮದರ ಕುರಿತು ಹರಡಲಾಗಿದ್ದ ಅಪಪ್ರಚಾರವನ್ನು ನಂಬಿದ್ದ) ತಾಯಿಫ್ ಜನರು ಪ್ರವಾದಿವರ್ಯರ ಮೇಲೆ ಕ್ರೋಧಿತರಾಗಿ, ಅವರೊಂದಿಗೆ ದುರ್ವರ್ತನೆ ತೋರಿದ್ದಲ್ಲದೇ, ತಾಯಿಫ್ ನಿಂದ ನಿರ್ದಾಕ್ಷಿಣ್ಯವಾಗಿ ಅವರನ್ನು ಹೊರಗಟ್ಟಿದರು.

ಮಕ್ಕಾ ನಗರಕ್ಕೆ ವಾಪಾಸ್ಸಾಗುವಾಗ ಕುರೈಷ್ ಸರದಾರರು ಪ್ರವಾದಿವರ್ಯರನ್ನು ಮಕ್ಕಾವನ್ನು ಪ್ರವೇಶಿಸದಂತೆ ತಡೆದರು. ಆದರೆ ಮುತ್ಇಮ್ ಹೆಸರಿನ ವ್ಯಕ್ತಿಯೋರ್ವರು ಕುರೈಷ್ ಸರದಾರರ ದೌರ್ಜನ್ಯದ ವಿರುದ್ಧ ಅವರನ್ನು ಶಪಿಸುತ್ತಾ, ತನ್ನ ವತಿಯಿಂದ ಪ್ರವಾದಿವರ್ಯರಿಗೆ ಆಶ್ರಯ ನೀಡಿ ಮಕ್ಕಾ ನಗರಕ್ಕೆ ವಾಪಾಸು ಪ್ರವೇಶಿಸುವಂತೆ

ನೋಡಿಕೊಂಡರು. ಕೆಲವು ದಿನಗಳ ಬಳಿಕ ತನಗೆ ಆಶ್ರಯ ನೀಡಿದ ಕಾರಣಕ್ಕಾಗಿ ಕುರೈಷ್ ಸರದಾರರು ಮುತ್‌ಇಮ್ ರಿಗೂ ತೀವ್ರ ಕಿರುಕುಳ ನೀಡುತ್ತಿರುವುದನ್ನು ನೋಡಿದ ಪ್ರವಾದಿವರ್ಯರು (ಸ) ಮುತ್ ಇಮ್ರ ಬಳಿ ತೆರಳಿ, 'ನನಗೆ ಆಶ್ರಯ ನೀಡಿದ ಒಂದೇ ಕಾರಣಕ್ಕಾಗಿ ವಿರೋಧಿಗಳಿಂದ ನೀವು ಸತಾಯಿಸಲ್ಪಡುತ್ತಿರುವುದು ನನಗೆ ಸರಿ ಕಾಣುತ್ತಿಲ್ಲ. ಸರ್ವಶಕ್ತ ದೇವನೇ ನನ್ನ ನೈಜ ಸಂರಕ್ಷಕನು. ನನ್ನ ರಕ್ಷಣೆಗೆ ಅವನೇ ಸಾಕು. ನೀವು ಕುರೈಷರ ಸರದಾರರ ಬಳಿ ನಿಮ್ಮ ಆಶ್ರಯವನ್ನು ಹಿಂಪಡೆದಿರುವುದಾಗಿ ಹೇಳಿಬಿಡಿರಿ. ನನ್ನ ಕುರಿತು ಚಿಂತಿಸದಿರಿ' ಎಂದರು.

ಪ್ರವಾದಿವರ್ಯರು (ಸ) ತನ್ನ ಸಂದೇಶಪ್ರಚಾರದ ಕಾರ್ಯದಲ್ಲಿ ಹಗುಲಿರುಳೂ ಮಗ್ನರಾದರು. ಕುರೈಷ್ ಸರದಾರರು ಕಅಬಾದ ಸಂದರ್ಶನಕ್ಕಾಗಿ ಬರುವ ಪ್ರವಾಸಿಗರ ಬಳಿ ಪ್ರವಾದಿ ಮುಹಮ್ಮದ್ ಜಾದೂಗಾರ, ಅವರ ಮಾತಿಗೆ ಕಿವಿಕೊಟ್ಟವರು ಅವರ ಜಾದೂಗೆ ಬಲಿಯಾಗುವರು ಎಂಬೆಲ್ಲಾ ಅಪಪ್ರಚಾರವನ್ನು ಹರಡಿದ್ದರು. ಮಕ್ಕಾದ ಬಹುದೇವವಿಶ್ವಾಸಿಗಳು ಮಾಡಿದ್ದ ಅಪಪ್ರಚಾರದ ಕಾರಣದಿಂದ ಪುರ್ಖೈಲ್ ಎಂಬ ಕಅಬಾ ಸಂದರ್ಶನಕ್ಕಾಗಿ ಬಂದ ವ್ಯಕ್ತಿ, 'ಎಲ್ಲಿ ಮುಹಮ್ಮದರು ತನಗೆ ಜಾದೂ ಮಾಡುವರೋ' ಎಂದು ಹೆದರಿ ಪ್ರತಿಬಾರಿ ಕಅಬಾ ಭವನಕ್ಕೆ ಬರುವಾಗ ಕಿವಿಗೆ ಹತ್ತಿಯನ್ನು ತುರುಕಿಸಿಕೊಂಡು ಬರುತ್ತಿದ್ದರು. ಒಂದು ದಿನ ಹತ್ತಿಯನ್ನು ತುರುಕಿಸಿಕೊಂಡು ಬರುವುದನ್ನು ಮರೆತರು. ಅಂದು ಪ್ರವಾದಿವರ್ಯರು ಕಅಬಾದಲ್ಲಿ ನಿಂತು ಕುರ್ ಆನ್ ಪಠಿಸುತ್ತಿದ್ದರು. ಕುರ್ ಆನ್ ಪಠಣವನ್ನು ಕೇಳಿ, 'ಇದು ದೇವವಾಣಿಯೇ ಹೊರತು ಯಾರದೇ ಜಾದೂ–ಮಂತ್ರವಾಗಲು ಸಾಧ್ಯವಿಲ್ಲ. ಮುಹಮ್ಮದರ ಮೇಲೆ ಮಾಡಿದ ಆರೋಪ ಸತ್ಯಕ್ಕೆ ದೂರವಾದುದು' ಎಂಬುದನ್ನು ಅರಿತು ಸ್ವ–ಇಚ್ಛೆಯಿಂದ ಇಸ್ಲಾಮ್ ಅನ್ನು ಸ್ವೀಕರಿಸಿ ಸತ್ಯವಿಶ್ವಾಸಿಗಳ ಬಣದಲ್ಲಿ ಸೇರಿಕೊಂಡರು. ಕಅಬಾ ಭವನ ಸಂದರ್ಶನಕ್ಕಾಗಿ ಬರುವ ಪ್ರವಾಸಿಗರು, ಉಮ್ರಾ–ಹಜ್ಜ್ ಯಾತ್ರೆಗಾಗಿ ಸೇರುವ ಯಾತ್ರಾರ್ಥಿಗಳು ಮತ್ತು ವ್ಯಾಪಾರಿಗಳು ಇವರೆಲ್ಲರ ತಂಡಗಳ ಬಳಿ ಹೋಗಿ ದೇವಸಂದೇಶವನ್ನು ತಲುಪಿಸುವುದು ಪ್ರವಾದಿವರ್ಯರ ದಿನನಿತ್ಯದ ಕಾರ್ಯವಾಗಿತ್ತು. ಅವರೆಲ್ಲರೂ ಸತ್ಯವನ್ನು ಸ್ವೀಕರಿಸಿ, ಸಜ್ಜನರಾಗಲಿ ಎಂಬುದೇ ಅವರ ಉದ್ದೇಶವಾಗಿತ್ತು. ಇದೇ ರೀತಿ ಒಮ್ಮೆ ಪ್ರವಾದಿವರ್ಯರು (ಸ)

ಪ್ರವಾಸಿತಂಡಗಳ ನಡುವೆ ದೇವಸಂದೇಶದ ಸಾರವನ್ನು ವಿವರಿಸುತ್ತಿದ್ದ ಸಂದರ್ಭ, ಮದೀನಾದಿಂದ ಬಂದ ಪ್ರವಾಸಿ ತಂಡವು ಅವರ ಮಾತುಗಳನ್ನು ಕಿವಿಗೊಟ್ಟು ಆಲಿಸುತ್ತಿತ್ತು. ಪ್ರವಾದಿವರ್ಯರ (ಸ) ನೀಡಿದ ದೇವಸಂದೇಶದ ಸಾರವನ್ನು ಕೇಳಿ, ಸತ್ಯವನ್ನರಿತ ಮದೀನಾದ ಪ್ರವಾಸಿ ತಂಡದಲ್ಲಿದ ಅಷ್ಟೂ ಜನರು ಇಸ್ಲಾಮ್ ಸ್ವೀಕರಿಸಿ ಪ್ರವಾದಿವರ್ಯರ (ಸ) ಅನುಯಾಯಿಗಳಾಗಿ ಮಾರ್ಪಟ್ಟರು. ಅವರು ತಮ್ಮೊಂದಿಗೆ ಪ್ರವಾದಿವರ್ಯರ (ಸ) ಅನುಯಾಯಿಯೋರ್ವರನ್ನು ಮದೀನಾದಲ್ಲಿ ದೇವಸಂದೇಶವನ್ನು ಸಾರಲಿಕ್ಕಾಗಿ ಕರೆದೊಯ್ದರು. ದೇವನನುಗ್ರಹದಿಂದ ದೇವಸಂದೇಶವನ್ನಾಲಿಸಿದ ಮದೀನಾವಾಸಿಗಳಲ್ಲನೇಕರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ, ಪ್ರವಾದಿವರ್ಯರ ಅನುಯಾಯಿಗಳಾಗಿ ಮಾರ್ಪಟ್ಟರು. ಕೆಲವು ದಿನಗಳ ಬಳಿಕ ಮದೀನಾದ ಒಂದು ತಂಡ ಪ್ರವಾದಿ ಮುಹಮ್ಮದರ ಬಳಿ ಬಂದು, **'ತಾವು ತಮ್ಮೆಲ್ಲ ಅನುಯಾಯಿಗಳೊಂದಿಗೆ ಮದೀನಾಕ್ಕೆ ಬಂದು ನೆಲೆಸಿ ಮದೀನಾವನ್ನು ದೇವಸಂದೇಶದ ಕೇಂದ್ರವನ್ನಾಗಿಸಿಕೊಳ್ಳಬೇಕು.ನಿಮಗಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು'** ಎಂದು ಭಿನ್ನವಿಸಿಕೊಂಡಿತು. ಮದೀನಾವಾಸಿಗಳ ಆಹ್ವಾನದ ಮೇರೆಗೆ ಮುಸ್ಲಿಮರು ಮತ್ತು ಪ್ರವಾದಿವರ್ಯರು (ಸ) ತಮ್ಮ ತವರು ಮಕ್ಕಾನಗರವನ್ನು ತೊರೆದು ಮದೀನಾಕ್ಕೆ ವಲಸೆ ಬಂದರು. ಮದೀನಾವಾಸಿಗಳು ಪ್ರವಾದಿವರ್ಯರು (ಸ) ಮತ್ತು ಅವರ ಮಕ್ಕಾದ ಸಂಗಾತಿಗಳನ್ನು ಮದೀನಾದ ಪ್ರವೇಶದ್ವಾರದಲ್ಲಿ ನಿಂತು ತುಂಬು ಹೃದಯದೊಂದಿಗೆ ಭವ್ಯವಾಗಿ ಸ್ವಾಗತಿಸಿದರು. ಮಕ್ಕಾದ ಸತ್ಯವಿಶ್ವಾಸಿ ವಲಸಿಗರಿಗೆ ಅವರು ತಮ್ಮ ಮನೆಯಲ್ಲಿ ಉಳಿದುಕೊಳ್ಳಲು ಜಾಗಕೊಟ್ಟರು. ತಮ್ಮ ಕೃಷಿ ಭೂಮಿಯಲ್ಲಿ ಪಾಲು ಕೊಟ್ಟರು. ಮಕ್ಕಾದ ವಲಸಿಗ ವಿಶ್ವಾಸಿಗರು (ಮುಹಾಜಿರರು) ತಮ್ಮ ರಕ್ತಸಂಬಂಧಿಗಳೋ ಎಂಬಂತೆ ಮದೀನಾ ವಾಸಿಗಳಾದ ಅನ್ಸಾರರು ಪ್ರತಿಯೊಂದು ವಿಷಯದಲ್ಲೂ ಸಹಾಯಹಸ್ತ ನೀಡುವ ಮೂಲಕ ಕೊಟ್ಟ ಮಾತಿನಂತೆ ಸೋದರತ್ವದ ಸಬೂತು ನೀಡಿದರು.

ಪ್ರವಾದಿವರ್ಯರು ಮೊದಲು ಮದೀನಾದಿಂದ ಮೂರು ಮೈಲು ದೂರದ ಕುಬಾ ಎಂಬ ಪ್ರದೇಶದಲ್ಲಿ ಕೆಲವು ದಿನಗಳ ಮಟ್ಟಿಗೆ ತಂಗಿದ್ದರು. ಆ ಬಳಿಕ ಕಾಲ್ನಡಿಗೆಯಲ್ಲಿ ಬಂದ ಅಲಿ (ರ) ಕೂಡ ಅಲ್ಲಿಗೆ ತಲುಪಿದರು. ಕುಬಾದಲ್ಲಿ ನಮಾಝ್ ಗಾಗಿ ಪ್ರವಾದಿವರ್ಯರ (ಸ)

ಆದೇಶದಂತೆ ಮೊತ್ತ ಮೊದಲ ಮಸೀದಿಯನ್ನು ನಿರ್ಮಿಸಲಾಯಿತು. ಮಸೀದಿ ನಿರ್ಮಾಣದಲ್ಲಿ ತಮ್ಮ ಸಹಚರರೊಂದಿಗೆ ಖುದ್ದು ಪ್ರವಾದಿವರ್ಯರೂ (ಸ) ಕಾರ್ಮಿಕನಂತೆ ದುಡಿದರು. ಕೆಲವು ದಿನಗಳ ಬಳಿಕ ಮದೀನಾ ವಾಸಿಗಳ ಒತ್ತಾಯದ ಮೇರೆಗೆ ಪ್ರವಾದಿವರ್ಯರು (ಸ) ತಮ್ಮ ವಾಸಸ್ಥಾನವನ್ನು ಮದೀನಾಕ್ಕೆ ಬದಲಾಯಿಸಲು ನಿರ್ಧರಿಸಿದರು. ಪ್ರವಾದಿವರ್ಯರ (ಸ) ತನ್ನ ಸವಾರಿಯ ಒಂಟೆ ಎಲ್ಲಿ ಕೂರುವುದೋ ಅಲ್ಲಿಯೇ ತಾನು ಉಳಿದುಕೊಳ್ಳುವುದಾಗಿ ನಿರ್ಧರಿಸಿದರು. ಅವರ ಸವಾರಿಯಿದ್ದ ಒಂಟೆಯು ಅಬು ಅಯ್ಯೂಬ್ ಅನ್ಸಾರಿ (ರ) ಯವರ ಮನೆಯ ಮುಂದೆ ಕುಳಿತುಬಿಟ್ಟಿತು. ಆ ಪ್ರಕಾರ ಪ್ರವಾದಿವರ್ಯರು ಕೆಲವು ದಿನಗಳ ಮಟ್ಟಿಗೆ ಅಬುಅಯ್ಯೂಬ್ ಅನ್ಸಾರಿಯವರ ಮನೆಯಲ್ಲೇ ತಂಗಿದರು. ಮದೀನಾದಲ್ಲಿ ಮಸೀದಿಯ ನಿರ್ಮಾಣಕ್ಕಾಗಿ ಪ್ರವಾದಿವರ್ಯರಿಗೆ (ಸ) ಉಚಿತವಾಗಿ ಭೂಮಿ ದೊರೆತರೂ, ಅದು ಅನಾಥರ ಸೊತ್ತಾದ್ದರಿಂದ ಹಝ್ರತ್ ಅಬೂಬಕರ್ (ರ) ಮುಖಾಂತರ ಅದಕ್ಕೆ ಸೂಕ್ತ ಬೆಲೆಯನ್ನು ಪಾವತಿಸಿ ಭೂಮಿಯನ್ನು ಖರೀದಿಸಿದರು. ಆ ಬಳಿಕ ಅವರು (ಸ) ತನ್ನ ಇತರ ಸಹಚರರೊಂದಿಗೆ ಸೇರಿ ಮಸೀದಿಯನ್ನು ನಿರ್ಮಿಸಿದರು. ಪ್ರವಾದಿತ್ವ ದೊರೆತ 13 ವರ್ಷಗಳ ಬಳಿಕ, ಶತ್ರುಗಳ ಯಾವುದೇ ಭಯ–ಭೀತಿ ಇಲ್ಲದೆ ಎಲ್ಲರೂ ಸೇರಿ ಸಾಮೂಹಿಕ ನಮಾಝನ್ನು ನಿರ್ವಹಿಸುವ ಶಾಂತಿಯುತ ವಾತಾವರಣ ಅಲ್ಲೀಗ ನಿರ್ಮಾಣವಾಯಿತು. ಪ್ರತಿ ಶುಕ್ರವಾರ ಪ್ರವಾದಿವರ್ಯರ (ಸ) ಪ್ರವಚನದೊಂದಿಗೆ ಜುಮಃ ನಮಾಝ್ ಅನ್ನು ನಿರ್ಭೀತಿಯಿಂದ ನಿರ್ವಹಿಸುವ ಸೌಭಾಗ್ಯ ಕೂಡ ಅಲ್ಲೀಗ ಮುಸ್ಲಿಮರಿಗೆ ದೊರೆಯಿತು.

ಮಕ್ಕಾದಲ್ಲಿ ತಮ್ಮ ಮನೆ, ಸೊತ್ತು–ಸಂಪತ್ತನ್ನು ತೊರೆದು ಉಟ್ಟ ಬಟ್ಟೆಯಲ್ಲಿ ಮದೀನಾಕ್ಕೆ ಬಂದಿದ್ದ ಮಕ್ಕಾದ ಮುಹಾಜಿರ್ ಮುಸ್ಲಿಮರಿಗೆ ಮದೀನಾದಲ್ಲಿ ವಾಸಿಸಲು ಮತ್ತು ತೃಪ್ತಿಕರ ಜೀವನ ಸಾಗಿಸಲು ಬೇಕಾದ ಸಕಲ ಅನುಕೂಲಗಳನ್ನು ಮಾಡಿಕೊಡಲಾಯಿತು. ಮದೀನಾದ ಪರಿಸರದಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಅಲ್ಲಿನ ಯಹೂದಿಗಳೊಂದಿಗೆ ಪ್ರವಾದಿವರ್ಯರು (ಸ) ಒಡಬಂಡಿಕೆ ಮಾಡಿಕೊಂಡು, ಅವರೊಂದಿಗೆ ಸ್ನೇಹ–ಸಂಬಂಧದ ಹಸ್ತವನ್ನು ಚಾಚಿದರು. ಆದರೆ, ಯಹೂದಿಗಳು ತಾವು ಮಾಡಿಕೊಂಡ ಒಡಂಬಡಿಕೆಯಲ್ಲಿ ಬದ್ಧತೆಯನ್ನು ತೋರಲಿಲ್ಲ. ಬದಲಿಗೆ, ಮುಸ್ಲಿಮರ ವಿರುದ್ಧ ಕುತಂತ್ರಗಳನ್ನು ಮಾಡುತ್ತಾ,

ಮುಸ್ಲಿಮರ ವಿರೋಧಿಗಳೊಂದಿಗೆ ಕೈ ಜೋಡಿಸುವ ಮೂಲಕ ಸಾಕಷ್ಟು ಮುಸ್ಲಿಮರ ಸಾವು–ನೋವುಗಳಿಗೆ ಕಾರಣರಾದರು ಎಂಬುದು ಬೇರೆ ಮಾತು.

ಮುಸ್ಲಿಮರು ಈಗ ಮದೀನಾದಲ್ಲಿ ಶಾಂತಿಯುತ ಜೀವನವನ್ನು ಸಾಗಿಸತೊಡಗಿದರು. ಮುಸ್ಲಿಮರ ಕಡುವೈರಿಗಳಾಗಿದ್ದ ಮಕ್ಕಾದ ಕುರೈಷರಿಗೆ ಮದೀನಾದಲ್ಲಿ ಮುಸ್ಲಿಮರು ನೆಮ್ಮದಿಯ ಜೀವನ ನಡೆಸುತ್ತಿರುವುದನ್ನು ಕೇಳಿ ಸಹಿಸಲಾಗಲಿಲ್ಲ. ಕುರೈಷರು ತಮಗೆ ಸಾಧ್ಯವಿದ್ದರೆ, ಈ ಭೂಮಿಯಲ್ಲಿ ಮುಸ್ಲಿಮರ ಅಸ್ತಿತ್ವವೇ ಇಲ್ಲದಂತೆ ಅವರನ್ನು ಸಂಪೂರ್ಣ ನಿರ್ನಾಮ ಮಾಡಬೇಕು ಎಂದೇ ಬಯಸಿದ್ದರು. ಮದೀನಾದಲ್ಲಿ ಅಬ್ದುಲ್ಲಾ ಎಂಬ ಹೆಸರಿನ ವ್ಯಕ್ತಿಯೋರ್ವ ಪ್ರವಾದಿವರ್ಯರ (ಸ) ದಿನೇ ದಿನೇ ಹೆಚ್ಚುತ್ತಿರುವ ಪ್ರಸಿದ್ಧಿಯಿಂದಾಗಿ ಅಸೂಯೆಗೊಳಗಾಗಿದ್ದ. ಅವನ ಅಂತರಂಗದಲ್ಲಿ ಪ್ರವಾದಿವರ್ಯರ (ಸ) ಕುರಿತು ಕಡುದ್ವೇಷ ತುಂಬಿತ್ತು. ಈ ಕುರಿತು ಮಾಹಿತಿ ಪಡೆದ ಮಕ್ಕಾದ ಕುರೈಷ್ ಸರದಾರರು, ಪತ್ರದ ಮೂಲಕ, 'ಆದಷ್ಟು ಮುಹಮ್ಮದರನ್ನು ಮದೀನಾದಿಂದ ಹೊರಗಟ್ಟುವಂತೆ ಅಬ್ದುಲ್ಲಾನ ಬಳಿ ಕೇಳಿಕೊಂಡರು. ತನ್ನೊಬ್ಬನಿಂದಲೇ ಏನು ಮಾಡಲಾಗದು ಎಂದರಿತ ಅಬ್ದುಲ್ಲಾ ಮತ್ತಿನ್ನಿತರ ಮುಸ್ಲಿಮರ ವೈರಿಗಳು ಮದೀನಾದ ಹೊರಗಿನ ಬುಡಕಟ್ಟು ಜನಾಂಗಗಳಲ್ಲಿ ಮುಸ್ಲಿಮರು ಮತ್ತು ಪ್ರವಾದಿವರ್ಯರ (ಸ) ವಿರುದ್ಧ ದ್ವೇಷ ಭಾವನೆಯನ್ನು ಬಿತ್ತತೊಡಗಿದರು. ಇವರೆಲ್ಲರೂ ದೊಡ್ಡ ಮಟ್ಟದ ಸೈನ್ಯದ ರೂಪದಲ್ಲಿ ಜಮೆಯಾಗಿ ಮದೀನಾದಿಂದ ದೂರವಿರುವ ಬದ್ರ್ ಎಂಬ ಪ್ರದೇಶದಲ್ಲಿ ಮುಸ್ಲಿಮರ ವಿರುದ್ಧ ಹೋರಾಡಲು ಅಣಿಯಾದರು. ವಿಷಯ ತಿಳಿದ ಪ್ರವಾದಿವರ್ಯರು (ಸ) ವೈಯಕ್ತಿವಾಗಿ ಯುದ್ಧವನ್ನು ಬಯಸಿದಿದ್ದರೂ, ಮುಸ್ಲಿಮರ ರಕ್ಷಣೆಗಾಗಿ ಬೇರೆ ದಾರಿಯಿಲ್ಲದೆ ದೇವನೊಂದಿಗೆ ಪ್ರಾರ್ಥಿಸಿ ಮುನ್ನೂರು ಜನ ಸಹಚರರೊಂದಿಗೆ ಬದ್ರ್ ತಲುಪಿ, ವಿರೋಧಿಗಳೊಂದಿಗೆ ಹೋರಾಡಲು ಸಿದ್ಧರಾದರು. ಕೇವಲ ಮುನ್ನೂರು ಜನ ದೇವವಿಶ್ವಾಸಿ ಜನರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ, ದೇವಸಹಾಯದೊಂದಿಗೆ ಸಹಸ್ರಕ್ಕೂ ಮಿಗಿಲಾದ ಸಂಖ್ಯೆಯಿದ್ದ ವಿರೋಧಿ ಸೈನ್ಯಕ್ಕೆ ಭರ್ಜರಿ ಸೋಲುಣಿಸಿದರು. ವಿರೋಧಿ ಸೈನ್ಯದ ಅನೇಕ ಜನರು ಮುಸ್ಲಿಮರ ಸೆರೆಯಾಳುಗಳಾದರು. ಪ್ರವಾದಿವರ್ಯರು (ಸ) ತಮ್ಮ ವಿರೋಧಿ ಸೈನ್ಯದ ಸೆರೆಯಾಳುಗಳೊಂದಿಗೂ ಸದ್ವರ್ತನೆ ತೋರಿದರು. ಸಾಮರ್ಥ್ಯ ಹೊಂದಿರುವ ಕೈದಿಗಳನ್ನು

ಪರಿಹಾರ ಧನ ಪಡೆದು, ಸಾಮರ್ಥ್ಯ ವಿಲ್ಲದವರನ್ನು ಔದಾರ್ಯದ ಮೇಲೆ, ಓದು ಬರಹ ಬಲ್ಲ ಕೈದಿಗಳನ್ನು ಮುಸ್ಲಿಮರಿಗೆ ಓದು–ಬರಹವನ್ನು ಕಲಿಸಿಕೊಡುವ ಷರತ್ತಿನ ಮೇಲೆ ಪ್ರವಾದಿವರ್ಯರು (ಸ) ಬಿಡುಗಡೆ ಮಾಡಿದರು.

ಬದ್ರ್ ನ ಸೋಲು ವಿರೋಧಿಗಳಿಗೆ ಭಾರೀ ಆಘಾತವನ್ನುಂಟು ಮಾಡಿತು. ಈ ಅಪಮಾನದ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ಕುರೈಷರು ಇನ್ನೊಂದು ಬಾರಿ ಯುದ್ಧ ಮಾಡುವುದೆಂಬ ತೀರ್ಮಾನಕ್ಕೆ ಬಂದರು. ಅದಕ್ಕೆಂದೇ ಭಾರೀ ಸಿದ್ಧತೆಯನ್ನೂ ಮಾಡಿಕೊಳ್ಳತೊಡಗಿದರು. ಕುರೈಷರ ಬಳಿ ಈ ಬಾರಿ ಮೂರು ಸಾವಿರು ಯುದ್ಧಾಳುಗಳಿರುವ ಸೈನ್ಯ ಮತ್ತು ಭಾರೀ ಪ್ರಮಾಣದಲ್ಲಿ ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರಗಳು ಜಮೆಗೊಂಡವು. ಈ ಸಾರಿ ಸೈನ್ಯದಲ್ಲಿ ಭಾರೀ ಪ್ರಮಾಣದಲ್ಲಿ ಮಹಿಳೆಯರೂ ಸೇರಿಕೊಂಡರು. ಈ ರೀತಿ ಭರ್ಜರಿ ಸಿದ್ಧತೆಯೊಂದಿಗೆ ಮದೀನಾದ ಮುಸ್ಲಿಮರ ಮೇಲೆ ಕುರೈಷರ ಸೈನ್ಯ ದಂಡೆತ್ತಿ ಹೋಯಿತು.

ಈ ಬಾರಿಯೂ ಪ್ರವಾದಿವರ್ಯರಿಗೆ (ಸ) ಎದುರಾಳಿಗಳೊಂದಿಗೆ ಕದಕ್ಕಿಳಿಯುವುದನ್ನು ಬಯಸಿರಲಿಲ್ಲ. ಮುಸ್ಲಿಮರ ಒತ್ತಾಯದ ಮೇರೆಗೆ, ಅವರ ಸೊತ್ತು–ವಿತ್ತುಗಳ ರಕ್ಷಣೆಯ ಸಲುವಾಗಿ ಬೇರೆ ದಾರಿಕಾಣದೆ ಯುದ್ಧದ ಮೈದಾನಕ್ಕಿಳಿಯಬೇಕಾಯಿತು. ಮುಸ್ಲಿಮರ ಸಂಖ್ಯೆ ಕೇವಲ 700ರಷ್ಟಿತ್ತು. ಎದುರಾಳಿಗಳ ಸಂಖ್ಯೆ 3,000. ಎರಡೂ ಸೈನ್ಯಗಳ ನಡುವೆ ಘೋರ ಸಂಘರ್ಷವೇರ್ಪಟ್ಟಿತು. ಎದುರಾಳಿ ಸೈನ್ಯದ ಅನೇಕ ಯುದ್ಧಾಳುಗಳು ಗಂಭೀರವಾಗಿ ಗಾಯಗೊಂಡರು. ಮುಸ್ಲಿಮರ ಸೈನ್ಯದಲ್ಲಿಯೂ ಅನೇಕರು ಗಾಯಗೊಂಡರು. ಕೆಲವರು ಹುತಾತ್ಮರಾದರು. ಪರಸ್ಪರ ಸಂಘರ್ಷವು ಎಷ್ಟು ಘೋರವಾಗಿತ್ತೆಂದರೆ, ಖುದ್ದು ಪ್ರವಾದಿ ಮುಹಮ್ಮದರ (ಸ) ಹಣೆಗೆ ಬಲವಾದ ಆಳವಾದ ಗಾಯವಾಗಿ ತೀವ್ರ ರಕ್ತಸ್ರಾವವಾಗತೊಡಗಿತು. ಪ್ರವಾದಿವರ್ಯರು (ಸ) ಗಾಯಗೊಂಡರು ಎಂಬ ಸುದ್ದಿಯು ಮುಸ್ಲಿಮರ ಸೇನೆಯಲ್ಲಿ ಆತಂಕವನ್ನುಂಟು ಮಾಡಿದ ಕಾರಣ, ಸೇನಾಳುಗಳು ಚೆಲ್ಲಾಪಿಲ್ಲಿಯಾದರು. ಈ ಯುದ್ಧದಲ್ಲಿ ಜಯಿಸಿದ್ದಾರು?, ಸೋತವರು ಯಾರು? ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಎರಡೂ ಕಡೆಯ ಯುದ್ಧಾಳುಗಳು ಗಂಭೀರವಾಗಿ ಗಾಯಗೊಂಡದ್ದಲ್ಲದೇ ಅವರ ಪೈಕಿ ಕೆಲವರು ಹತರಾದರು. ಎರಡು ಕಡೆಯ ಸೈನ್ಯಗಳಿಗೂ ಭಾರೀ ನಷ್ಟ ಉಂಟಾಯಿತು.

ಇವೆಲ್ಲದರ ನಂತರವೂ ಪ್ರವಾದಿವರ್ಯರು (ಸ) ಆಗಸದೆಡೆಗೆ ಕೈ ಎತ್ತಿ, 'ದೇವನೇ, ಇವರು ಮಾಡಿರುವ ದೌರ್ಜನ್ಯವನ್ನು ಕ್ಷಮಿಸಿಬಿಡು. ಇವರೇನು ಮಾಡುತ್ತಿರುವರೆಂಬುದರ ಕುರಿತು ಇವರು ಖುದ್ದು ಅರಿಯರು' ಎಂದು ಪ್ರಾರ್ಥಿಸತೊಡಗಿದರು.

ಬದ್ರ್ ಯುದ್ಧದ ಬಳಿಕ ಕುರೈಷರ ಧೈರ್ಯ ಇಮ್ಮಡಿಸಿತು. ಇಸ್ಲಾಮ್ ಮತ್ತು ಮುಸ್ಲಿಮರನ್ನು ನಾವು ಸರ್ವನಾಶ ಮಾಡಿಯೇ ಸಿದ್ಧ ಎಂದವರು ಪಣ ತೊಟ್ಟರು. ಅನೇಕ ಗೋತ್ರಗಳ ಜನರ ಮೂಲಕ, 'ನಾವು ಮತ್ತುನಮ್ಮ ಗೋತ್ರದವರು ಇಸ್ಲಾಮ್ ಸ್ವೀಕಾರ ಮಾಡಿದ್ದೇವೆ. ನಮಗಾಗಿ ನಿಮ್ಮ ಕಡೆಯಿಂದ ಧರ್ಮ ಮತ್ತು ಆರಾಧನಾ ವಿಧಿಗಳನ್ನು ಕಲಿಸಲು ನಿಮ್ಮ ಕಡೆಯಿಂದ ಬೋಧಕರನ್ನು ಕಳಿಸಿರಿ' ಎಂದು ಹೇಳಿ ಕಳಿಸುತ್ತಿದ್ದರು. ಪ್ರವಾದಿವರ್ಯರು (ಸ) ಅವರ ಮಾತನ್ನು ನಂಬಿ ಧರ್ಮವನ್ನು ಕಲಿಸಿಕ್ಕಾಗಿ ತನ್ನ ಕಡೆಯಿಂದ ಬೋಧಕ–ಶಿಕ್ಷಕರನ್ನು ಕಳಿಸಿದಾಗ ವಂಚನೆಯಿಂದ ಅವರನ್ನು ವಧಿಸುತ್ತಿದ್ದರು. ಈ ರೀತಿಯ ವಂಚನೆಗಳ ಮೂಲಕ ಶತ್ರುಗಳು ಅನೇಕ ಮುಸ್ಲಿಮರ ಹತ್ಯೆ ನಡೆಸಿದರು.

ಮುಸ್ಲಿಮರ ಕಡುವೈರಿಗಳಾದ ಕುರೈಷರು ಮತ್ತವರ ಮಿತ್ರ ಗೋತ್ರಗಳು ಹಾಗೂ ಮದೀನಾದ ಕಪಟವಿಶ್ವಾಸಿಗಳು ಮತ್ತು ಯಹೂದಿಯರು ಪರಸ್ಪರ ಜೊತೆಗೂಡಿಕೊಂಡು ಮುಸ್ಲಿಮರ ವಿರುದ್ಧ ಕುತಂತ್ರಗಳನ್ನು ಹೆಣೆಯತೊಡಗಿದರು. ಈ ಕುತಂತ್ರಗಳ ಫಲವೇ ಕಂದಕ್ ಯುದ್ಧ. ಕುರೈಷರು ಈ ಬಾರಿ ಮುಸ್ಲಿಮರನ್ನು ಸರ್ವನಾಶಗೊಳಿಸಲೇಬೇಕೆಂಬ ದುರುದ್ದೇಶದೊಂದಿಗೆ ತಮ್ಮ ಮಿತ್ರಗೋತ್ರಗಳ ಜೊತೆಗೆ ಸೇರಿ ಸುಮಾರು 24,000 ಸಂಖ್ಯೆಯುಳ್ಳ ಸೈನ್ಯದೊಂದಿಗೆ ಮದೀನಾದ ಹೊರವಲಯವನ್ನು ತಲುಪಿದರು. ಆದರೆ ಈ ಬಾರಿ, ಮುಸ್ಲಿಮರು ನಿರೀಕ್ಷೆಗಿಂತ ಹೆಚ್ಚಿನ ಪರೋಕ್ಷ ಸಹಾಯವು ದೇವನ ಕಡೆಯಿಂದ ಮುಸ್ಲಿಮರಿಗೆ ಒದಗಿಬಂತು. ಇದರಿಂದಾಗಿ ಮುಸ್ಲಿಮರ ಧೈರ್ಯವೂ ನೂರ್ಮಡಿಗೊಂಡಿತು. ಮದೀನಾ ನಗರವನ್ನು ಪ್ರವೇಶಿಸದಂತೆ ತಡೆಯಲು, ಶತ್ರುಗಳು ಪ್ರವೇಶಿಸಬಹುದಾದ ಹಾದಿಯಲ್ಲಿ ಮುಸ್ಲಿಮರು ಆಳವಾದ ಕಂದಕಗಳನ್ನು ತೋಡಿದರು. ಖುದ್ದು ಪ್ರವಾದಿವರ್ಯರು (ಸ) ಗುದ್ದಲಿ ಹಿಡಿದು ಕಂದಕಗಳನ್ನು ತೋಡುವ ಕಾರ್ಯದಲ್ಲಿ ಪಾಲ್ಗೊಂಡರು. ಶತ್ರುಗಳು ಮದೀನಾಕ್ಕೆ ಹತ್ತಿರವಾಗಿ ಡೇರೆ ಹೂಡುತ್ತಿದ್ದಂತೆಯೇ, ದೇವನ ಕಡೆಯಿಂದ ಪರೋಕ್ಷ ಸಹಾಯವು ಒದಗಿಬಂತು. ಭೀಕರ

ಬಿರುಗಾಳಿಯೊಂದಿಗೆ ಧಾರಾಕಾರ ಮಳೆಯು ಮದೀನಾದ ಸುತ್ತಲೂ ಸುರಿಯತೊಡಗಿತು. ಅದು ಬೇರೆ ತೀವ್ರ ಚಳಿಗಾಲದ ಋತುವಾಗಿತ್ತು. ತೀವ್ರ ಚಳಿ, ಧಾರಾಕಾರ ಮಳೆಯಿಂದ ಕುರೈಷ್ ಮತ್ತವರ ಮಿತ್ರಸೇನೆಗಳು ಧೈರ್ಯಗುಂದಿದವು. ಜೊತೆಗೆ ಬೀಸುತ್ತಿದ್ದ ಭೀಕರ ಬಿರುಗಾಳಿಯು ಶತ್ರುಗಳು ಬೀಡು ಬಿಟ್ಟಿದ್ದ ಡೇರೆಗಳನ್ನು ಕಿತ್ತೆಸೆಯತೊಡಗಿತು. ಈಗಂತೂ ಎಲ್ಲಿ ದೇವನ ಕ್ರೋಧ ನಮ್ಮ ಮೇಲೆ ಎರಗುವುದೋ ಎಂಬ ತೀವ್ರ ಭೀತಿಗವರು ಒಳಗಾದರು. ಈ ಭೀಕರ ಸ್ಥಿತಿಯಲ್ಲಿ ಕಂದಕವನ್ನು ದಾಟಿ ಮುಸ್ಲಿಮರನ್ನೆದುರಿಸುವುದಂತೂಈ ಅಸಾಧ್ಯದ ಮಾತು ಎಂಬುದನ್ನು ಮನಗಂಡ ಶತ್ರುಸೇನೆಯು ರಾತ್ರೋರಾತ್ರಿ ಅಲ್ಲಿಂದ ಕಾಲ್ಕಿತ್ತಿತು. ಇದನ್ನು ದೇವನ ವತಿಯಿಂದ ದೊರೆತ ಪರೋಕ್ಷ ಸಹಾಯವೆಂದೇ ತಿಳಿಯಬೇಕು. ಒಂದು ವೇಳೆ ಸುರಿಯುವ ಧಾರಾಕಾರದ ಮಳೆಯ ಬಿರುಗಾಳಿ ಬೀಸದೇ ಹೋಗುತ್ತಿದ್ದರೆ ಶತ್ರು ಸೈನ್ಯವು ಅನುಕೂಲಕರ ವಾತಾವರಣವನ್ನು ಪಡೆದು ಮದೀನಾದ ಒಳಗೆ ಪ್ರವೇಶಿಸಿ ಮುಸ್ಲಿಮರ ಸೈನ್ಯವನ್ನು ಸಂಪೂರ್ಣ ನಾಶಗೊಳಿಸಿಯೇ ಬಿಡುತ್ತಿತ್ತು ಎಂದರೆ ತಪ್ಪಾಗದು.

ಪ್ರವಾದಿವರ್ಯರ (ಸ) ಮದೀನಾಕ್ಕೆ ಬಂದ ದಿನದಿಂದಲೂ ಅವರ ಮತ್ತು ಮುಸ್ಲಿಮರ ವಿರುದ್ಧ ಯಹೂದಿಗಳು ನಿರಂತರವಾಗಿ ಮಸಲತ್ತುಗಳನ್ನು ನಡೆಸುತ್ತಿದ್ದರು. ಈ ಮುಂಚೆಮಾಡಿಕೊಂಡ ಒಪ್ಪಂದದಂತೆ ಯಹೂದಿಗಳು ಮದೀನಾದಲ್ಲಿ ಶಾಂತಿ–ಸೌಹಾರ್ದತೆಯೊಂದಿಗೆ ಬದುಕಲಿ ಎಂದೇ ಪ್ರವಾದಿವರ್ಯರು (ಸ) ಬಯಸಿದ್ದರು. ಆದರೆ, ಕಂದಕದ ಯುದ್ಧದ ಸಂದರ್ಭದಲ್ಲಿ ಯಹೂದಿಗಳು ತೋರಿದ ವಿಶ್ವಾಸದ್ರೋಹ ಅವರನ್ನು ಶಿಕ್ಷೆಗೆ ಅರ್ಹರನ್ನಾಗಿ ಮಾಡಿತ್ತು. ಅವರು ಪದೇ ಪದೇ ತಮ್ಮ ಸಭೆ ಮತ್ತು ಭಾಷಣಗಳಲ್ಲಿ ಸತ್ಯವಿಶ್ವಾಸಿಗಳ ವಿಶೇಷವಾಗಿ ಪ್ರವಾದಿವರ್ಯರ (ಸ) ಕುರಿತು ಗೇಲಿ ಮಾಡುತ್ತಿದ್ದರು. ಸತ್ಯವಿಶ್ವಾಸಿನಿ ಮಹಿಳೆಯರಿಗೂ ಯಹೂದಿಗಳ ವತಿಯಿಂದ ತೀವ್ರ ಕಿರುಕುಳ ನಡೆಯುತ್ತಿತ್ತು. ಝೈನಬ್ (ರ) ಎನ್ನುವ ಯಹೂದಿ ಮಹಿಳೆಯೋರ್ವಳು ಪ್ರವಾದಿವರ್ಯರು (ಸ) ಹಾಗೂ ಮುಸ್ಲಿಮರಿಗೆಂದು ಔತಣಕೂಟವನ್ನೇರ್ಪಡಿಸಿದಳು. ಸಿದ್ಧಪಡಿಸಿದ ಆಹಾರದಲ್ಲಿ ಯಾರಿಗೂ ತಿಳಿಯದಂತೆ ವಿಷ ಬೆರೆಸಿದಳು. ಸರಿಯಾದ ಸಮಯಕ್ಕೆ ಪ್ರವಾದಿವರ್ಯರಿಗೆ (ಸ) ಸಂದೇಹವುಂಟಾಯಿತು ಮತ್ತು ಅವರು ಔತಣಕೂಟದಲ್ಲಿ ಮುಸ್ಲಿಮರನ್ನು

ಭಾಗಿಯಾಗುವುದರಿಂದ ತಡೆದರು. ದೇವನನುಗ್ರಹದಿಂದ ಎಲ್ಲರ ಪ್ರಾಣ ಉಳಿಯಿತು. ಈ ಪಿತೂರಿಯ ಹಿಂದೆ ಅನೇಕ ಘಟಾನುಘಟಿ ಯಹೂದಿ ನಾಯಕರಿದ್ದರು. ಪ್ರವಾದಿವರ್ಯರ ಸ್ಥಾನದಲ್ಲಿ ಬೇರಾವುದೇ ನಾಯಕನಿದ್ದಿದ್ದರೂ ಮದೀನಾದ ಒಬ್ಬನೇ ಒಬ್ಬ ಯಹೂದ್ಯನೂ ಜೀವಂತವಾಗಿರುತ್ತಿರಲಿಲ್ಲ. ಆದರೆ ಪ್ರವಾದಿವರ್ಯರು (ಸ) ಈ ಪಿತೂರಿಗೆ ಕಾರಣಕರ್ತರಾಗಿದ್ದ ಕೆಲವೇ ಕೆಲವು ಯಹೂದಿ ನಾಯಕರಿಗಷ್ಟೆ ಶಿಕ್ಷೆ ವಿಧಿಸಿದರು. ಇನ್ನುಳಿದವರಿಗೆ ಕ್ಷಮೆ ನೀಡಿದರು.

ಇನ್ನು ಮುಂದೆ ಮಕ್ಕಾದ ಕುರೈಷರು ಮುಸ್ಲಿಮರೊಂದಿಗೆ ಕಾದಾಡುವ ಗೋಜಿಗೆ ಹೋಗದೆ ತಮ್ಮ ಪಾಡಿಗೆ ತಾವಿರುತ್ತಾರೆ ಎಂಬುದೇ ಎಲ್ಲರ ಲೆಕ್ಕಚಾರವಾಗಿತ್ತು. ಖುದ್ದು ಪ್ರವಾದಿ ಮುಹಮ್ಮದರು (ಸ) ಇನ್ನು ಮುಂದೆ ಕುರೈಷರು ಸುಖಾ–ಸುಮ್ಮನೆ ಕಾಲು ಕೆರೆದು ಜಗಳಕ್ಕಿಳಿಯುವ ಮೊಂಡು ಧೈರ್ಯ ತೋರಲಾರರು ಎಂದೇ ಭಾವಿಸಿದ್ದರು. ಹಾಗಾಗಿ ತಮ್ಮ ಸಹಚರರೊಂದಿಗೆ ಉಮ್ರಾವನ್ನು ನಿರ್ವಹಿಸಿ ಬರುವ ಇರಾದೆಯನ್ನು ಮಾಡಿದರು. ಅದರಂತೆ 1,400 ಸಹಚರರೊಂದಿಗೆ ದೇವಭವನವನ್ನು (ಕಅಬಾ) ಸಂದರ್ಶಿಸಿ ಬರಲಿಕ್ಕಾಗಿ ಅವರು (ಸ) ಮಕ್ಕಾದ ಕಡೆ ಪ್ರಯಾಣ ಹೊರಟರು. 'ನಮ್ಮ ಇರಾದೆ ಕೇವಲ ದೇವಭವನದ ಸಂದರ್ಶನ. ಸ್ವ–ರಕ್ಷಣೆಗಾಗಿ ಕೇವಲ ಒಂದು ಖಡ್ಗವನ್ನು ಒಯ್ಯುವ ಹೊರತಾಗಿ ಬೇರಾವುದೇ ಹೆಚ್ಚುವರಿ ಆಯುಧವನ್ನು ತಮ್ಮೊಂದಿಗೆ ಒಯ್ಯಕೂಡದು' ಎಂದು ತಮ್ಮ ಸಂಗಾತಿಗಳಿಗೆ ಪ್ರವಾದಿವರ್ಯರು (ಸ) ಪ್ರಯಾಣಕ್ಕೆ ಮುಂಚಿತವಾಗಿಯೇ ಆದೇಶಿಸಿದ್ದರು.

ಆದರೆ ಕುರೈಷರಿಗೆ ಮುಸ್ಲಿಮರು ಮಕ್ಕಾದ ಮೇಲೆ ದಾಳಿ ಮಾಡಲು ಬಂದಿರಬಹುದೆಂಬ ಶಂಕೆಯುಂಟಾಯಿತು. ಪ್ರವಾದಿವರ್ಯರ (ಸ) ಜೊತೆಗೆ ಮಾತುಕತೆಗಾಗಿ ತಮ್ಮ ಕಡೆಯಿಂದ ವ್ಯಕ್ತಿಯೋರ್ವರನ್ನು ಕಳಿಸುತ್ತಾರೆ. ಅವರ ಬಳಿ, ಪ್ರವಾದಿವರ್ಯರು (ಸ) 'ನೋಡಿ, ನಾವು ಯುದ್ಧದ ಇರಾದೆಯೊಂದಿಗೆ ಬಂದವರಲ್ಲ. ನಮ್ಮ ಉದ್ದೇಶ ಕೇವಲ ದೇವಭವನವನ್ನು ಸಂದರ್ಶಿಸಿ ಉಮ್ರಾ ನಿರ್ವಹಿಸುವುದಾಗಿದೆ. ಜೊತೆಗೆ ನಾವು ಕುರೈಷರ ಜೊತೆಗೆ ಸಂಧಾನಕ್ಕೂ ತಯಾರಾಗಿರುವೆವು.' ಎಂಬ ಸಂದೇಶವನ್ನು ಆ ವ್ಯಕ್ತಿಯ ಮೂಲಕ ಪ್ರವಾದಿವರ್ಯರು (ಸ) ಕುರೈಷರಿಗೆ ಕಳಿಸಿದರು. ಸುದೀರ್ಘ ಚರ್ಚೆಯ ನಂತರ ಕುರೈಷರು ತಮ್ಮ ಕಡೆಯಿಂದ ಸಂಧಾನಕಾರನೋರ್ವನನ್ನು ಕಳಿಸಿ ಸಂಧಾನಕ್ಕಾಗಿ ಕೆಲವು ಷರತ್ತುಗಳನ್ನು

ಮುಂದಿಟ್ಟರು. ಪ್ರವಾದಿವರ್ಯರು (ಸ) ಕೂಡ ಶಾಂತಿಯನ್ನು ಕಾಪಾಡುವ ಸಲುವಾಗಿ ಕುರೈಷರ ಷರತ್ತುಗಳನ್ನು ಒಪ್ಪಿಕೊಂಡು ಅವರ ನಿಬಂಧನೆಯಂತೆ ಉಮ್ರಾ ನಿರ್ವಹಿಸದೆ ತಮ್ಮ ಸಹಚರರೊಂದಿಗೆ ಮದೀನಾ ವಾಪಾಸ್ಸಾದರು. ಪ್ರವಾದಿವರ್ಯರ (ಸ) ಕೆಲವು ಸಹಚರರಿಗೆ ಪ್ರವಾದಿವರ್ಯರ (ಸ) ಕುರೈಷರ ಎಲ್ಲ ಷರತ್ತುಗಳಿಗೊಪ್ಪಿ ಸಂಧಾನಕ್ಕೆ ಮುಂದಾಗಿದ್ದು ಇಷ್ಟವಾಗಲಿಲ್ಲ. ಆದರೆ ಪ್ರವಾದಿವರ್ಯರು (ಸ) ಆ ಸಂದರ್ಭದಲ್ಲಿ ಯುದ್ಧಕ್ಕಿಂತ ಸಂಧಾನವೇ ಹೆಚ್ಚು ಪ್ರಶಸ್ತವೆಂದರಿತು ಸಂಧಾನಕ್ಕೇ ಹೆಚ್ಚು ಪ್ರಾಮುಖ್ಯತೆ ನೀಡಿದರು. ಒಂದು ವೇಳೆ ಯುದ್ಧ ನಡೆದಿರುತ್ತಿದ್ದರೆ ಮುಸ್ಲಿಮರ ಅಪಾರ ಪ್ರಾಣಹಾನಿಯಾಗುವ ಸಂಭವವಿತ್ತು. ಈ ಸಂಧಾನವು ಇಸ್ಲಾಮಿನ ಚರಿತ್ರೆಯಲ್ಲಿ "ಹುದೈಬಿಯಾ ಸಂಧಿ" ಎಂದೇ ಪ್ರಸಿದ್ಧವಾಗಿದೆ.

ಹುದೈಬಿಯಾದ ಈ ಸಂಧಿಯ ಬಳಿಕ ಮುಸ್ಲಿಮರ ಶಕ್ತಿ–ಸಾಮರ್ಥ್ಯವು ಇಮ್ಮಡಿಗೊಂಡವು. ಕುರೈಷರ ಕಡೆಯಿಂದ ಯುದ್ಧದ ಭೀತಿ ಇಲ್ಲದಿದ್ದರಿಂದ ಪ್ರವಾದಿವರ್ಯರು (ಸ) ನಿಶ್ಚಿಂತರಾಗಿ ತಮ್ಮ ದೂತರನ್ನು ಅನೇಕ ಕಡೆಗಳಿಗೆ ದೇವಸಂದೇಶವನ್ನು ತಲುಪಿಸುವುದಕ್ಕಾಗಿ ರವಾನಿಸಿದರು. ಅನೇಕ ರಾಜರುಗಳಿಗೆ, ಆಡಳಿತಗಾರರಿಗೆ ಪತ್ರದ ಮುಖೇನವೂ ದೇವಸಂದೇಶವನ್ನು ತಲುಪಿಸುವ ತಮ್ಮ ಹೊಣೆಯನ್ನು ಅವರು ಯಶಸ್ವಿಯಾಗಿ ನಿಭಾಯಿಸಿದರು. ಕೆಲವು ಕಡೆಗಳಲ್ಲಿ ವಿರೋಧ ವ್ಯಕ್ತವಾದರೆ, ಕೆಲವು ಕಡೆಗಳಲ್ಲಿನ ಆಡಳಿತಗಾರರು ಖುದ್ದು ಇಸ್ಲಾಮ್ ಸ್ವೀಕರಿಸಿದ್ದಲ್ಲದೇ, ತಮ್ಮ ಪ್ರದೇಶಗಳಲ್ಲಿ ದೇವಸಂದೇಶವನ್ನು ಪಸರಿಸಲಿಕ್ಕಾಗಿ ಮುಕ್ತ ಅವಕಾಶವನ್ನೂ ಮಾಡಿಕೊಟ್ಟರು.

ಇತ್ತ ಮಕ್ಕಾದಲ್ಲಿ ಕುರೈಷರು ಮುಸ್ಲಿಮರೊಂದಿಗೆ ಹುದೈಬಿಯಾದ ಸಂಧಿಯನ್ನು ಮಾಡಿಕೊಂಡಿದ್ದರೂ, ದಿನದಿಂದ ದಿನಕ್ಕೆ ಏಳ್ಗೆಯಾಗುತ್ತಿರುವ ಮುಸ್ಲಿಮರ ಪ್ರಗತಿಯನ್ನು ಕಂಡು ಒಳಗಿಂದೊಳಗೆ ಅಸೂಯೆ ಪಡುತ್ತಿದ್ದರು. ಇಸ್ಲಾಮ್ ಹಾಗೂ ಮುಸ್ಲಿಮರಿಗೆ ಅಪಾರ ಹಾನಿ ಮಾಡುವ ಯಾವುದಾದರೊಂದು ಅವಕಾಶ ತಮಗೆ ಸಿಗಲಿ ಎಂಬುದೇ ಅವರ ಅಭಿಲಾಷೆಯಾಗಿತ್ತು. ಹುದೈಬಿಯಾದ ಒಪ್ಪಂದದ ಹೊರತಾಗಿಯೂ ಮುಸ್ಲಿಮರ ವಿರುದ್ಧ ಕುತಂತ್ರ ಹೆಣೆಯುವುದನ್ನು ಅವರು ತೊರೆಯಲಿಲ್ಲ. ಹುದೈಬಿಯಾದ ಒಪ್ಪಂದವಾಗಿ ಸುಮಾರು 18 ತಿಂಗಳ ಬಳಿಕ, ಮುಸ್ಲಿಮರ ಬೆಂಬಲಿಗರಾಗಿದ್ದ ಬನು ಖುಝಾಅ ಗೋತ್ರದ

ವ್ಯಕ್ತಿಯೋರ್ವನನ್ನು ಸರಿಯಾಗಿ ಕಅಬಾದ ಎದುರುಗಡೆ ಕುರೈಷರು ಹತ್ಯೆಗೈದರು. ಕುರೈಷರ ಈ ದುಷ್ಕೃತ್ಯವು ಹುದೈಬಿಯಾದ ಒಪ್ಪಂದದ ವಿರುದ್ಧವಾಗಿತ್ತು. ಪ್ರವಾದಿವರ್ಯರಿಗೆ (ಸ) ವಿಷಯ ತಲುಪುತ್ತಿದ್ದಂತೆಯೇ ಅವರು ಕುರೈಷರ ಬಳಿ ಸಂಧಾನಕಾರನೋರ್ವರನ್ನು ಕಳಿಸಿ, 'ನೀವು ಒಪ್ಪಂದವನ್ನು ಮುರಿದಿದ್ದೀರಿ. ಇನ್ನು ಮುಂದೆ ಒಪ್ಪಂದದಂತೆ ನಡೆದುಕೊಳ್ಳುವ ಇರಾದೆಯನ್ನು ನೀವು ಹೊಂದಿರುವಿರೋ ಇಲ್ಲವೋ ಅದನ್ನಾದರೂ ತಿಳಿಸಿಬಿಡಿರಿ' ಎಂಬ ಸಂದೇಶವನ್ನು ನೀಡಿದರು. ಮೊದಲು ಕುರೈಷರು ಪ್ರವಾದಿವರ್ಯರ (ಸ) ಸಂದೇಶಕ್ಕೆ ಸ್ವಲ್ಪವೂ ಸ್ಪಂದಿಸಲಿಲ್ಲ. ಕೊನೆಗೆ ಒತ್ತಡ ಹೆಚ್ಚತೊಡಗಿದಾಗ, 'ನಾವು ಹುದೈಬಿಯಾ ಸಂಧಿಯನ್ನು ಮುರಿದಿರುವೆವು. ನಮ್ಮ ನಡುವೆ ಇನ್ನು ಯಾವುದೇ ಸಂಧಾನಕ್ಕೆ ಅವಕಾಶವಿಲ್ಲ' ಎಂದು ಕುರೈಷರು ಘೋಷಿಸಿಬಿಟ್ಟರು.

ಈಗ ಪ್ರವಾದಿವರ್ಯರ (ಸ) ಸಹನೆಯ ಕಟ್ಟೆ ಒಡೆಯಿತು. ಇನ್ನು ಮುಂದೆ ಇಂತಹ ಅನ್ಯಾಯವನ್ನು ಸಹಿಸುವುದರಲ್ಲಿ ಯಾವುದೇ ಅರ್ಥವಿಲ್ಲ, ಈ ಬಾರಿ ಶತ್ರುಗಳಿಗೆ ಸರಿಯಾದ ಪಾಠ ಕಲಿಸಬೇಕು, ಈ ಬಾರಿ ಮಕ್ಕಾದ ಕುರೈಷರನ್ನು ಎದುರಿಸಲು ಸರ್ವಸನ್ನದ್ಧರಾಗಿ ಹೊರಡಬೇಕೆಂದು ಪ್ರವಾದಿವರ್ಯರು (ಸ) ನಿರ್ಧರಿಸಿದರು. ಅದರಂತೆ ಸರಾಸರಿ 10,000 ಸೇನಾಳುಗಳಿರುವ ಬಲಿಷ್ಠ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡ ಪ್ರವಾದಿವರ್ಯರು (ಸ) ಮಕ್ಕಾದ ಕಡೆಗೆ ಹೊರಟರು. ಅದು ಪ್ರವಾದಿವರ್ಯರು (ಸ) ಮಕ್ಕಾದಿಂದ ಮದೀನಾಕ್ಕೆ ವಲಸೆ ಬಂದ 8ನೆಯ ವರ್ಷ. 'ಕುರೈಷರು ಸೈನ್ಯದ ಸಂಖ್ಯಾಬಲ ನೋಡಿ ಹೆದರಿ, ಯುದ್ಧದಿಂದ ಹಿಂದೆ ಸರಿಯಲಿ. ಯಾವುದೇ ರೀತಿಯ ಸಾವು–ನೋವು ರಕ್ತಪಾತವಿಲ್ಲದೆ ಮಕ್ಕಾವನ್ನು ಜಯಿಸಲು ನಮಗೆ ಸಾಧ್ಯವಾಗಲಿ' ಎಂದು ಪ್ರವಾದಿವರ್ಯರು (ಸ) ಬಯಸಿದ್ದರು.

ಮಕ್ಕಾದ ಅನತಿ ದೂರದಲ್ಲಿ ತಮ್ಮ ಸೈನ್ಯದ ಡೇರೆಗಳನ್ನು ಹೂಡುವಂತೆ, ಪ್ರತಿಯೋರ್ವರು ತಮ್ಮ ಡೇರೆಗಳ ಮುಂದೆ ಬೆಂಕಿಯನ್ನು ಉರಿಸುವಂತೆ ಪ್ರವಾದಿವರ್ಯರು (ಸ) ಆದೇಶಿಸಿದರು. ಅನತಿ ದೂರದಲ್ಲಿ ದೊಡ್ಡ ಮಟ್ಟದಲ್ಲಿ ಮುಸ್ಲಿಮರ ಸೇನೆ ಜಮೆಗೊಂಡಿರುವುದನ್ನು ನೋಡಿ ಕುರೈಷರು ತೀವ್ರ ಭಯಗೊಂಡರು. ಕುರೈಷ್ ಸರದಾರ, ಇಸ್ಲಾಮಿನ ಪರಮಶತ್ರುವಾಗಿದ್ದ ಅಬೂ ಸುಫ್ಯಾನ್ ಸಂಧಾನಕಾರನಾಗಿ ಪ್ರವಾದಿವರ್ಯರ (ಸ) ಬಳಿ ಕಳುಹಿಸಿದರು. ಅಬೂಸುಫ್ಯಾನ್ ತನ್ನ ಹಿಂದಿನ ಎಲ್ಲ ತಪ್ಪುಗಳನ್ನು ಒಪ್ಪಿಕೊಂಡು

ಪ್ರವಾದಿವರ್ಯರ (ಸ) ಬಳಿ ಕ್ಷಮೆ ಕೇಳಿದರು. ಪ್ರವಾದಿವರ್ಯರು (ಸ) ಕೂಡ ವಿಶಾಲಹೃದಯದೊಂದಿಗೆ ಅಬುಸುಫ್ಯಾನ್ ರನ್ನು ಕ್ಷಮಿಸಿದರು. ಈಗ ಅಬುಸುಫ್ಯಾನ್ ರಿಗೆ ಇಸ್ಲಾಮ್ ಕಅಬಾದ ಒಡೆಯನ ಕಡೆಯಿಂದಲೇ ಬಂದ ಧರ್ಮವೆಂದೂ, ಪ್ರವಾದಿವರ್ಯರಿಗೆ (ಸ) ದೇವನ ಕಡೆಯಿಂದಲೇ ಕಳುಹಿಸಲ್ಪಟ್ಟ ಸಂದೇಶವಾಹಕನೆಂದೂ, ಅವರ ಜೊತೆ ದೇವಸಹಾಯವಿದೆ ಎಂಬುದೂ ಸ್ಪಷ್ಟವಾಗಿ ಮನವರಿಕೆಯಾಯಿತು. ಜೊತೆಗೆ ಇಸ್ಲಾಮ್ ಮತ್ತು ಮುಸ್ಲಿಮರೊಂದಿಗೆ ಮಾಡಿದ ತನ್ನ ಈ ಹಿಂದಿನ ಎಲ್ಲ ದೌರ್ಜನ್ಯವನ್ನು ಮರೆತು ತನ್ನ ಜೊತೆ ಸದ್ವರ್ತನೆ ತೋರಿ, ತನ್ನನ್ನು ಕ್ಷಮಿಸಿದ ಔದಾರ್ಯವಂತ ಪ್ರವಾದಿವರ್ಯರ (ಸ) ಉನ್ನತ ವ್ಯಕ್ತಿತ್ವಕ್ಕೆ ಅವರು ಮಾರು ಹೋದರು. ಅದೇ ಕ್ಷಣದಲ್ಲಿ ತನ್ನ ಹಳೆಯ ಧರ್ಮವನ್ನು ತೊರೆದ ಅವರು, ಸಸಂತೋಷವಾಗಿ ಇಸ್ಲಾಮನ್ನು ಸ್ವೀಕರಿಸಿದರು.

ಅಬುಸುಫ್ಯಾನ್ ಮಕ್ಕಾವಾಸಿಗಳ ಬಳಿ ತಲುಪಿ, 'ಇನ್ನು ಇಸ್ಲಾಮನ್ನು ವಿರೋಧಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಯಾರಾದರೂ ಮುಸ್ಲಿಮರಿಂದ ಅಭಯ ಬಯಸುವುದಾದರೆ ನನ್ನ ಮನೆಯೊಳಗೆ ಪ್ರವೇಶಿಸಲಿ ಅಥವಾ ತಮ್ಮ ಮನೆಯ ಬಾಗಿಲುಗಳನ್ನು ಮುಚ್ಚಿಕೊಳ್ಳಲಿ. ನಿಮಗೆ ಯಾವುದೇ ರೀತಿಯ ಅಪಾಯ ಎದುರಾಗದು' ಎಂದು ಘೋಷಿಸಿದರು. ಈಗ ಮುಸ್ಲಿಮರ ಮಹಾಸೈನ್ಯ ನಾಲ್ಕು ದಿಕ್ಕುಗಳಿಂದಲೂ ಮಕ್ಕಾ ಪಟ್ಟಣವನ್ನು ಪ್ರವೇಶಿಸತೊಡಗಿತು. ಮಕ್ಕಾವಾಸಿಗಳ ಮೇಲೆ ಯಾವುದೇ ರೀತಿಯ ಕಾಠಿಣ್ಯ ತೋರಕೂಡದು ಎಂದು ಪ್ರವಾದಿವರ್ಯರು (ಸ) ಮುಸ್ಲಿಮ್ ಸೈನ್ಯಕ್ಕೆ ಮೊದಲೇ ತಾಕೀತು ಮಾಡಿದ್ದರು. ಪ್ರವಾದಿವರ್ಯರು (ಸ) ತಮ್ಮ ಅತ್ಯಾಪ್ತ ಸಂಗಾತಿಗಳೊಂದಿಗೆ ಕಅಬಾ ಭವನದ ಒಳಗೆ ಪ್ರವೇಶಿಸಿ ನಮಾಝ್ ನಿರ್ವಹಿಸಿದರು. ಮಕ್ಕಾವಾಸಿಗಳು ಮುಸ್ಲಿಮರ ಮೇಲೆ ತಾವು ಎಸಗಿದ ಈ ಹಿಂದಿನ ದೌರ್ಜನ್ಯಗಳನ್ನು ನೆನೆಸಿಕೊಂಡು, 'ಈಗ ನಮಗೆ ಯಾವ ಸ್ಥಿತಿ ಒದಗಿಲಿದೆಯೋ, ಮುಹಮ್ಮದರು ನಮ್ಮೆಲ್ಲರ ಸಾಮೂಹಿಕ ಹತ್ಯೆಯ ಆಜ್ಞೆಯನ್ನು ಜಾರಿಗೊಳಿಸಬಹುದೇನೋ' ಎಂದು ಭಯದಿಂದ ನಡುಗುತ್ತಾ ತಮ್ಮ ಭವಿಷ್ಯದ ಕುರಿತು ತೀವ್ರ ಚಿಂತಿತರಾಗಿದ್ದಾರೆ. ಕೆಲವು ಕುರೈಷ್ ಮುಖಂಡರು ಮುಂಜಾಗ್ರತಾ ಕ್ರಮವಾಗಿ ಮಕ್ಕಾ ನಗರವನ್ನು ತೊರೆಯುವ ತಯಾರಿ ನಡೆಸತೊಡಗಿದರು.

ಪ್ರವಾದಿವರ್ಯರಿಗೆ (ಸ) ಮಕ್ಕಾವಾಸಿಗಳು ತಮ್ಮ ಪ್ರಾಣದ ಕುರಿತು ಭಯಭೀತರಾಗಿ ಮಕ್ಕಾನಗರವನ್ನು ತೊರೆಯುವ ತಯಾರಿನಡೆಸಿರುವ ಬಗ್ಗೆ ವಿಷಯ ತಲುಪಿದಾಕ್ಷಣ, "ಯಾವೊಬ್ಬ ಮುಸ್ಲಿಮ್ ಸೇನಾಳುವೂ ಮಕ್ಕಾವಾಸಿಗಳ ವಿರುದ್ಧ ಖಡ್ಗವನ್ನು ಎತ್ತಕೂಡದು. ಮುಸ್ಲಿಮರ ಭಯದಿಂದ ಯಾರೂ ಮಕ್ಕಾವನ್ನು ತೊರೆದು ಹೋಗ ಕೂಡದು. ಇಂದಿನ ದಿನ ಹಿಂಸೆ ಅಥವಾ ಪ್ರತೀಕಾರದ ದಿನವಲ್ಲ. ಬದಲಿಗೆ ಈ ದಿನವು ಪರಸ್ಪರ ಕರುಣೆ, ದಯೆ ಮತ್ತು ಔದಾರ್ಯವನ್ನು ತೋರುವ ದಿನವಾಗಿದೆ. ನಿಮ್ಮ ಪಾಲಿನ ಶತ್ರುವಾಗಿ, ನಿಮ್ಮಿಂದ ಪ್ರತೀಕಾರವನ್ನು ತೀರಿಸಿಕೊಳ್ಳುವ ಉದ್ದೇಶದಿಂದ ನಾನು ಮಕ್ಕಾಕ್ಕೆ ಪ್ರವೇಶಿಸಿದ್ದಲ್ಲ. ಪ್ರವಾದಿ ಯೂಸುಫರು (ಅಲೈಹಿಸ್ಸಲಾಮ್– ಅವರ ಮೇಲೆ ದೇವನ ಶಾಂತಿಯಿರಲಿ) ಈಜಿಪ್ಟ್ ನಲ್ಲಿ ತಮ್ಮ ಸಹೋದರರಿಂದ ಯಾವುದೇ ಪ್ರತೀಕಾರ ತೆಗೆದುಕೊಳ್ಳದೇ ಯಾವ ರೀತಿ ಕ್ಷಮಿಸಿದರೋ, ಅದೇ ರೀತಿ ನಾನೂ ಇಂದು ನಿಮ್ಮೆಲ್ಲರನ್ನೂ ಕ್ಷಮಿಸಿರುವೆ. ಇಂದು ಕ್ಷಮಾದಾನದ ದಿನವಾಗಿದೆ. ಇಂದು ಯಾರಿಂದಲೂ ಯಾವುದೇ ರೀತಿಯ ಪ್ರತೀಕಾರ ಪಡೆಯಲಾಗದು. ಆದುದರಿಂದ ನೀವೆಲ್ಲರೂ ನಿಶ್ಚಿಂತರಾಗಿರಿ" ಎನ್ನುತ್ತಾ ಸಾರ್ವತ್ರಿಕ ಕ್ಷಮಾದಾನವನ್ನವರು ಘೋಷಿಸಿದರು. ಈ ಘೋಷಣೆಯನ್ನಾಲಿಸಿದ ಜನರು ಸಮಾಧಾನದ ನಿಟ್ಟುಸಿರು ಬಿಟ್ಟರು.

21 ವರ್ಷಗಳ ಕಾಲ ನಿರಂತರ ಪ್ರವಾದಿವರ್ಯರು (ಸ) ಮತ್ತು ಅವರ ಸಂಗಾತಿಗಳಿಗೆ ವಿವಿಧ ರೀತಿಯ ಚಿತ್ರಹಿಂಸೆ ಕೊಟ್ಟ, ಮುಸ್ಲಿಮರ ಮೇಲೆ ದೌರ್ಜನ್ಯಗಳ ಸರಮಾಲೆಗಳನ್ನೇ ಸುರಿಸಿದ್ದ ಕುರೈಷರಿಗೆ ಪ್ರವಾದಿವರ್ಯರಿಂದ (ಸ) ಸಿಕ್ಕ ಈ ಬಹಿರಂಗ ಸಾರ್ವತ್ರಿಕ ಕ್ಷಮಾದಾನದಂತಹ ಐತಿಹಾಸಿಕ ಘಟನೆ ಬಹುಶಃ ಇತಿಹಾಸದ ಪುಟದಲ್ಲಿ ಬೇರೆಲ್ಲೂ ಕಾಣಸಿಗಲಾರದು.

ಪ್ರವಾದಿವರ್ಯರ (ಸ) ಸಾರ್ವತ್ರಿಕ ಕ್ಷಮಾದಾನದ ಪೈಕಿ ಕೆಲವು ತುಣುಕುಗಳು ಹೀಗಿವೆ ನೋಡಿ:

ಈ ಮೊದಲು ಮುಸ್ಲಿಮರ ಪರಮಶತ್ರುಗಳ ಪೈಕಿ ಒಬ್ಬರಾಗಿದ್ದ ಅಬೂಸುಫ್ಯಾನ್ ರಿಗೆ ಪ್ರವಾದಿವರ್ಯರು (ಸ) ಮಕ್ಕಾದೊಳಗೆ ಪ್ರವೇಶಗೊಳ್ಳುವ ಮೊದಲೇ ಕ್ಷಮಾದಾನ ಘೋಷಿಸಿದ್ದರು. ಅಬುಸುಫ್ಯಾನ್ ರ ಪತ್ನಿ ಹಿಂದಾಗೆ ತನ್ನ ಪತಿ ಪ್ರವಾದಿ ಮುಹಮ್ಮದರ (ಸ)

ತಂದ ಧರ್ಮವನ್ನು ಸ್ವೀಕರಿಸಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಕೋಪದಿಂದ ಕೆಂಡಮಂಡಲವಾದಳು. ಪತಿಯ ಗಡ್ಡವನ್ನು ಹಿಡಿದೆಳೆಯುತ್ತಾ ಮನೆಯಲ್ಲಿ ಬಿದ್ದಿದ್ದ ಮೆಟ್ಟುಗಳಿಂದ ಪತಿಯನ್ನು ಥಳಿಸಿದಳು. ಕೋಪೋದ್ರಿಕ್ತಳಾಗಿ ಪತಿಯ ಮುಖಕ್ಕೆ ಕ್ಯಾಕರಿಸಿ ಉಗಿದಳು. ಮುಸ್ಲಿಮ್ ಮತ್ತು ಇಸ್ಲಾಮ್ ನ ವಿರುದ್ಧ ಈ ಹಿಂದೆ ತಾನು ಮಾಡಿದ ದೌರ್ಜನ್ಯಕ್ಕೆ ಬದಲಾಗಿ ಈಗ ತನಗೇನು ಶಿಕ್ಷೆ ಕಾದಿದೆಯೋ ಎಂದು ಆಕೆ ಬಹಳ ದಿಗಿಲುಗೊಂಡಿದ್ದಳು. ಉಹುದ್ ಯುದ್ಧದ ಸಂದರ್ಭದಲ್ಲಿ ಹುತಾತ್ಮರಾಗಿದ್ದ ಪ್ರವಾದಿವರ್ಯರ (ಸ) ಚಿಕ್ಕಪ್ಪ ಹಂಝರವರ ಮೃತಶರೀರವನ್ನು ಆಕೆ ಚಾಕುವಿನಿಂದ ಬಗೆದು, ಅವರ ಕರುಳನ್ನು ಜಗಿದಿದ್ದಳು. ಆಕೆಯೊಳಗೆ ತುಂಬಿಕೊಂಡಿದ್ದ ವಿದ್ವೇಷವು ಆಕೆಯನ್ನು ಇಂತಹ ವಿಕಾರಕೃತ್ಯಕ್ಕೆ ಇಳಿಸಿತ್ತು. ಈಗ ಬೇರೆ ದಾರಿಯಿಲ್ಲದೆ ಕ್ಷಮೆಯನ್ನು ಕೋರಿ ಪ್ರವಾದಿವರ್ಯರ (ಸ) ಬಳಿ ಆಕೆಗೆ ಹಾಜರಾಗಲೇ ಬೇಕಿತ್ತು.

ಅಬುಸುಫ್ಯಾನ್ ಆಕೆಗೆ ಪರಿಪರಿಯಾಗಿ ತಿಳಿ ಹೇಳಿದ ಬಳಿಕ ಆಕೆ ತನ್ನ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟು, ಪ್ರವಾದಿವರ್ಯರಿಗೆ (ಸ) ಮುಂದೆ ಭಯಮಿಶ್ರಿತ ನಾಚಿಕೆಯೊಂದಿಗೆ ಹಿಂಜರಿಯುತ್ತಾ ಮುಖಪರದೆಯೊಂದಿಗೆ ಹಾಜರಾದಳು. ಪ್ರವಾದಿವರ್ಯರು (ಸ) ಆಕೆಯನ್ನುದ್ದೇಶಿಸಿ, 'ಹಿಂದಾ, ನೀವು ತಮ್ಮ ಹಿಂದಿನ ದುಷ್ಕೃತ್ಯಗಳಿಗಾಗಿ ಪಶ್ಚಾತ್ತಾಪ ಪಟ್ಟಿದ್ದೀರಿ ಎನ್ನುವುದು ಒಳ್ಳೆಯ ವಿಷಯ. ಇನ್ನು ಮುಂದೆ ಕೇವಲ ಏಕದೇವನನ್ನೇ ಕರೆದು ಪ್ರಾರ್ಥಿಸಿರಿ, ಸುಳ್ಳಾಡುವುದನ್ನು ತೊರೆಯಿರಿ. ಇನ್ನು ಮುಂದೆ ನೀವು ನಿಮ್ಮ ಕೆಟ್ಟ ನಡತೆಯನ್ನು ಸರಿಪಡಿಸಿಕೊಳ್ಳಬೇಕು, ಎಂದು ಉಪದೇಶಿಸಿ ಅವರನ್ನು ಸಂಪೂರ್ಣವಾಗಿ ಕ್ಷಮಿಸಿದರು. ಸ್ವತಃ ಚಿಕ್ಕಪ್ಪನ ಹುತಾತ್ಮದೇಹದೊಂದಿಗೆ ತಾನು ಮಾಡಿದ ಕುಕೃತ್ಯವನ್ನೂ ಲೆಕ್ಕಿಸದೆ ತನ್ನಿಂದ ಯಾವುದೇ ಪ್ರತೀಕಾರವನ್ನೂ ತೆಗೆದುಕೊಳ್ಳದೇ ತನ್ನನ್ನು ಸಂಪೂರ್ಣವಾಗಿ ಕ್ಷಮಿಸಿದ ಪ್ರವಾದಿವರ್ಯರ (ಸ) ಮೇರು ವ್ಯಕ್ತಿತ್ವಕ್ಕೆ ಅಬುಸುಫ್ಯಾನ್ ನ ಪತ್ನಿ ಹಿಂದಾ ಸಂಪೂರ್ಣವಾಗಿ ಮಾರುಹೋದರು ಮತ್ತು ಸಂಪೂರ್ಣ ಸಂತೋಷ ಮತ್ತು ಸ್ವ–ಇಚ್ಛೆಯಿಂದಾಕೆ ಇಸ್ಲಾಮನ್ನು ಸ್ವೀಕರಿಸಿದರು.

ಇಕ್ರಿಮಾ. ಇವರು ಬದ್ರ್ ಯುದ್ಧದ ಸಂದರ್ಭದಲ್ಲಿ ಸತ್ತ ಪ್ರವಾದಿವರ್ಯರ (ಸ) ಪರಮವೈರಿ ಅಬೂಜಹಲ್ ನ ಮಗ. ಮುಸ್ಲಿಮ್ ಸೈನ್ಯವು ಮಕ್ಕಾವನ್ನು ಪ್ರವೇಶಿಸುತ್ತಿದ್ದ ವೇಳೆ, ಇಬ್ಬರು ನಿರಪರಾಧಿ ಮುಸ್ಲಿಮರನ್ನು ಗುರಿಮಾಡಿ, ಬಾಣಹೂಡಿ ಕೊಂದರು. ಇವರ ಪತ್ನಿ ಉಮ್ಮು ಹಕೀಮ್ ಈ ಮೊದಲೇ ಮುಸ್ಲಿಮರಾಗಿದ್ದರು. ಅವರು ತಮ್ಮ ಪತಿ ಮಾಡಿದ ಅಪರಾಧಕ್ಕಾಗಿ ಪ್ರವಾದಿರ್ಯರ (ಸ) ಬಳಿ ಕ್ಷಮೆ ಯಾಚಿಸಿದರು. ಪ್ರವಾದಿವರ್ಯರು (ಸ) ಇಕ್ರಿಮಾರ ಪತ್ನಿಯ ಶಿಫಾರಸ್ಸಿನ ಮೇರೆಗೆ ಇಕ್ರಿಮಾರನ್ನು ಕ್ಷಮಿಸಿದರು.

ಪ್ರವಾದಿವರ್ಯರು (ಸ) ಮಗಳು ಝೈನಬ್ (ರಝಿಯಲ್ಲಾಹು ಅನ್ ಹಾ–ಅಲ್ಲಾಹನು ಅವರಿಂದ ಸಂಪ್ರೀತನಗಾಲಿ) ಗರ್ಭಿಣಿಯಾಗಿರುವ ಅವಸ್ಥೆಯಲ್ಲಿ ಒಂಟೆಯಲ್ಲಿ ಕೂತು ಮದೀನಾಕ್ಕೆ ವಲಸೆಹೋಗುವ ಸಂದರ್ಭದಲ್ಲಿ ಹಿಬಾರ್ ಎನ್ನುವ ವ್ಯಕ್ತಿಯೋರ್ವ ಕಲ್ಲು ಹೊಡೆದು ಝೈನಬ್ ರನ್ನು ಕೆಳಬೀಳಿಸಿದ್ದ. ಗರ್ಭಿಣಿ ಝೈನಬ್ ರು ಗರ್ಭಪಾತದಿಂದ ತೀವ್ರ ರಕ್ತಸ್ರಾವವಾಗಿ ಮೃತಪಟ್ಟಿದ್ದರು. ಆ ವ್ಯಕ್ತಿ ಪ್ರವಾದಿವರ್ಯರ (ಸ) ಬಳಿ ಬಂದು ತನ್ನ ಕುಕೃತ್ಯಕ್ಕಾಗಿ ಕ್ಷಮೆಯಾಚಿಸುತ್ತಾನೆ. ತನ್ನ ಸ್ವಂತ ಮಗಳನ್ನು ಗರ್ಭಾವಸ್ಥೆಯಲ್ಲಿ ಕೊಂದ ಕೊಲೆಗಾರನನ್ನು ಪ್ರವಾದಿವರ್ಯರು (ಸ) ಸಂಪೂರ್ಣವಾಗಿ ಕ್ಷಮಿಸಿಬಿಡುತ್ತಾರೆ. ಇಂತಹ ಔದಾರ್ಯ, ಇಷ್ಟು ದೊಡ್ಡ ಪ್ರಮಾಣದ ಹೃದಯ ವೈಶಾಲ್ಯ ಪ್ರವಾದಿವರ್ಯರ (ಸ) ಜೀವನದ ಹೊರತಾಗಿ ಬೇರೆಲ್ಲಿಯೂ ನಮಗೆ ದೊರೆಯಲಾರದು.

ಈ ಮುಂಚೆ ದೇವಸಂದೇಶವನ್ನು ತಲುಪಿಸಲಿಕ್ಕಾಗಿ ಪ್ರವಾದಿವರ್ಯರು (ಸ) ತಾಯಿಫ್ ಗೆ ಪ್ರಯಾಣ ಬೆಳೆಸಿದ್ದಾಗ, ಅಲ್ಲಿನ ಜನರು ಪ್ರವಾದಿವರ್ಯರೊಂದಿಗೆ (ಸ) ದುರ್ವರ್ತನೆ ತೋರಿದ್ದಲ್ಲದೇ ಅವರನ್ನು ತೀವ್ರವಾಗಿ ಗಾಯಗೊಳಿಸಿ, ಅಪಮಾನಿಸಿ ಕಳಿಸಿದ್ದರು. ಈಗ ಮುಸ್ಲಿಮರ ವಿರುದ್ಧ ಕದನಕ್ಕಿಳಿಯಲು ಸೈನ್ಯವನ್ನು ತಯಾರು ಮಾಡುತ್ತಿದ್ದಾರೆ ಎಂಬ ಸುದ್ದಿ ತಿಳಿದು, ಪ್ರವಾದಿವರ್ಯರು (ಸ) ತಮ್ಮ ಸೇನೆಯೊಂದಿಗೆ ತಾಯಿಫ್ ನ ಕಡೆಗೆ ಪಯಣ ಬೆಳೆಸಿದರು. ತಾಯಿಫ್ ಸೈನ್ಯವನ್ನು ಸೋಲಿಸಿ ಅಲ್ಲಿನ ಕೋಟೆಗಳನ್ನು ಜಯಿಸಿದರು. ವಿರೋಧಿ ಬಣದ 6,000 ಸೈನಾಳುಗಳು ಮುಸ್ಲಿಮರ ಕೈದಿಯಾದರು. ಆ ಬಳಿಕ ಅಲ್ಲಿನ ನಾಯಕರು, 'ನಾವು ಇನ್ನು ಮುಂದೆ ಇಸ್ಲಾಮ್ ನ ವಿರುದ್ಧ ಯಾವುದೇ ರೀತಿಯ ಕುತಂತ್ರವನ್ನಾಗಲಿ,

ಮುಸ್ಲಿಮರ ವಿರುದ್ಧ ಯಾವುದೇ ದೌರ್ಜನ್ಯವನ್ನಾಗಲಿ ಎಸಗುವುದಿಲ್ಲ. ಸದಾ ನಿಮ್ಮ ಹಿತಕಾಂಕ್ಷಿಗಳಾಗಿರುವೆವು' ಎಂದು ಭರವಸೆ ನೀಡಿದ ಮೇಲೆ ಪ್ರವಾದಿವರ್ಯರು (ಸ) ಮುಸ್ಲಿಮರ ಸೆರೆಯಲ್ಲಿದ್ದ 6,000 ಯುದ್ಧಾಳುಗಳನ್ನು ಬಿಡುಗಡೆ ಮಾಡಿದರು. ಆ ಪೈಕಿ ಯಾರೊಬ್ಬರನ್ನು ಮುಸ್ಲಿಮರಾಗಲು ಅವರು ನಿರ್ಬಂಧಪಡಿಸಲಿಲ್ಲ. ಪ್ರವಾದಿವರ್ಯರು (ಸ) ಬಯಸಿದ್ದರೆ, ಇಸ್ಲಾಮ್ ಸ್ವೀಕಾರ ಮಾಡಿದಲ್ಲಿ ಮಾತ್ರ ಬಿಡುಗಡೆಗೊಳಿಸುತ್ತೇವೆ ಎಂಬ ಷರತ್ತನ್ನಿಡಬಹುದಿತ್ತು. ಆದರೆ ಪ್ರವಾದಿ ಮುಹಮ್ಮದರು (ಸ) ಷರತ್ತುರಹಿತವಾಗಿ ಎಲ್ಲರನ್ನೂ ಬಿಡುಗಡೆಗೊಳಿಸಿ, ಇಸ್ಲಾಮಿನಲ್ಲಿ ಬಲವಂತವಿಲ್ಲ ಎಂಬ ಮಹತ್ತರ ಸಂದೇಶವನ್ನು ನೀಡಿದರು.

ಇಸ್ಲಾಮ್ ಈ ಸಂಪೂರ್ಣ ಅರಬ್ ಭೂಮಿಯಲ್ಲಿ ವಿಸ್ತರಿಸಿದೆ. ಎಲ್ಲ ಅರಬ್ ಗೋತ್ರಗಳ ಜನರೀಗ ತಮ್ಮ ಸಂಪೂರ್ಣ ಆಡಳಿತದ ಚುಕ್ಕಾಣಿಯನ್ನು ಪ್ರವಾದಿ ಮುಹಮ್ಮದರನ್ನು (ಸ) ಕೈಗೆ ಒಪ್ಪಿಸಿ, ಅವರನ್ನು ರಾಜನನ್ನಾಗಿ ಸ್ವೀಕರಿಸಿರುವರು. ಈಗ ಪ್ರವಾದಿವರ್ಯರು (ಸ) ಮಾದರಿ ಆಡಳಿತ ನೀಡುವುದರ ಕುರಿತು ಗಮನವನ್ನು ಹರಿಸಿದರು. ಅದಕ್ಕಾಗಿ ಸರಕಾರಿ ನಿಯಮಾವಳಿಗಳನ್ನು ರೂಪಿಸಿದರು. ಅವುಗಳ ಪೈಕಿ ಆದಾಯ ತೆರಿಗೆ ವಸೂಲಿಯ ನಿಯಮವೂ ಒಂದು. ಪ್ರಜೆಗಳ ರಕ್ಷಣೆಗಾಗಿ ಮಿಲಿಟರಿ ಪಡೆಗಳ ರಚನೆ ಮತ್ತು ಆ ಪಡೆಗಳ ತರಬೇತಿಯನ್ನು ಆಯೋಜಿಸಿ ಅದಕ್ಕೆ ಸಮಂಜಸವಾದ ರೂಪು–ರೇಷೆ ನೀಡಿದರು. ಗಡಿನಿಯಮಗಳನ್ನುರೂಪಿಸಿ ಗಡಿಗಳ ರಕ್ಷಣೆಗೆ ಬೇಕಾದ ಸಕಲ ವ್ಯವಸ್ಥೆಯನ್ನು ಮಾಡಿದರು. ಶ್ರೀಮಂತ ಜನರ ಆದಾಯದಲ್ಲಿ ನಿಯಮಿತ ದಾನ (ಝಕಾತ್) ನೀಡುವುದನ್ನವರು ಖಡ್ಡಾಯಗೊಳಿಸಿದರು. ವಿವಿಧ ಬುಡಕಟ್ಟು ಜನಾಂಗಗಳ ದಂಗೆಗಳನ್ನು ಹತ್ತಿಕ್ಕಲು ಬೇಕಾದ ವಿಶೇಷ ವ್ಯವಸ್ಥೆಗಳನ್ನೂ ಅವರು ರೂಪಿಸಿದರು.

ಸುತ್ತಮುತ್ತಲಿನ ಕ್ರೈಸ್ತ ಆಡಳಿತಗಾರರಿಗೆ ಮುಸ್ಲಿಮ್ ಮತ್ತು ಇಸ್ಲಾಮ್ ದಿನೇ ದಿನೇ ಏಳ್ಗೆ ಹೊಂದುತ್ತಿರುವುದನ್ನು ನೋಡಿ ಸಹಿಸಲಾಗುತ್ತಿರಲಿಲ್ಲ. ಆಗಾಗ್ಗೆ ಮುಸ್ಲಿಮರಿಗೆ ಕಿರುಕುಳ ನೀಡುವ ಮೂಲಕ ಅವರು ತಮ್ಮ ಅಸೂಯೆಯನ್ನು ಬಹಿರಂಗ ಪಡಿಸುತ್ತಲೂ ಇದ್ದರು. ಪ್ರವಾದಿವರ್ಯರು (ಸ) ಇಂತಹ ಉಪಟಳಕಾರರನ್ನು ನಿಗ್ರಹಿಸುವಲ್ಲಿ ಯಶಸ್ವಿಯಾದರು. ಶಾಂತಿ

ಮತ್ತು ಸೌಹಾರ್ದತೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ತನ್ನ ಸುತ್ತಮುತ್ತಲಿನ ದೇಶದ ಆಡಳಿತಗಾರರೊಂದಿಗೆ ಪ್ರವಾದಿವರ್ಯರು (ಸ) ಒಡಂಬಡಿಕೆಗಳನ್ನು ಮಾಡಿಕೊಂಡರು.

ಈ ಎಲ್ಲಾ ಅವಿಶ್ರಾಂತ ಚಟುವಟಿಕೆಗಳ ಬಳಿಕ ಅಲ್ಲಾಹನ ಪ್ರವಾದಿಯು (ಸ) ಬಹಳ ಹುರುಪಿನೊಂದಿಗೆ ಹಜ್ಜ್ ನಿರ್ವಹಿಸಲು ಸಿದ್ಧರಾದರು. ಪ್ರವಾದಿವರ್ಯರೊಂದಿಗೆ ಹಜ್ಜ್ ನಿರ್ವಹಿಸಿದ ಅವರ ಅನುಯಾಯಿಗಳ ಸಂಖ್ಯೆ ಬರೋಬ್ಬರಿ 1,40,000. ದಿನೇ ದಿನೇ ಇಸ್ಲಾಮ್ ಸ್ವೀಕರಿಸುವವರ ಸಂಖ್ಯೆ ಗಣನೀಯವಾಗಿ ಏರತೊಡಗಿದ್ದು, ಕೆಲವೇ ಕೆಲವು ವರ್ಷಗಳಲ್ಲಿ ಕೇವಲ ಅರಬ್ ಭೂಮಿ ಮಾತ್ರವಲ್ಲ ಅದರ ಸುತ್ತಮುತ್ತಲಿನ ದೇಶದ ಇಸ್ಲಾಮನ್ನು ದ್ವೇಷಿಸುತ್ತಿದ್ದವರೆಲ್ಲರೂ ಪ್ರವಾದಿವರ್ಯರ (ಸ) ಅನುಯಾಯಿಗಳಾಗಿ ಮಾರ್ಪಟ್ಟಿದ್ದು ಒಂದು ಪವಾಡವೇ ಸರಿ. ಬಹುಶಃ ಇಷ್ಟು ಶೀಘ್ರದಲ್ಲಿ ಇಷ್ಟೊಂದು ಗಣನೀಯ ಸಂಖ್ಯೆಯಲ್ಲಿ ಏರಿಕೆ ಕಂಡ ಅನುಯಾಯಿಗಳ ಸಂಖ್ಯೆ ಮುಹಮ್ಮದರ (ಸ) ಹೊರತು ಬೇರಾವ ಪ್ರವಾದಿಗೂ ದಕ್ಕಿರಲಿಕ್ಕಿಲ್ಲ. ಹ. ಪ್ರವಾದಿವರ್ಯರ (ಸ) ಹಜ್ಜ್ ನ ಸಂದರ್ಭದಲ್ಲಿಯೂ ಎಲ್ಲಿ ನೋಡಿದರೂ; ಬಡವ–ಬಲ್ಲಿದ ಎಂಬ ಭೇದ–ಭಾವವಿಲ್ಲದೆ, ಕಪ್ಪು–ಬಿಳಿ ಎಂಬ ಮೇಲು–ಕೀಳಿಲ್ಲದೆ, ಗುಲಾಮ–ಕುಲೀನ ಎಂಬ ಹಮ್ಮು ಬಿಮ್ಮಿಲ್ಲದೆ, ನಾವೆಲ್ಲರೂ ಆ ಏಕದೇವನ ದಾಸರು, ಒಂದೇ–ತಂದೇ ತಾಯಿಯ ಸಂತಾನಗಳು ಎಂಬ ನೆಲೆಯಲ್ಲಿ ಇಸ್ಲಾಮ್ ಸ್ವೀಕರಿಸಿ ಪ್ರವಾದಿವರ್ಯರ (ಸ) ಅನುಯಾಯಿಗಳಾದ ಮುಸ್ಲಿಮರು ಸಂಖ್ಯಾನುಸಂಖ್ಯೆಯಲ್ಲಿ ಶ್ವೇತವಸ್ತ್ರಧಾರರಾಗಿ ಹಜ್ಜ್ ನ ಆರಾಧನಾ ವಿಧಿಗಳಲ್ಲಿ ತಲ್ಲೀನರಾಗಿರುವ ಸುಂದರ ದೃಶ್ಯ ಮನಸೂರೆಗೊಳ್ಳುತ್ತಿದೆ. ಅಜ್ಞಾನದ ಕಾರ್ಗತ್ತಲಿನಲ್ಲಿದ್ದ ಅರಬ್ಬ ಕಠೋರ ಜನರ ಮನಸ್ಸನ್ನು ಬದಲಾಯಿಸಿ, ಅವರಿಗೆ ಸಮಾನತೆಯ ಪಾಠವನ್ನು ಕಲಿಸಿ ಅವರನ್ನು ನಿಜವಾದ ಅರ್ಥದಲ್ಲಿ ಮನುಷ್ಯರನ್ನಾಗಿ ಮಾಡಿದ ಶಾಂತಿ–ಸಮಾನತೆಯ ಹರಿಕಾರ ಪ್ರವಾದಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸ್ಸಲ್ಲಮ್– ದೇವನ ಶಾಂತಿಯು ಅನುಗ್ರಹಗಳು ಅವರ ಮೇಲೆ ವರ್ಷಿಸುತ್ತಿರಲಿ) ಹಜ್ಜ್ ನಲ್ಲಿ ತನ್ನೊಂದಿಗೆ ಸೇರಿರುವ ಈ ಎಲ್ಲಾ ಅನುಯಾಯಿಗಳಿಗೆ ಹಜ್ಜ್ ನ ಆರಾಧನಾ ವಿಧಿಗಳನ್ನು ಕಲಿಸಿಕೊಡುತ್ತಿದ್ದಾರೆ.

ಮನುಷ್ಯರಿಗೆ ಅವರ ನೈಜ ಇಹ–ಪರದ ವಿಜಯದ ಮಾರ್ಗವನ್ನು ತೋರಿಸುವಲ್ಲಿ 20 ರಿಂದ 22 ವರ್ಷಗಳಷ್ಟು ಪ್ರವಾದಿವರ್ಯರು (ಸ) ಪಟ್ಟ ನಿರಂತರ ಪರಿಶ್ರಮ, ಈ ನಡುವೆ

ಶತ್ರುಗಳ ದೌರ್ಜನ್ಯ, ವಿರೋಧಿಗಳ ಕುತಂತ್ರಗಳಿಂದ ಅವರು ಸಹಿಸಿದ ಸಂಕಷ್ಟ, ಶತ್ರುಗಳ ಒಳ ಸಂಚುಗಳನ್ನು ವಿಫಲಗೊಳಿಸುವಲ್ಲಿ ಅವರು ಪಟ್ಟ ಶ್ರಮ, ಯುದ್ಧ–ಕದನಗಳಿಂದ ಉಂಟಾದ ಸಂದರ್ಭದಲ್ಲಿ ಅವರು ಅನುಭವಿಸಿದ ಕಷ್ಟ–ನಷ್ಟ, ಹೊಸ ಇಸ್ಲಾಮೀ ರಾಷ್ಟ್ರಕ್ಕೆ ಮಾದರಿ ಆಡಳಿತ ನೀಡಲಿಕ್ಕಾಗಿ ಹಗಲು–ರಾತ್ರಿ ಎನ್ನದೆ ಅದಕ್ಕೆ ರೂಪು–ರೇಷೆಗಳನ್ನು ನೀಡುವಲ್ಲಿ ನಿರತರಾಗಿದ್ದು, ಈ ಎಲ್ಲಾ ಕಾರಣಗಳಿಂದ ಪ್ರವಾದಿವರ್ಯರ (ಸ) ದೇಹವೀಗ ಬಲು ನಿತ್ರಾಣಗೊಂಡಿದೆ. ಪ್ರವಾದಿವರ್ಯರ (ಸ) ಸ್ಥಾನದಲ್ಲಿ ಬೇರಾದರೂ ಇದ್ದಿದ್ದರೆ ಎಂದೋ ಸೋಲೊಪ್ಪಿಕೊಂಡು ಹಾಸಿಗೆ ಹಿಡಿಯುತ್ತಿದ್ದರೇನೋ. ಇದೆಲ್ಲದರ ಹೊರತಾಗಿಯೂ, ಮನುಷ್ಯನೋರ್ವ ಬಲಹೀನ ಸೃಷ್ಟಿ. ಮನುಷ್ಯನ ಜೀವನದ 6 ದಶಕಗಳು ಕಳೆದ ಬಳಿಕ ದೇಹ ಬಳಲುವುದು, ಮುಪ್ಪು ಹೊಂದುವುದು, ಅನಾರೋಗ್ಯಕ್ಕೀಡಾಗುವುದು ಕೊನೆಗೊಂದು ದಿನ ಮರಣ ಹೊಂದುವುದು ಪ್ರಕೃತಿಯ ಸರ್ವೇ ಸಹಜ ಪ್ರಕ್ರಿಯೆ.

ಪ್ರವಾದಿವರ್ಯರೂ (ಸ) ವಯೋಸಹಜವಾಗಿ 11 ಹಿಜರಿಯಲ್ಲಿ (ಮದೀನಾಕ್ಕೆ ವಲಸೆ ಬಂದ ಹನ್ನೊಂದನೇ ವರ್ಷ) ಅನಾರೋಗ್ಯಕ್ಕೀಡಾದರು. ಪತ್ನಿ ಹ.ಆಯಿಷಾ (ರ) ಮತ್ತು ಸಹಚರರು ಎಲ್ಲ ವಿಧದಲ್ಲೂ ಪ್ರವಾದಿವರ್ಯರ (ಸ) ಆರೈಕೆಯಲ್ಲಿ ತೊಡಗಿದರು. ಅಂದು ಸೋಮವಾರ. 8 ಜೂನ್, 632ನೆಯ ಇಸವಿ. ಸದಾ ಸ್ವಚ್ಛತೆಯನ್ನು ಇಷ್ಟಪಡುತ್ತಿದ್ದ ಪ್ರವಾದಿ ಮುಹಮ್ಮದರು (ಸ) ದೇಹದಲ್ಲಿ ಎದ್ದೇಳಲೂ ಆಗದಷ್ಟು ನಿತ್ರಾಣವಿದ್ದರೂ, ತನ್ನ ಎಂದಿನ ಹವ್ಯಾಸದಂತೆ ದಂತವನ್ನು ಸ್ವಚ್ಛಗೊಳಿಸಿದರು. ಅದಾದ ಸ್ವಲ್ಪ ಹೊತ್ತಿನಲ್ಲೇ ಪ್ರವಾದಿ ಮುಹಮ್ಮದರು (ಸ), "ಅಲ್ಲಾಹನ ಹೊರತು ಬೇರಾರೂ ಆರಾಧನೆಗೆ ಅರ್ಹರಲ್ಲ. ಮರಣವು ಸಂಕಷ್ಟದಿಂದ ಕೂಡಿದೆ' ' ಎನ್ನುತ್ತಾ ಆಗಸದೆಡೆಗೆ ಮುಖಮಾಡಿದರು. ಆ ಬಳಿಕ "ದೇವನೇ ನನ್ನ ಅತ್ಯುನ್ನತ ಸಂಗಾತಿ" ಎಂದು ನುಡಿದು, ಈ ನಶ್ವರ ಲೋಕಕ್ಕೆ ಶಾಶ್ವತ ವಿದಾಯ ಹೇಳಿದರು. ಪ್ರವಾದಿವರ್ಯರ (ಸ) ಸಹಚರರು ಅವರ ಮರಣದಿಂದ ತೀವ್ರ ದುಃಖಕ್ಕೀಡಾದರು. ಕೆಲವರಂತೂ ತೀವ್ರ ಆಘಾತಕ್ಕೊಳಗಾಗಿ, ಅವರ ಮರಣವಾರ್ತೆಯನ್ನು ಒಪ್ಪಲೂ ಸಿದ್ಧರಿರಲಿಲ್ಲ. ಕೊನೆಗೆ ಪ್ರವಾದಿವರ್ಯರ (ಸ) ಆಪ್ತ ಸಂಗಾತಿ ಹ. ಅಬೂಬಕರ್ (ರ) ಎದ್ದುನಿಂತು, 'ಇದು ದೇವೇಚ್ಛೆ. ದೇವನು ತಾನಿಚ್ಛಿಸಿದ ತನಕ ಮುಹಮ್ಮದರನ್ನು (ಸ) ನಮ್ಮ ಬಳಿ ಇರಿಸಿದನು. ಈಗ

ಅವರನ್ನು ತನ್ನ ಬಳಿ ವಾಪಾಸು ಕರೆಸಿಕೊಂಡಿದ್ದಾನೆ. ನಾವೆಲ್ಲರೂ ದೇವನ ಇಚ್ಛೆಗೆ ಬದ್ಧರಾಗಿ ಬದುಕಬೇಕು. ನಾವು ಯಾವ ಅಲ್ಲಾಹನ ಆರಾಧನೆ ಮಾಡುತ್ತಿರುವೆವೋ ಅವನಿಗೆಂದೂ ಅಳಿವಿಲ್ಲ ಎಂಬುದನ್ನು ನಾವು ಚೆನ್ನಾಗಿ ಅರಿತಿರಬೇಕು.' ಎನ್ನುತ್ತಾ ತನ್ನ ಉಪದೇಶದ ಮೂಲಕ ಅಲ್ಲಿ ನೆರದಿದ್ದ ಪ್ರವಾದಿವರ್ಯರ (ಸ) ಸಹಚರರರನ್ನು ಸಮಾಧಾನ ಪಡಿಸಬೇಕಾಯಿತು. ಆ ಬಳಿಕವಷ್ಟೇ ಅವರೆಲ್ಲರೂ ಸಮಾಧಾನಗೊಂಡು ತಮ್ಮ ಸಾಮಾನ್ಯ ಸ್ಥಿತಿಗೆ ಮರಳಿದರು.

*********

# ಪ್ರವಾದಿವರ್ಯರ ಜೀವನಶೈಲಿ

ಪ್ರವಾದಿವರ್ಯರ (ಸ) ಜೀವನ ಶೈಲಿ ತುಂಬಾ ಸರಳವಾಗಿತ್ತು. ಯಾವಾಗಲೂ ದಪ್ಪ ಬಟ್ಟೆಯನ್ನು ಉಪಯೋಗಿಸುತ್ತಿದ್ದರು. ಅವರು ಕುರ್ತಾ, ಚಾದರ್ ಮತ್ತು ಪಂಚೆಯನ್ನು ಹೊರತುಪಡಿಸಿ ಬೇರಾವ ಬಟ್ಟೆಯನ್ನೂ ಧರಿಸುತ್ತಿರಲಿಲ್ಲ. ಅವರ ಆಹಾರ ಕ್ರಮ ಅದೆಷ್ಟು ಸರಳವಾಗಿತ್ತೆಂದರೆ ಇವತ್ತಿನ ಯಾವುದೇ ಬಡಕೂಲಿ ಕಾರ್ಮಿಕ ಇಷ್ಟು ಸರಳವಾದ ಆಹಾರವನ್ನು ಸೇವಿಸಲು ಸಿದ್ಧನಿರಲಿಕ್ಕಿಲ್ಲ. ಪಾತ್ರೆಯೊಂದರಲ್ಲಿ ಸ್ವಲ್ಪ ಪ್ರಮಾಣದ ಬಾರ್ಲಿ ಹಿಟ್ಟನ್ನು ಕುದಿಸಿ ಅದರ ಮೇಲೆ ಒಂದಿಷ್ಟು ಆಲಿವ್ ಎಣ್ಣೆ, ಜೀರಿಗೆ ಮತ್ತು ಕರಿಮೆಣಸು ಹಾಕಿದರೆ ಮುಗಿಯಿತು. ಪ್ರವಾದಿವರ್ಯರು (ಸ) ಸೇವಿಸಲು ಬೇಕಾದ ಆಹಾರ ತಯಾರು. ಹೆಚ್ಚಾಗಿ ಕೇವಲ ಖರ್ಜೂರ ಸೇವನೆಯಿಂದಲೇ ಪ್ರವಾದಿವರ್ಯರ (ಸ) ಜೀವನ ಸಾಗುತ್ತಿತ್ತು. ಒಟ್ಟಾರೆ ಯಾವ ಆಹಾರ ಸುಲಭವಾಗಿ ಲಭ್ಯವಾಗುತ್ತಿತೋ ಅದನ್ನೇ ಸೇವಿಸಿ ದೇವನಿಗೆ ಕೃತಜ್ಞತೆ ಅರ್ಪಿಸುತ್ತಿದ್ದರು.

ಪ್ರವಾದಿವರ್ಯರು (ಸ) ಸ್ವಚ್ಚತೆಯ ಕುರಿತು ಬಹಳ ಕಾಳಜಿ ವಹಿಸುತ್ತಿದ್ದರು. ಊಟದ ಮೊದಲು ಮತ್ತು ನಂತರ ಕಡ್ಡಾಯವೆಂಬಂತೆ ತನ್ನ ದಂತವನ್ನು ಮಿಸ್ವಾಕ್ ನಿಂದ (ಹಲ್ಲುಜ್ಜುವ ಬೇವಿನಂತಹ ಕಡ್ಡಿ) ಸ್ವಚ್ಛಗೊಳಿಸುತ್ತಿದ್ದರು. ಅಗತ್ಯಾನುಸಾರವಾಗಿ ತಲೆಗೆ ಎಣ್ಣೆಯನ್ನು ಹಚ್ಚುತ್ತಿದ್ದರು. ತಲೆಗೂದಲನ್ನು ಬಾಚಿ ಸದಾ ಒಪ್ಪ ಓರಣವಾಗಿಡುತ್ತಿದ್ದರು. ಖುದ್ದು ಪೊರಕೆ ಹಿಡಿದು ಮನೆಯ ಕಸ ಗುಡಿಸುತ್ತಿದ್ದರು. ತನ್ನ ಬಟ್ಟೆಯನ್ನು ಖುದ್ದು ಒಗೆಯುತ್ತಿದ್ದರು. ಬಟ್ಟೆ ಹರಿದುಹೋದರೆ ಅದನ್ನು ಖುದ್ದು ಹೊಲಿಯುತ್ತಿದ್ದರು. ಅವರ ಮನೆಯಲ್ಲಿ ಒಂದು ಮಂಚ, ಒಂದು ನೀರಿನ ಹೂಜಿ ಮತ್ತು ಒಂದು ಚಾಪೆಯ ಹೊರತು ಬೇರೇನೂ ಇರುತ್ತಿರಲಿಲ್ಲ. ಹೆಚ್ಚಾಗಿ ಅವರು ತಮ್ಮ ಕೆಲಸಗಳನ್ನು ತಾವೇ ಖುದ್ದು ಮಾಡಲು ಪ್ರಯತ್ನಿಸುತ್ತಿದ್ದರು. ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಕುರಿಗಳನ್ನು ಮೇಯಿಸುತ್ತಿದ್ದರು. ಮನೆಗೆಲಸಗಳಲ್ಲಿ ತಮ್ಮ ಪತ್ನಿಯರಿಗವರು ಸಹಾಯ ಮಾಡುತ್ತಿದ್ದರು. ಖುದ್ದು ಆಡಿನ ಹಾಲನ್ನು ಕರೆಯುತ್ತಿದ್ದರು. ಪಾದರಕ್ಷೆ ಕಿತ್ತು ಹೋದರೆ, ಕೂತು ಅದನ್ನು ಖುದ್ದು ಹೊಲಿಯುತ್ತಿದ್ದರು. ದಿನಸಿ ಸಾಮಾನುಗಳನ್ನು ಖುದ್ದು ಮಾರುಕಟ್ಟೆಯಿಂದ ಖರೀದಿಸಿ ತರುತ್ತಿದ್ದರು. ಒಂಟೆಗಳನ್ನು ಖುದ್ದು ಕಟ್ಟಿ, ಅವುಗಳಿಗೆ ಮೇವು

ಹಾಕುತ್ತಿದ್ದರು. ಒಟ್ಟಾರೆ ಇಂತಹ ಯಾವುದೇ ಕೆಲಸಗಳನ್ನು ಮಾಡಲು ಅವರಿಗೆ ಯಾವುದೇ ರೀತಿಯ ಸಂಕೋಚ ಎದುರಾಗುತ್ತಿರಲಿಲ್ಲ. ಅವರು ಮುಸ್ಲಿಮರೊಂದಿಗೆ ಸೇರಿ ಮಸೀದಿ ಕಟ್ಟಡದ ಕೆಲಸದಲ್ಲಿ ಭಾಗಿಯಾದರು. ಅದರ ಕಾಮಗಾರಿಯಲ್ಲಿ ಖುದ್ದು ಕಾರ್ಮಿಕನಂತೆ ದುಡಿದರು. ಎಲ್ಲಿಯೂ ಇವೆಲ್ಲವೂ ತನ್ನ ಘನತೆಗೆ ಕುಂದುಂಟು ಮಾಡಿಸುವ ಕೆಲಸಗಳೆಂದು ಅವರು ಭಾವಿಸಲಿಲ್ಲ.

ಯಾವುದೇ ಕೆಲಸ ಅಥವ ವೃತ್ತಿಯು ಕೀಳಾಗಿರುವುದಿಲ್ಲ. ಪ್ರತಿಯೋರ್ವರು ತಮ್ಮ ವೃತ್ತಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂಬುದನ್ನು ಪ್ರವಾದಿವರ್ಯರು (ಸ) ಪ್ರಾಯೋಗಿಕವಾಗಿ ಕಲಿಸಿದರು.

ಪ್ರವಾದಿವರ್ಯರು (ಸ) ತುಂಬಾ ನಯ ವಿನಯವುಳ್ಳ, ಎಲ್ಲರೊಂದಿಗೂ ಬೆರೆಯುವ ಮೃದು ವ್ಯಕ್ತಿತ್ವದವರಾಗಿದ್ದರು. ಯಾರಾದರೂ ತನಗೆ ಗೌರವ ಸಲ್ಲಿಸಲಿಕ್ಕಾಗಿ ಎದ್ದು ನಿಂತರೆ ಅವರನ್ನು ಎದ್ದು ನಿಲ್ಲದಂತೆ ಸೂಚಿಸುತ್ತಿದ್ದರು. ಯಾವುದೇ ಬಡವ್ಯಕ್ತಿ ಅಥವಾ ಗುಲಾಮರು ಊಟದ ಆಮಂತ್ರಣ ನೀಡಿದರೆ ಯಾವುದೇ ಹಮ್ಮು ಬಿಮ್ಮಿಲ್ಲದೆ ಅವರ ಜೊತೆ ಹೋಗಿ ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ಯಾವುದಾದರೂ ಸಭೆಗೆ ಹೋದರೆ ಎಲ್ಲರೊಂದಿಗೂ ಬೆರೆತು ಸಾಮಾನ್ಯ ವ್ಯಕ್ತಿಯಂತೆ ಒಂದೆಡೆ ಕುಳಿತುಕೊಳ್ಳುತ್ತಿದ್ದರು. ಸಭೆಯ ಮಧ್ಯೆ ಯಾರಾದರೂ ಮಾತನಾಡಲು ಬಯಸಿದರೆ ಅವರಿಗೆ ಮಾತನಾಡಲು ಅವಕಾಶ ಮಾಡಿ ಕೊಡುತ್ತಿದ್ದರು. ಅವರ ಮಾತು ಮುಗಿಯುವ ತನಕ ಅವರನ್ನು ಮಧ್ಯೆ ತಡೆಯುವುದಾಗಲಿ ಅಥವಾ ಅವರ ಮಾತಿನ ಮಧ್ಯೆ ತನ್ನ ಮಾತನ್ನು ತೂರಿಸುವುದಾಗಲೀ ಮಾಡುತ್ತಿರಲಿಲ್ಲ. ತನಗೇನಾದರೂ ಹೇಳಲು ಇದ್ದರೆ ಬಹಳ ಮೃದುಧಾಟಿಯಲ್ಲಿ ವಿನಯಪೂರ್ವಕವಾಗಿ ತನ್ನ ಮಾತನ್ನ ಜನರ ಮುಂದಿರಿಸುತ್ತಿದ್ದರು.

ಪ್ರವಾದಿವರ್ಯರ (ಸ) ಹೃದಯ ದ್ವೇಷ–ಸೇಡು, ಪ್ರತೀಕಾರ, ಕಠೋರತೆ ಮತ್ತು ವಿಕಾರ ಮನೋಕಾಮನೆಗಳಿಂದ ಮುಕ್ತವಾದ ಹೃದಯವಾಗಿತ್ತು. ಸದಾ ಜನರ ತಪ್ಪನ್ನು ಕಡೆಗಣಿಸುವ, ಅವರನ್ನು ಕ್ಷಮಿಸುವ ಸಜ್ಜನ ಮನೋಭಾವದವರಾಗಿದ್ದರು ಪ್ರವಾದಿವರ್ಯರು (ಸ). ಪ್ರವಾದಿವರ್ಯರು (ಸ) ಎಷ್ಟು ಉನ್ನತಮಟ್ಟದ ಕ್ಷಮಾಮನೋಭಾವ ಹೊಂದಿದ ವ್ಯಕ್ತಿಯಾಗಿದ್ದರು ಎಂಬುದನ್ನು ಮಕ್ಕಾದ ವಿಜಯದ ವೇಳೆ ಎದುರಾದ ಸನ್ನಿವೇಶಗಳಿಂದ ನಾವು

ತಿಳಿದುಕೊಂಡಿದ್ದೇವೆ. ಸತ್ಯ–ಪ್ರಾಮಾಣಿಕತೆ ಮತ್ತು ದಯೆ ಅವರ ವ್ಯಕ್ತಿತ್ವದ ಬಹುದೊಡ್ಡ ಭಾಗವಾಗಿತ್ತು. ಸತ್ಯ–ಪ್ರಾಮಾಣಿಕತೆಯೊಂದಿಗೆ ನೀತಿವಂತರಾಗಿ ಬದುಕಬೇಕೆಂದು ಅವರು ಸದಾ ತನ್ನ ಅನುಯಾಯಿಗಳಿಗೆ ಬೋಧಿಸುತ್ತಿದ್ದರು. ಅವರ ಮಹಾ ಔದಾರ್ಯವಂತ ವ್ಯಕ್ತಿಯಾಗಿದ್ದರು. ಅವರ ಬಳಿ ಸಹಾಯ ಕೇಳಿಕೊಂಡು ಬರುತ್ತಿದ್ದ ಯಾವುದೇ ವ್ಯಕ್ತಿಯನ್ನು ಅವರು ಖಾಲಿ ಕೈಯಲ್ಲಿ ಕಳುಹಿಸಿದ ಉದಾಹರಣೆಗಳಿಲ್ಲ. ಸ್ವತಃ ತಾನು ಸಂಕಷ್ಟ ಸಹಿಸಿಕೊಂಡು, ಉಪವಾಸವಿದ್ದುಕೊಂಡು ಅನ್ಯರಿಗೆ ಉಣಿಸುವ, ಅನ್ಯರ ಸಂಕಷ್ಟಗಳನ್ನು ದೂರೀಕರಿಸಲು ಪ್ರಯತ್ನಿಸುವ ಮಹಾನ್ ವ್ಯಕ್ತಿತ್ವ ಅವರದ್ದಾಗಿತ್ತು. ಅವರೆಂದೂ ತನಗಾಗಿ ಸಂಪತ್ತನ್ನು ಸಂಗ್ರಹಿಸಿಡಲಿಲ್ಲ. ಅವರ ಬಳಿ ಒಂದಿಷ್ಟು ಹಣ ಜಮೆಯಾಗುತ್ತಲೇ ಅದನ್ನು ಬಡಜನರ ನಡುವೆ ಹಂಚುವ ತನಕ ಅವರಿಗೆ ಸಮಾಧಾನವಿರುತ್ತಿರಲಿಲ್ಲ. ಬಡವರು, ನಿರ್ಗತಿಕರು ಅನಾಥರ ಸಹಾಯಕ್ಕಾಗಿ ಅವರು ಸದಾ ಸಿದ್ಧರಿರುತ್ತಿದ್ದರು. ಮಾಲಕರಿಗೆ ಗುಲಾಮರ ಹಕ್ಕುಗಳೇನು ಎಂಬುದನ್ನು ಅವರು ತೋರಿಸಿಕೊಟ್ಟರು. ಗುಲಾಮರ ವಿಷಯದಲ್ಲಿ ದೇವನನ್ನು ಭಯಪಡಿ, ಸಾಧ್ಯವಾದರೆ ಅವರನ್ನು ವಿಮೋಚಿಸಿ ದೇವನ ಕೃಪೆಗೆ ಪಾತ್ರರಾಗಿ ಎಂದವರು ಮಾಲಕರಿಗೆ ಸದಾ ಬೋಧಿಸುತ್ತಿದ್ದರು. ಸ್ತ್ರೀ ಶೋಷಕ ಸಮಾಜದಲ್ಲಿದ್ದ ಪುರುಷರಿಗವರು, ಒಬ್ಬ ಪುರುಷನ ಮೇಲೆ ಸ್ತ್ರೀಯರು ಮತ್ತು ಮಕ್ಕಳ ಹಕ್ಕುಬಾಧ್ಯತೆಗಳೇನು ಎಂಬುದನ್ನು ಅವರು ತುಂಬಾ ಚೆನ್ನಾಗಿ ಮನವರಿಕೆ ಮಾಡಿಕೊಟ್ಟರು.

ಯಾರಾದರೂ ಅನಾರೋಗ್ಯಕ್ಕೀಡಾಗುತ್ತಿದ್ದರೆ ಸುದ್ದಿ ಸಿಕ್ಕಿದರೆ, ಅವರನ್ನು ಭೇಟಿಯಾಗಿ ಸಾಂತ್ವನ ನೀಡಲು ಹೋಗುತ್ತಿದ್ದರು. ಯಾರಾದರೂ ಮರಣಕ್ಕೀಡಾಗಿರುತ್ತಿದ್ದರೆ ಅವರ ಶವಸಂಸ್ಕಾರದಲ್ಲವರು ಭಾಗಿಯಾಗುತ್ತಿದ್ದರು. ಇದಂತೂ ಮನುಷ್ಯರ ಮಾತಾಯಿತು. ಮೂಕಪ್ರಾಣಿಗಳ ಮೇಲೂ ಅವರು ಬಹಳ ಕನಿಕರ ಹೊಂದಿದವರಾಗಿದ್ದರು. ಅರಬರ ನಡುವೆ ಚಾಲ್ತಿಯಲ್ಲಿದ್ದ, ಪ್ರಾಣಿಗಳ ನಡುವೆ ಕಾದಾಟವನ್ನು ಏರ್ಪಡಿಸಿ ಮೋಜು ಪಡುತ್ತಿದ್ದಂತಹ ಕ್ರೌರ್ಯ ಪದ್ಧತಿಗಳನ್ನವರು ಸಂಪೂರ್ಣವಾಗಿ ನಿಷಿದ್ಧಗೊಳಿಸಿದರು. ಯಾರಾದರೂ ತನ್ನ ಒಂಟೆಗೆ ಸರಿಯಾಗಿ ಮೇವು ಹಾಕದೆ ಅದನ್ನು ಬೇಕಾಬಿಟ್ಟಿ ದುಡಿಸಿಕೊಳ್ಳುತ್ತಿದ್ದರೆ, 'ತಮ್ಮ ಬಳಿಯಿರುವ ಪ್ರಾಣಿಗಳ ಮೇಲೆ ದೌರ್ಜನ್ಯವೆಸಗದಿರಿ, ಈ ವಿಷಯದಲ್ಲಿ ದೇವನನ್ನು ಭಯಪಡಿ

ಎಂದವರು ಬೋಧಿಸುತ್ತಿದ್ದರು. ಅತಿಥಿ ಸತ್ಕಾರದಲ್ಲಿ ಪ್ರವಾದಿವರ್ಯರನ್ನು (ಸ) ಮೀರಿಸುವವರಿರಲಿಲ್ಲ. ತಾವು ಸ್ವತಃ ಹಸಿವಿನಿಂದಿದ್ದರೂ ಅತಿಥಿ ಸತ್ಕಾರದಲ್ಲಿ ಯಾವುದೇ ಕುಂದು–ಕೊರತೆಯುಂಟಾಗದಂತೆ ಅವರು ನೋಡಿಕೊಳ್ಳುತ್ತಿದ್ದರು. ಪ್ರವಾದಿವರ್ಯರ (ಸ) ಮಾತು ಕೇಳುಗರಿಗೆ ತುಂಬಾ ಮುದ ಕೊಡುತ್ತಿತ್ತು. ಎಲ್ಲರೊಂದಿಗೂ ತುಂಬಾ ಮೃದುಧ್ವನಿಯಲ್ಲಿ ಮಾತನಾಡುತ್ತಿದ್ದರು. ಪ್ರವಾದಿವರ್ಯರು (ಸ) ಯಾರನ್ನೂ ಶಪಿಸುತ್ತಿರಲಿಲ್ಲ. ಅವರು ಎಷ್ಟು ದೃಢ ದೇವವಿಶ್ವಾಸಿಗರಾಗಿದ್ದರೆಂದರೆ, ಬದುಕಿನಲ್ಲಿ ಎಷ್ಟೇ ಸಂಕಷ್ಟದ ಸನ್ನಿವೇಶ ಎದುರಾದರೂ ಸ್ವಲ್ಪವೂ ಧೈರ್ಯವನ್ನು ಕಳೆದುಕೊಳ್ಳುತ್ತಿರಲಿಲ್ಲ. ದೇವ ಸಹಾಯದ ಮೇಲೆ ಇದ್ದ ಈ ದೃಢವಿಶ್ವಾಸದಿಂದಾಗಿಯೇ ಹಲವಾರು ಬಾರಿ ಕೆಲವೇ ಕೆಲವು ಬೆರಳಣಿಕೆಯಷ್ಟಿದ್ದ ತನ್ನ ಸಹಚರರೊಂದಿಗೆ ಕುರೈಷರ ಬಲಿಷ್ಠ ಸೇನೆಯನ್ನವರು ಬಹಳ ಯಶಸ್ವಿಯಾಗಿ ಎದುರಿಸುತ್ತಿದ್ದರು. ಕುರೈಷರು ಪ್ರವಾದಿವರ್ಯರ (ಸ) ಹತ್ಯೆಗೆ ಸಂಚು ಮಾಡುತ್ತಿದ್ದಾಗ, ಅವರಿಂದ ಬಚಾವಾಗಲು ಸೌರ್ ಗುಹೆಯಲ್ಲಿ ಅಡಗಿದ್ದ ಸಂದರ್ಭ, ಕುರೈಷ್ ಸೈನ್ಯದ ಹೆಜ್ಜೆಯ ಸಪ್ಪಳ ಸೌರ್ ಗುಹೆಯ ದ್ವಾರದ ಬಳಿ ಕೇಳತೊಡಗಿದ ಬಹು ಆತಂಕದ ಕ್ಷಣ; ಆಗ, ಅವರೊಂದಿಗಿದ್ದ ಅವರ ಆಪ್ತ ಸಂಗಾತಿ ಅಬೂಬಕರ್ (ರ) ಹೆದರಿ 'ಕುರೈಷರು ನಮ್ಮಿಬ್ಬರನ್ನು ಇನ್ನೇನು ಹಿಡಿದೇ ಬಿಟ್ಟರು' ಎಂದು ತನ್ನ ಆತಂಕವನ್ನು ತೋಡಿಕೊಂಡಾಗ, ಸ್ವಲ್ಪವೂ ಧೃತಿಗೆಡದೆ 'ಭಯ ಪಡದಿರಿ. ಸತ್ಯದ ಹಾದಿಯಲ್ಲಿರುವ ನಮ್ಮೊಂದಿಗೆ ದೇವನಿದ್ದಾನೆ. ಅವನು ಖಂಡಿತವಾಗಿಯೂ ನಮ್ಮನ್ನು ರಕ್ಷಿಸುವನು' ಎಂದು ಶಾಂತವಾಗಿ ಅಬೂಬಕರನ್ನು ಪ್ರವಾದಿ ಮುಹಮ್ಮದರು (ಸ) ಸಂತೈಸುತ್ತಾರೆ. ಅಬ್ಬಾ! ದೇವನ ಮೇಲೆ ಅದೆಷ್ಟು ದೃಢವಿಶ್ವಾಸ.

*********

## ಪ್ರವಾದಿವರ್ಯರ (ಸ) ಜೀವನದ ಕೆಲವು ಸ್ವಾರಸ್ಯಕರ ಘಟನೆಗಳು

ನಾವು ಈ ಕೆಳಗೆ ಪ್ರವಾದಿವರ್ಯರ (ಸ) ಜೀವನದ ಕೆಲವು ಮಹತ್ವದ ಘಟನೆಗಳನ್ನು ಪಟ್ಟಿ ಮಾಡುತ್ತಿದ್ದೇವೆ. ಇದರಿಂದ ದೇವನು ಅವರೊಳಗೆ ಎಷ್ಟೊಂದು ಒಳಿತನ್ನು ಇಟ್ಟಿರುವನೆಂಬುದರ ಅರಿವಾಗುತ್ತದೆ.

1. ಪ್ರವಾದಿವರ್ಯರು (ಸ) ಮದೀನಾದಲ್ಲಿ ನೆಲೆಸಿರುವಾಗ ಓರ್ವ ಯಹೂದಿ ಮತ್ತು ಮುಸ್ಲಿಮನ ನಡುವೆ ತೀವ್ರ ಜಗಳವಾಯಿತು. ಈ ಜಗಳದ ತೀರ್ಮಾನವನ್ನು ಪ್ರವಾದಿವರ್ಯರಿಗೆ (ಸ) ವಹಿಸಿಕೊಡಲಾಯಿತು. ಪ್ರವಾದಿವರ್ಯರು (ಸ) ಈ ಕುರಿತು ಸಂಪೂರ್ಣವಾದ ತನಿಖೆ ನಡೆಸಿ, ನ್ಯಾಯ ಯಹೂದಿಯ ಪರ ಇದ್ದ ಕಾರಣ ಅವನ ಪರವಾಗಿ ತೀರ್ಪಿತ್ತರು. ಪ್ರವಾದಿವರ್ಯರು (ಸ) ಯಾವುದೇ ಪಕ್ಷಪಾತವನ್ನೂ ಮಾಡಲಿಲ್ಲ ಮುಸ್ಲಿಮನು ತನ್ನ ಕುರಿತು ಅಸಂತುಷ್ಟನಾಗಬಹುದು ಎಂಬುದನ್ನೂ ಅವರಿಲ್ಲಿ ಗಣನೆಗೆ ತೆಗೆದುಕೊಳ್ಳಲಿಲ್ಲ.
2. ಕಳ್ಳತನ ಮಾಡಿದ ವ್ಯಕ್ತಿಯೋರ್ವನನ್ನು ಬಂಧಿಸಿ, ಪ್ರವಾದಿವರ್ಯರ (ಸ) ಮುಂದೆ ಹಾಜರು ಪಡಿಸಲಾಯಿತು. ಆ ಅಪರಾಧಿ ವ್ಯಕ್ತಿಗೆ ಯಾವುದೇ ರೀತಿಯ ಶಿಕ್ಷೆಗೊಳಪಡಿಸದೆ ಕ್ಷಮೆ ನೀಡಬೇಕು ಎಂದು ಅನೇಕ ಘಟಾನುಘಟಿ ವ್ಯಕ್ತಿಗಳು ಪ್ರವಾದಿವರ್ಯರಲ್ಲಿ (ಸ) ಶಿಫಾರಸ್ಸು ಮಾಡಿದರು. ಪ್ರವಾದಿವರ್ಯರು (ಸ) ಯಾರ ಶಿಫಾರಸ್ಸನ್ನು ಪರಿಗಣಿಸದೆ ನ್ಯಾಯಕ್ಕೆ ಪ್ರಾಶಸ್ತ್ಯ ನೀಡುತ್ತಾ, ಷರೀಅತ್ ನ ಆಜ್ಞೆಗನುಗುಣವಾಗಿ ಅಪರಾಧಿ ವ್ಯಕ್ತಿಯ ಕೈ ಕಡಿಯುವಂತೆ ತೀರ್ಪಿತ್ತರು. ಜೊತೆಗೆ ಶಿಫಾರಸ್ಸು ಮಾಡಿದ ಜನರನ್ನುದ್ದೇಶಿಸಿ: ಒಂದು ವೇಳೆ ನನ್ನ ಸ್ವಂತ ಪುತ್ರಿ ಫಾತಿಮಾ ಕಳ್ಳತನವೆಸಗಿದ್ದರೂ ನಾನು ಅವಳ ಕೈ ಕಡಿಯುವ ಆದೇಶವನ್ನೇ ನೀಡುತ್ತಿದ್ದೆ ಎಂದುತ್ತರಿಸದರು.
3. ಪ್ರವಾದಿವರ್ಯರು (ಸ) ಯಹೂದಿ ವ್ಯಕ್ತಿಯೋರ್ವನ ಬಳಿ ಸಾಲ ಪಡೆದಿದ್ದರು. ನೀಡಬೇಕಾಗಿದ್ದ ಸಮಯಕ್ಕೆ ಮುಂಚಿತವಾಗಿಯೇ ಪ್ರವಾದಿವರ್ಯರ (ಸ) ಬಳಿ ಬಂದು

ಈಗಿಂದೀಗಲೇ ಸಾಲ ಪಡೆದ ಹಣವನ್ನು ಮರಳಿಸಬೇಕು ಎನ್ನುತ್ತಾ ಕಟುವಾಗಿ ವರ್ತಿಸತೊಡಗಿದ. ಇದನ್ನು ನೋಡುತ್ತಿದ್ದ ಪ್ರವಾದಿವರ್ಯರ (ಸ) ಆಪ್ತ ಸಂಗಾತಿ ಹ. ಉಮರ್ (ರ) ಅವರಿಗೆ ಕೋಪ ಬಂತು. ಅವರು ಯಹೂದಿ ವ್ಯಕ್ತಿಯನ್ನು ಗದರಿಸತೊಡಗಿದರು. ಆಗ ಪ್ರವಾದಿವರ್ಯರು (ಸ) ಉಮರ್ ರನ್ನುದ್ದೇಶಿಸಿ,"ಉಮರ್, ನೀವು ಪ್ರತಿಕ್ರಿಯಿಸುತ್ತಿರುವ ರೀತಿ ಸರಿಯಾದುದಲ್ಲ. ಸಾಲ ಕೊಟ್ಟ ವ್ಯಕ್ತಿಗೆ ಮೃದು ಧೋರಣೆ ಪಾಲಿಸುವಂತೆಯೂ, ಸಾಲ ಪಡೆದ ವ್ಯಕ್ತಿಯ ಬಳಿ (ಅರ್ಥಾತ್ ತನ್ನ ಬಳಿ), ಉತ್ತಮ ರೀತಿಯಲ್ಲಿ ಮರುಪಾವತಿ ಮಾಡುವಂತೆಯೂ ನೀವು ಉಪದೇಶಿಸಬೇಕಿತ್ತು." ಎಂದರು. ಆ ಬಳಿಕ ಪ್ರವಾದಿವರ್ಯರು (ಸ) ಸಾಲನೀಡಿದ ಯಹೂದಿಯನ್ನು ತನ್ನ ಪಕ್ಕದಲ್ಲಿ ಕೂರಿಸಿಕೊಂಡು, ನೀಡಬೇಕಾಗಿದ್ದ ಮೊತ್ತಕ್ಕಿಂತ ತುಸು ಹೆಚ್ಚು ಮೊತ್ತವನ್ನು ನೀಡಿ ಬೀಳ್ಕೊಟ್ಟರು. ಪ್ರವಾದಿವರ್ಯರ ಉನ್ನತ ವ್ಯಕ್ತಿತ್ವಕ್ಕೆ ಮಾರು ಹೋದ ಆ ಯಹೂದಿ ವ್ಯಕ್ತಿಯು ಪ್ರವಾದಿವರ್ಯರ (ಸ) ಅನುಯಾಯಿಯಾಗಿ ಮಾರ್ಪಟ್ಟನು.

4. ಒಮ್ಮೆ ಪ್ರವಾದಿವರ್ಯರು (ಸ) ತಮ್ಮ ಸಹಚರರೊಂದಿಗೆ ತಿರುಗಾಡುತ್ತಾ ಅರಣ್ಯದಂತಹ ಪ್ರದೇಶಕ್ಕೆ ತಲುಪಿದರು. ಊಟದ ಹೊತ್ತು ಸಮೀಪಿಸಿದಾಗ ಅಡುಗೆ ಮಾಡಲು ಬೇಕಾದ ಕಟ್ಟಿಗೆಯನ್ನು ಸ್ವತಃ ಸಂಗ್ರಹಿಸಲು ಪ್ರಾರಂಭಿಸಿದರು. ಇದರಿಂದ ಪ್ರವಾದಿವರ್ಯರು (ಸ) ಯಾವುದೇ ಕೆಲಸವನ್ನು ತುಚ್ಛವೆಂದು ಭಾವಿಸುತ್ತಿರಲಿಲ್ಲ ಎಂಬುದು ವ್ಯಕ್ತವಾಗುತ್ತದೆ. ಇಂತಹ ಕೆಲಸ ಮಾಡುವುದರಿಂದ ತನ್ನ ಘನತೆಗೆ ಧಕ್ಕೆ ಒದಗಬಹುದೆಂಬ ಯಾವುದೇ ನಕರಾತ್ಮಕ ಭೀತಿ ಅವರಲ್ಲಿರಲಿಲ್ಲ ಎಂಬುದೂ ಇದರಿಂದ ಸ್ಪಷ್ಟವಾಗುತ್ತದೆ.

5. ಒಮ್ಮೆ ವ್ಯಕ್ತಿಯೋರ್ವನನ್ನು ಅವನು ಮಾಡಿದ ಅಪರಾಧದ ವಿಚಾರಣೆಗಾಗಿ ಪ್ರವಾದಿವರ್ಯರ (ಸ) ಮುಂದೆ ಹಾಜರುಪಡಿಸಲಾಯಿತು. ಅವನನ್ನು ಪ್ರವಾದಿವರ್ಯರ (ಸ) ಮುಂದೆ ತಂದಾಗ ಹೆದರಿಕೆಯಿಂದ ತೀವ್ರವಾಗಿ ಕಂಪಿಸತೊಡಗಿದ. ಆಗ ಪ್ರವಾದಿವರ್ಯರು (ಸ), 'ಅರೆ!, ಏಕೆ ಇಷ್ಟೊಂದು ಹೆದರುತ್ತಿ?. ನಾನು ರಾಜನಾಗಲಿ, ರಾಜಮನೆತನದವನಾಗಲಿ ಅಲ್ಲ. ಹಸಿವೆಯನ್ನು ತಣಿಸಲಿಕ್ಕಾಗಿ ಏನು ಸಿಗದೇ

ಒಣಮಾಂಸವನ್ನು ಸೇವಿಸಿ ಬದುಕು ಸಾಗಿಸುತ್ತಿದ್ದ ಬಡ ಕುರೈಷ್ ಮಹಿಳೆಯ ಮಗ ನಾನು.' ಎಂದರು.

6. ಪ್ರವಾದಿವರ್ಯರ (ಸ) ಸಂಗಾತಿಗಳು ಶತ್ರುಗಳೊಂದಿಗೆ ಹೋರಾಡಲು ಹೊರಹೋಗಿದ್ದ ಸಂದರ್ಭ. ಮದೀನಾದ ಬಡ ಮಹಿಳೆಯರ ಮನೆಗಳಲ್ಲಿ ಆಡಿನ ಹಾಲನ್ನು ಕರೆಯುವ ಪುರುಷರು ಯಾರೂ ಇರಲಿಲ್ಲ. ಮಹಿಳೆಯರಿಗಂತೂ ಹಾಲು ಕರೆಯಲು ಬರುತ್ತಿರಲಿಲ್ಲ. ಪ್ರವಾದಿವರ್ಯರು (ಸ) ಪ್ರತಿದಿನ ಅವರ ಮನೆಗಳಿಗೆ ಹೋಗಿ ಆಡಿನ ಹಾಲನ್ನು ಕರೆದು ಕೊಟ್ಟು ಬರುತ್ತಿದ್ದರು. ಇದೇ ರೀತಿ ಯಾರೇ ತಮ್ಮ ಕೆಲಸಕ್ಕೆ ಸಹಾಯ ಕೇಳಿಕೊಂಡು ಪ್ರವಾದಿವರ್ಯರ (ಸ) ಬಳಿ ಬರುತ್ತಿದ್ದರೂ, ಅವರು ಖುದ್ದು ಎದ್ದು ಹೋಗಿ ಅವರ ಕೆಲಸದಲ್ಲಿ ಸಹಾಯ ಮಾಡಿ ಬರುತ್ತಿದ್ದರು.

7. ಒಮ್ಮೆ ಕೆಲವು ಗ್ರಾಮೀಣ ಅರಬರು ಪ್ರವಾದಿವರ್ಯರ (ಸ) ಬಳಿ ಅತಿಥಿಗಳಾಗಿ ಬಂದರು. ಅವರ ಪೈಕಿ ವ್ಯಕ್ತಿಯೋರ್ವನು ರಾತ್ರಿ ಊಟದಲ್ಲಿ ಆವಶ್ಯಕತೆಗಿಂತ ಹೆಚ್ಚು ಆಹಾರ ಸೇವಿಸಿದ ಕಾರಣ ಆತನಿಗೆ ಅತಿಸಾರ ಭೇದಿ ಶುರು ಆಯಿತು. ಅವನು ಮಲಗಿದ್ದ ಹಾಸಿಗೆ ತುಂಬಾ ಕೊಳಕಾಯಿತು. ಲಜ್ಜೆಯಿಂದಾಗಿ ಬೆಳ್ಳಂಬೆಳಗ್ಗೆ ಆ ವ್ಯಕ್ತಿಯು ಅಲ್ಲಿಂದ ಕಾಲ್ಕಿತ್ತನು. ಪ್ರವಾದಿವರ್ಯರು (ಸ) ಅವನು ಮಲಗಿದ್ದ ಹಾಸಿಗೆಯನ್ನು ತಮ್ಮ ಕೈಯಾರೆ ಸ್ವಚ್ಛಗೊಳಿಸತೊಡಗಿದರು. ಅವರ ಸಹಚರರು, 'ನಾವೆಲ್ಲ ಇರುವಾಗ ನೀವ್ಯಾಕೆ ತೊಂದರೆ ತೆಗೆದುಕೊಳ್ಳುತ್ತೀರಿ' ಎಂದು ಕೇಳಿದರು. ಆಗ ಪ್ರವಾದಿವರ್ಯರು (ಸ), 'ನನ್ನ ಬಳಿ ಉಳಿದುಕೊಂಡಿದ್ದ ಅತಿಥಿಗಳ ಸೇವೆ ಮಾಡುವುದು ನನ್ನ ಮೇಲಿನ ಬಾಧ್ಯತೆ ತಾನೇ?' ಎಂದುತ್ತರಿಸಿದರು.

8. ಒಮ್ಮೆ ಶ್ರೀಮಂತ ವ್ಯಕ್ತಿಯೋರ್ವರು ನಾಲ್ಕು ಒಂಟೆಗಳು ಹೊರವಷ್ಟು ಧವಸ–ಧಾನ್ಯಗಳನ್ನು ಇಟ್ಟು ಪ್ರವಾದಿವರ್ಯರ (ಸ) ಬಳಿ ಉಡುಗೊರೆಯ ರೂಪದಲ್ಲಿ ಕಳುಹಿಸಿದರು. ಪ್ರವಾದಿವರ್ಯರ (ಸ) ಅಣತಿಯಂತೆ ಅವರ ಸೇವಕ ಹ. ಬಿಲಾಲ್ (ರ) ಅವುಗಳನ್ನು ಮಾರಿ, ಬಂದ ಹಣದಲ್ಲಿ ಪ್ರವಾದಿವರ್ಯರ (ಸ) ಮೇಲಿದ್ದ ಸಾಲವನ್ನು ತೀರಿಸಿದರು. ಹ.ಬಿಲಾಲ್ (ರ) ವಾಪಾಸ್ಸಾದ ಬಳಿಕ ಪ್ರವಾದಿವರ್ಯರು (ಸ) 'ಬಂದ ಧವಸ

ಧಾನ್ಯಗಳಲ್ಲೇನಾದರೂ ಉಳಿದಿದೆಯೇ?' ಎಂದು ಕೇಳಿದರು. ಸ್ವಲ್ಪ ಪ್ರಮಾಣದಲ್ಲಿ ಉಳಿದಿರುವುದಾಗಿ ಬಿಲಾಲ್ ಉತ್ತರಿಸಿದರು. 'ಎಲ್ಲಿಯ ತನಕ ಉಳಿದ ಧಾನ್ಯಗಳು ಬಡವರ ಮಧ್ಯೆ ಹಂಚಿಕೆಯಾಗುವುದಿಲ್ಲವೋ ಅಲ್ಲಿಯ ತನಕ ನಾನು ಮನೆಗೆ ಮರಳಲಾರೆ' ಎನ್ನುತ್ತಾ ರಾತ್ರಿ ಪೂರ್ತಿ ಮಸೀದಿಯಲ್ಲೇ ಕಳೆದರು ಪ್ರವಾದಿವರ್ಯರು (ಸ). ಮರುದಿನ ಎಲ್ಲ ಧವಸಧಾನ್ಯಗಳು ಹಂಚಿಕೆಯಾದ ಬಳಿಕವೇ ಅವರು ಮನೆಗೆ ತೆರಳಿದರು. ಇದು ಪ್ರವಾದಿವರ್ಯರ (ಸ) ಉಜ್ವಲ ವ್ಯಕ್ತಿತ್ವವಾಗಿತ್ತು.

*********

## ಪ್ರವಾದಿವರ್ಯರ (ಸ) ಬೋಧನೆ

ಪ್ರವಾದಿವರ್ಯರು (ಸ) ನಾಲ್ಕು ಖಡ್ಡಾಯ ಕರ್ಮಗಳನ್ನು ಮುಸ್ಲಿಮರ ಮೇಲೆ ವಿಧಿಸಿದ್ದಾರೆ.

1. ನಮಾಝ್
2. ಉಪವಾಸ
3. ಝಕಾತ್
4. ಹಜ್ಜ್

ಇವುಗಳ ಪೈಕಿ ಹಜ್ಜ್ ಮತ್ತು ಝಕಾತ್ ಅವುಗಳನ್ನು ಭರಿಸುವ ಸಾಮರ್ಥ್ಯ ಹೊಂದಿದ ಅನುಕೂಲಸ್ಥರ ಮೇಲಷ್ಟೆ ಕಡ್ಡಾಯವಾಗಿವೆ.

- ಅವರು ಏಕೈಕ ದೇವನಾದ ಅಲ್ಲಾಹನ ಆರಾಧನೆ ಮಾತ್ರ ಮಾಡಬೇಕು. ಆರಾಧನೆಗೆ ಕೇವಲ ಆ ಏಕದೇವನಷ್ಟೇ ಅರ್ಹನು. ಬೇರೆಲ್ಲರೂ ಅವನ ದಾಸರು. ಮನುಷ್ಯರೆಲ್ಲರೂ ಒಂದೇ ತಂದೆ–ತಾಯಿಯ ಮಕ್ಕಳು. ಅವರ ಪೈಕಿ ಮೇಲು–ಕೀಳೆಂಬ ಬೇಧ ಭಾವ ಸಲ್ಲದು. ಅವರೆಲ್ಲರೂ ಸಮಾನರು. ಅವರ ಪರಸ್ಪರ ಹಕ್ಕುಗಳು ಕೂಡ ಸಮಾನ ಮಾನ್ಯತೆಯನ್ನು ಹೊಂದಿರುವುದು ಎಂಬ ಅತ್ಯಮೂಲ್ಯ ಶಿಕ್ಷಣವನ್ನು ನೀಡಿರುವರು.
- ಕೆಟ್ಟ ಗುಣ–ನಡತೆಯನ್ನು ಹೊಂದಿರುವ ವ್ಯಕ್ತಿಯು ತನ್ನನ್ನು ತಾನು ಸುಧಾರಿಕೊಳ್ಳದೇ ಹೋದಲ್ಲಿ ಅವನು ನಿರ್ವಹಿಸುವ ನಮಾಝ್ ಕೂಡ ಅವನಿಗೆ ಮುಕ್ತಿ ದೊರಕಿಸಿಕೊಡದು. ವ್ಯಕ್ತಿಯ ಗುಣ–ನಡತೆ, ಅವನ ವ್ಯಕ್ತಿತ್ವ, ಅವನ ಚಾರಿತ್ರ್ಯವೇ ಅವನು ನರಕಕ್ಕೆ ಅರ್ಹನೋ ಅಥವಾ ಸ್ವರ್ಗಕ್ಕೆ ಅರ್ಹನೋ ಎಂಬುದರ ಮಾನದಂಡವಾಗಿರುವುದು ಎಂದವರು ಹೇಳಿರುವರು.
- ಒಬ್ಬ ವ್ಯಕ್ತಿಯು ತನಗಾಗಿ ಏನನ್ನು ಬಯಸುತ್ತಾನೋ ಅದನ್ನೇ ಪರರಿಗೆ ಬಯಸುವ ತನಕ ಸಂಪೂರ್ಣ ದೇವವಿಶ್ವಾಸಿ ಎನಿಸಿಕೊಳ್ಳನು.

- ಅಗತ್ಯವಿರುವ ಸಹೋದರನ ಆವಶ್ಯಕತೆಯನ್ನು ಪೂರೈಸುವುದು, ಅವನಿಗೆ ತನ್ನಿಂದಾದ ಸಹಾಯ ಹಸ್ತ ನೀಡುವ ವ್ಯಕ್ತಿಯು ರಾತ್ರಿ ಪೂರ್ತಿ ನಮಾಝ್ ಮಾಡಿ ದಿನಪೂರ್ತಿ ಉಪವಾಸವನ್ನಾಚರಿಸಿದ ವ್ಯಕ್ತಿಗೆ ಸಮಾನನಾಗಿದ್ದಾನೆ.
- ದೇವವಿಶ್ವಾಸದ ಬಳಿಕ ದೇವನ ಸೃಷ್ಟಿಗಳೊಂದಿಗೆ ಸದ್ವರ್ತನೆ ತೋರುವುದು ದೇವನ ಬಳಿ ಅತಿಹೆಚ್ಚು ಪ್ರತಿಫಲ ನೀಡಲ್ಪಡುವ ಒಳಿತಾಗಿದೆ.
- ಯಾರು ಹಿರಿಯರಿಗೆ ಗೌರವ ನೀಡುವುದಿಲ್ಲವೋ, ಯಾರು ಕಿರಿಯರ ಮೇಲೆ ಕರುಣೆ ತೋರುವುದಿಲ್ಲವೋ ಅವರು ನನ್ನ ಸಮುದಾಯಕ್ಕೆ ಸೇರಿದವರೆಂದು ಹೇಳಿಕೊಳ್ಳಲು ಅರ್ಹರಲ್ಲ.
- ಜಗಳಗಂಟ ವ್ಯಕ್ತಿಯು ದೇವನ ಬಳಿ ಅತ್ಯಂತ ಅಪ್ರಿಯನಾಗಿರುವನು.
- ಯಾರು ತನ್ನ ನಾಲಿಗೆ ಮತ್ತು ಗುಪ್ತಾಂಗವನ್ನು ರಕ್ಷಿಸಿಕೊಳ್ಳುವ ಭರವಸೆ ನೀಡುವರೋ ಅಂತಹವರಿಗೆ ನಾನು ಸ್ವರ್ಗದ ಭರವಸೆಯನ್ನು ನೀಡಬಲ್ಲೆ.
- ನಿಮ್ಮ ನೆರೆ–ಹೊರೆಯವರು ನಿಮ್ಮ ಬಳಿ ಸಹಾಯ ಕೇಳಿದರೆ ಅವರಿಗೆ ಸಹಾಯ ಮಾಡಿರಿ. ಸಾಲ ಕೇಳಿದರೆ ಸಾಲ ಕೊಡಿರಿ. ನಿಮ್ಮಿಂದ ಯಾವುದಾದರೂ ಕೆಲಸವಾಗಬೇಕಿದ್ದರೆ ಅದನ್ನು ಅವರಿಗೆ ಮಾಡಿಕೊಡಿರಿ. ಅನಾರೋಗ್ಯಕ್ಕೀಡಾದರೆ ಅವರನ್ನು ಸಂದರ್ಶಿಸಿರಿ. ಮರಣ ಹೊಂದಿದರೆ ಅವರ ಶವಸಂಸ್ಕಾರದಲ್ಲಿ ಪಾಲ್ಗೊಳ್ಳಿರಿ. ಶುಭ–ಸಮಾರಂಭಗಳಿದ್ದರೆ ಅವರಿಗೆ ಶುಭಾಶಯ ಕೋರಿರಿ. ಅವರ ಮೇಲೇನಾದರೂ ವಿಪತ್ತು ಸಂಭವಿಸಿದರೆ ಅವರಿಗೆ ಸಾಂತ್ವಾನ ನೀಡಿರಿ. ಅವರಿಗಾಗಿ ಪ್ರಾರ್ಥಿಸಿರಿ.
- ಜಗತ್ತಿನ ಇತರ ವಸ್ತುಗಳು ನಿಮ್ಮ ಬಳಿ ಇಲ್ಲವಾದಲ್ಲಿ ಚಿಂತಿಲ್ಲ. ಆದರೆ ನಿಮ್ಮ ಬಳಿ ಇರಲೇಬೇಕಾದ ನಾಲ್ಕು ವಿಷಯಗಳಿವು. 1. ಸತ್ಯಸಂಧತೆ 2. ಪ್ರಾಮಾಣಿಕತೆ 3. ಒಳ್ಳೆಯ ನಡತೆ 4. ಧರ್ಮಸಮ್ಮತ ಗಳಿಕೆ.
- ನೀವು ನೇಮಿಸಿಕೊಂಡ ಸೇವಕನಿಂದ ಸಂಭವಿಸುವ ತಪ್ಪುಗಳನ್ನು ಕಡೆಗಣಿಸಿರಿ ಅವರನ್ನು ಕ್ಷಮಿಸುತ್ತಲೇ ಇರಿ.

- ದೇವನು ನಿಮ್ಮ ರೂಪ–ಲಾವಣ್ಯಗಳನ್ನಾಗಲೀ ನಿಮ್ಮ ಸಂಪತ್ತನ್ನಾಗಲೀ ನೋಡುವುದಿಲ್ಲ. ಅವನು ವೀಕ್ಷಿಸುವುದು ನಿಮ್ಮ ಹೃದಯಗಳನ್ನು ಮತ್ತು ನೀವು ಮಾಡುತ್ತಿರುವ ನಿಮ್ಮ ಕರ್ಮಗಳನ್ನು.
- ಪ್ರತಿಯೊಂದು ಸತ್ಕರ್ಮವೂ ದಾನವಾಗಿದೆ. ಯಾರಿಗಾದರೂ ಒಳಿತಿನ ಕಡೆಗೆ ಮಾರ್ಗದರ್ಶನ ಮಾಡುವುದು ದಾನವಾಗಿದೆ. ದಾರಿದಪ್ಪಿದವರಿಗೆ ಸರಿಯಾದ ದಾರಿ ತೋರಿಸುವುದು ದಾನವಾಗಿದೆ. ಕುರುಡರ ಕೈ ಹಿಡಿದು ನಡೆಸುವುದು, ರಸ್ತೆಯಲ್ಲಿ ಬಿದ್ದಿರುವ ಕಲ್ಲು–ಮುಳ್ಳುಗಳನ್ನು ಸರಿಸುವುದು, ಬಾಯಾರಿದವನಿಗೆ ನೀರು ಕುಡಿಸುವುದು ಇವೆಲ್ಲವೂ ದಾನಕ್ಕೆ ಸಮಾನಾದ ಸತ್ಕಾರ್ಯಗಳಾಗಿವೆ.
- ಸತ್ಯವಿಶ್ವಾಸಿಗಳೇ ನೆನಪಿಡಿರಿ, ಒಬ್ಬ ಸಹೋದರನು ಇನ್ನೋರ್ವ ಸಹೋದರನನ್ನು ಗೌರವಿಸುವುದು ಖಡ್ಡಾಯವಾಗಿದೆ. ಪರರ ಸಂಪತ್ತಿಗೆ ದುರಾಸೆ ಪಡುವುದು ಪಾಪವಾಗಿದೆ. ಯಾರು ಏನನ್ನು ಬಿತ್ತುವರೋ ಪ್ರತಿಫಲದ ರೂಪದಲ್ಲಿ ಅದನ್ನೇ ಪಡೆಯುವರು. ಸ್ತ್ರೀಯರನ್ನು ಸದಾ ಗೌರವಿಸಿ. ಯಾರೊಬ್ಬರ ಹಕ್ಕನ್ನೂ ಕಬಳಿಸದಿರಿ. ಯಾರೊಬ್ಬರ ಮೇಲೂ ಅಕ್ರಮವೆಸಗದಿರಿ.
- ನಿಮ್ಮ ದೇವನು ಏಕದೇವನು. ಅವನಿಗಾರೂ ಸಮಭಾಗಿಗಳಿಲ್ಲ. ಸಕಲ ಲೋಕಗಳಿಗೂ ಅವನೇ ಏಕೈಕ ಅಧಿಪತಿಯಾಗಿರುವನು. ಜಗತ್ತಿನ ಪ್ರತಿಯೊಂದು ವಸ್ತುವೂ ಅವನದೇ ಸ್ವಾಧೀನದಲ್ಲಿರುವುದು. ಅವನು ಸರ್ವಶಕ್ತನಾಗಿರುವನು.
- ನಿಮ್ಮ ಮಕ್ಕಳಿಗೆಂದು ಖರೀದಿಸುವ ವಸ್ತುಗಳ ಪೈಕಿ ಮೊದಲನೆಯದನ್ನು ನಿಮ್ಮ ಹೆಣ್ಣುಮಕ್ಕಳಿಗೆ ನೀಡಿರಿ.
- ಯಾರು ದೇವನನ್ನು ಭಯಪಡುವರೋ ಅವರೆಂದೂ ಪ್ರತೀಕಾರಕ್ಕಾಗಿ ಹಾತೊರೆಯರು.
- ಯಾವ ಇಶಾರೆ–ಸನ್ನೆಗಳಿಂದ ಇತರರಿಗೆ ನೋವುಂಟಾಗುವುದೋ, ಅವುಗಳೆಲ್ಲವೂ ಇಸ್ಲಾಮಿನಲ್ಲಿ (ಹರಾಮ್) ನಿಷಿದ್ಧವಾಗಿವೆ.

**Note: ಈ ಲೇಖನವು ಶ್ರೀಯುತ ರಘುನಾಥ್ ಸಾಹೇಬ್ ರದ್ದಾಗಿದೆ. ಇವರು ದೇಶ ವಿಭಜನೆಯ ಮೊದಲಿನ ಲಾಹೋರ್ ನಲ್ಲಿ ಸರ್ವಧರ್ಮೀಯ ಸೌಹಾರ್ದ ಸಂಘದ**

ಅಧ್ಯಕ್ಷರಾಗಿದ್ದರು. **1940**ರಲ್ಲಿ **183** ಪುಟಗಳಿರುವ ಒಂದು ಕೃತಿಯನ್ನಿವರು ರಚಿಸಿದರು. ಆ ಕೃತಿಯು ಹತ್ತು ಸುಪ್ರಸಿದ್ಧ ಧಾರ್ಮಿಕ ನಾಯಕರ ಜೀವನ ಚರಿತ್ರೆಯ ಕುರಿತದ್ದಾಗಿತ್ತು. ಈ ಕೃತಿಗವರು "ರೋಶನ್ ಸಿತಾರೆ (ಹೊಳೆಯುವ ನಕ್ಷತ್ರಗಳು)" ಎಂದು ಹೆಸರಿಸಿದ್ದರು. ಹತ್ತು ಸುಪ್ರಸಿದ್ಧ ಧಾರ್ಮಿಕ ನಾಯಕರ ಪೈಕಿ ಒಂದು ಭಾಗವು ಪ್ರವಾದಿ ಮುಹಮ್ಮದರ (ಸ) ಜೀವನದ ಕುರಿತಾಗಿತ್ತು. ಕೃತಿಯಲ್ಲಿರುವ ಆ ಸಂಪೂರ್ಣ ಭಾಗವನ್ನು ಭಾಷಾಂತರಿಸಿ ಇಲ್ಲಿ ಕೊಡಲಾಗಿದೆ.

*********

# ಇಸ್ಲಾಮಿನ ಮಹಾನ್ ಪ್ರವಾದಿ

ಇಸ್ಲಾಮಿನ ಇತಿಹಾಸಕಾರರ ಪ್ರಕಾರ ಪ್ರವಾದಿ ಮುಹಮ್ಮದರು (ಸಲ್ಲಲ್ಲಾಹು ಅಲೈಹಿ ವಸ್ಸಲ್ಲಮ್) 571ನೇ ಇಸವಿಯ ಏಪ್ರಿಲ್ 20ರಂದು ಮರಳುಗಾಡಿನ ಪ್ರದೇಶವಾದ ಸೌದಿ ಅರೇಬಿಯಾದಲ್ಲಿ ಜನಿಸಿದರು. "ಮುಹಮ್ಮದ್" ಹೆಸರಿನ ಅರ್ಥ "ಬಹಳವಾಗಿ ಪ್ರಶಂಸಿಲ್ಪಡುವವನು" ಎಂದಾಗಿದೆ. ಅರಬ್ ಭೂಮಿಯಲ್ಲಿ ಜನಿಸಿದ ಎಲ್ಲರಿಗಿಂತಲೂ ಅವರು ಹೆಚ್ಚು ಗೌರವಾನ್ವಿತರಾಗಿದ್ದರು. ಅಲ್ಲಿ ಜೀವಿಸಿ ಹೋದ ಎಲ್ಲ ಪ್ರಸಿದ್ಧ ಸಾಮ್ರಾಟರು, ಕವಿವರ್ಯರಿಂಗತಲೂ ಪ್ರವಾದಿ ಮುಹಮ್ಮದರು (ಸ) ಹೆಚ್ಚು ಶ್ರೇಷ್ಠರು.

ಮುಹಮ್ಮದರು ಜನಿಸುವ ವೇಳೆ ಅರಬ್ ರಾಷ್ಟ್ರ ಒಂದು ಮರಳುಗಾಡಿನ ಹೊರತು ಹೆಚ್ಚೇನೂ ಆಗಿರಲಿಲ್ಲ. ಆ ಒಣಮರುಭೂಮಿಗೆ ಪ್ರವಾದಿವರ್ಯರು (ಸ) ಹೊಸದೊಂದು ರೂಪ ಕೊಟ್ಟರು. ಆ ಭೂಮಿಯಲ್ಲವರು ಹೊಸ ಜೀವನ, ಹೊಸ ಸಂಸ್ಕೃತಿ, ಹೊಸ ನಾಗರಿಕತೆ ಹೊಸ ಸಾಮ್ರಾಜ್ಯವನ್ನೇ ರೂಪಿಸಿದರು. ಮೊರಕ್ಕೋದಿಂದ ಇಂಡೀಸ್ ತನಕ ಹರಡಿದ್ದ ಬೃಹತ್ ಸಾಮ್ರಾಜ್ಯವಾಗಿತ್ತದು. ಪ್ರವಾದಿವರ್ಯರು (ಸ) ರೂಪಿಸಿಕೊಟ್ಟ ಆ ಹೊಸ ಜೀವನಶೈಲಿ, ಹೊಸ ಸಂಸ್ಕೃತಿ ಜಗತ್ತಿನ ಮೂರು ಬೃಹತ್ ಖಂಡಗಳಾದ ಆಫ್ರಿಕಾ, ಏಷ್ಯಾ ಹಾಗೂ ಯುರೋಪ್ನ ಜನಜೀವನದ ಮೇಲೂ ತನ್ನ ಗಾಢ ಪ್ರಭಾವ ಬೀರಿತು.

ನಾನು ಬರೆಯಲು ಹೊರಟ ಈ ಕೃತಿಯು ಐತಿಹಾಸಿಕ ಹಿನ್ನೆಲೆಯುಳ್ಳ ಒಂದು ಧರ್ಮದ ತತ್ವಗಳ ಕುರಿತದ್ದಾಗಿದೆ. ಆ ಧರ್ಮದ ಪ್ರವಾದಿಯು ಇತಿಹಾಸದ ಮೇಲೆ ಗಾಢ ಪ್ರಭಾವ ಬೀರಿದ ಮಹಾನ್ ವ್ಯಕ್ತಿಯಾಗಿದ್ದಾರೆ. ಸರ್ ವಿಲಿಯಮ್ ಮ್ಯೂರ್ ನಂತಹ ಕಟುವಿಮರ್ಶಕನೂ ಕೂಡ ಕುರ್ ಆನ್ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, 'ಸಾವಿರದ ಇನ್ನೂರು ವರ್ಷಗಳಷ್ಟು ದೀರ್ಘ ಕಾಲದ ಬಳಿಕವೂ ಯಥಾಸ್ಥಿತಿಯಲ್ಲಿ ತನ್ನ ಮೂಲರೂಪವನ್ನು ಕಾಯ್ದುಕೊಂಡಿರುವ ಗ್ರಂಥ ಕೇವಲ 'ಕುರ್ ಆನ್' ಮಾತ್ರವಾಗಿದೆ. ಕುರ್ ಆನ್ ಅನ್ನು ಹೊರತುಪಡಿಸಿ ಬೇರಾವುದೇ ಧಾರ್ಮಿಕ ಗ್ರಂಥ ತನ್ನ ಮೂಲರೂಪದಲ್ಲಿ ನಮ್ಮ

ಬಳಿ ಉಳಿದಿಲ್ಲ' ಎಂದು ಹೇಳಬೇಕಾಯಿತು. ನಾನಿಲ್ಲಿ ಸರ್ ವಿಲಿಯಮ್ ರ ಅಭಿಪ್ರಾಯಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾ ಅದಕ್ಕೆ ಇನ್ನೊಂದು ವಿಷಯವನ್ನು ಸೇರಿಸಬಯಸುವೆ. ಕೇವಲ 'ಕುರ್ ಆನ್' ಮಾತ್ರವಲ್ಲ ಪ್ರವಾದಿವರ್ಯರ (ಸ) ವ್ಯಕ್ತಿತ್ವಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನು, ಅವರ ಜೀವನದ ಚಿಕ್ಕ–ಪುಟ್ಟ ವಿವರಗಳನ್ನು ಕೂಡ ಮುಂದಿನ ಪೀಳಿಗೆಗೆ ಯಥಾವತ್ತಾಗಿ ತಲುಪಿಸುವ ಸಲುವಾಗಿ ಬಹಳ ಎಚ್ಚರಿಕೆಯಿಂದ ಇತಿಹಾಸದ ಪುಟಗಳಲ್ಲಿ ಸಂರಕ್ಷಿಸಿ ಇಡಲಾಗಿದೆ.

ಪ್ರವಾದಿವರ್ಯರ (ಸ) ಜೀವನದ ಕುರಿತಾಗಲೀ, ಅವರ ಕಾರ್ಯಗಳ ಕುರಿತಾಗಲೀ, ಅವರ ವ್ಯಕ್ತಿತ್ವದ ಕುರಿತಾಗಲೀ ಯಾವುದೇ ನಿಗೂಢತೆಯಿಲ್ಲ. ಅವರ ಜೀವನದ ಕುರಿತು ಯಾವುದೇ ರಹಸ್ಯ ಪುಟಗಳಿಲ್ಲ. ಅವರ ಬದುಕಿನ ಕುರಿತ ಮಾಹಿತಿಯನ್ನು ಸಂಗ್ರಹಿಸಲು ಯಾವುದೇ ರೀತಿಯ ಪ್ರಯಾಸದ ಅಗತ್ಯವಿಲ್ಲ. ಧಾನ್ಯಗಳ ರಾಶಿಯ ನಡುವೆ ಸತ್ಯದಕಾಳುಗಳನ್ನು ಹುಡುಕುವ ದುರ್ಬೀನಿನ ಆವಶ್ಯಕತೆಯೂ ಇಲ್ಲಿಲ್ಲ. ಏಕೆಂದರೆ ಅವರ ಬದುಕು ಸಂಪೂರ್ಣ ಪಾರದರ್ಶಕ. ಅದೊಂದು ಸಂಪೂರ್ಣ ತೆರೆದ ಪುಸ್ತಕ.

ರಾಜಕೀಯ ದುರುದ್ದೇಶ ಅಥವಾ ಇನ್ನಿತರ ಕಾರಣಗಳಿಗಾಗಿ ಇಸ್ಲಾಮ್ ಮತ್ತು ಪ್ರವಾದಿವರ್ಯರ (ಸ) ವ್ಯಕ್ತಿತ್ವವನ್ನು ಬೇಕುಬೇಕೆಂದೇ ವಕ್ರಗೊಳಿಸಿ, ಅದನ್ನು ದುರ್ವ್ಯಾಖ್ಯಾನಗೊಳಿಸಿ ಜನರ ನಡುವೆ ಅಪಪ್ರಚಾರ ಮಾಡುತ್ತಿದ್ದ ಜನರ ಕಾಲವೀಗ ಮುಗಿಯುತ್ತಾ ಬಂದಿರುವುದು ನನ್ನ ಕೆಲಸವನ್ನು ಇನ್ನಷ್ಟು ಸುಲಭಗೊಳಿಸಿದೆ. ಪ್ರೊಫೆಸರ್ ಬೇವಾನ್ ತನ್ನ ಪುಸ್ತಕ 'ಕೇಂಬ್ರಿಡ್ಜ್ ಮಿಡಿಯವಲ್ ಹಿಸ್ಟರಿ' (The Cambridge Medieval History) ಯಲ್ಲಿ, 'ಯುರೋಪ್ ನಲ್ಲಿ ಮುಹಮ್ಮದ್ ಹಾಗೂ ಇಸ್ಲಾಂನ ವಿಷಯದಲ್ಲಿ 19ನೆಯ ಶತಮಾನಕ್ಕೂ ಮುನ್ನ ಬರೆಯಲಾಗಿದ್ದ ಲೇಖನಗಳಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂಬುದೀಗ ಜನರಿಗೆ ಸರಿಯಾಗಿ ಮನವರಿಕೆ ಆಗಿದೆ' ಎಂದು ಬರೆಯುತ್ತಾರೆ. ಉದಾಹರಣೆಗೆ 'ಖಡ್ಗದ ಬಲದಿಂದ ಇಸ್ಲಾಮ್ ಹಬ್ಬಿತು' ಎಂಬುದನ್ನೀಗ ಯಾರೂ ನಂಬಲು ತಯಾರಿಲ್ಲ. ಏಕೆಂದರೆ 'ಇಸ್ಲಾಮ್ ನಲ್ಲಿ ಬಲವಂತವಿಲ್ಲ' ಎನ್ನುವುದರ ಕುರಿತು ಖುದ್ದು ಕುರ್ ಆನ್ ಕರೆ ಕೊಡುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯ (ಕುರ್ ಆನ್, 2:256).

ಪ್ರಖ್ಯಾತ ಇತಿಹಾಸ ತಜ್ಞ ಗಿಬ್ಬನ್ ಹೇಳುತ್ತಾರೆ: 'ಖಡ್ಗದ ಮೂಲಕ ಇಸ್ಲಾಮ್ ನ ಹೊರತಾದ ಇತರೆ ಎಲ್ಲಾ ಧರ್ಮಗಳನ್ನು ಬಲವಂತವಾಗಿ ನಿರ್ಮೂಲನಗೊಳಿಸಲು ಇವರು ಹೋರಾಡುತ್ತಿರುವರು ಎಂಬುದು ಇಂದಿನ ದಿನಗಳಲ್ಲಿ ಮುಸ್ಲಿಮರ ವಿರುದ್ಧ ಮಾಡಲಾಗುತ್ತಿರುವ ಗಂಭೀರ ಆರೋಪವಾಗಿದೆ. ಮುಂದುವರಿದು ಗಿಬ್ಬನ್ ಹೇಳುತ್ತಾರೆ: 'ಆದರೆ, ಮುಸ್ಲಿಮರ ಮೂಲಗ್ರಂಥವಾದ ಕುರ್ ಆನ್ ನ ಸಂದೇಶಗಳು, ಮುಸ್ಲಿಂ ಯೋಧರ ಚರಿತ್ರೆಗಳು, ಅವರು ಕ್ರೈಸ್ತ ಬಾಂಧವರ ಆರಾಧಾಲಯಗಳ ವಿಷಯದಲ್ಲಿ ತೋರಿದ ಸಹಿಷ್ಣುತೆ, ಇನ್ನಿತರ ಸಾಮಾಜಿಕ ವಿಷಯಗಳಲ್ಲಿ ಮುಸ್ಲಿಮರ ಮನೋಭಾವ ಇವೆಲ್ಲದರಿಂದಲೂ ಮುಸ್ಲಿಮರ ಮೇಲೆ ಮಾಡಲಾಗುತ್ತಿರುವ ಈ ಆರೋಪದಲ್ಲಿ ಯಾವುದೇ ಸತ್ಯಾಂಶವಿಲ್ಲ. ಇದೊಂದು ಅಜ್ಞಾನ ಮತ್ತು ಮತಾಂಧತೆಯಿಂದ ಕೂಡಿದ ಆರೋಪವೆಂಬುದು ವ್ಯಕ್ತವಾಗುತ್ತದೆ. ಪ್ರವಾದಿವರ್ಯರು ಸಾರಿದ ನೈತಿಕ ಮೌಲ್ಯಗಳೇ ಅವರ ವಿಜಯದ ನೈಜ ಅಡಿಪಾಯವಾಗಿತ್ತೇ ಹೊರತು ಖಡ್ಗ ಪ್ರಯೋಗಕ್ಕೆ ಇದರಲ್ಲಿ ಯಾವುದೇ ಸ್ಥಾನವಿರಲಿಲ್ಲ.

ಪ್ರವಾದಿವರ್ಯರ (ಸ) ಆಗಮನಕ್ಕೆ ಮುಂಚೆ ಅರಬ್ಬರು ಎಷ್ಟು ಕ್ರೂರಮನಸ್ಥಿತಿ ಹೊಂದಿದ ಜಗಳಗಂಟ ಜನಾಂಗದವರಾಗಿದ್ದರೆಂದರೆ ಚಿಕ್ಕಪುಟ್ಟ ವಿಷಯಗಳಿಗೂ ಅವರ ನಡುವೆ ತಲೆತಲಾಂತರಗಳ ತನಕ ಯುದ್ಧ ನಡೆಯುತ್ತಿತ್ತು. ಒಂದು ಗೋತ್ರಕ್ಕೆ ಸೇರಿದ ಒಂಟೆಯೊಂದು ಬೇಲಿ ಹಾದು ಇನ್ನೊಂದು ಗೋತ್ರದ ಹುಲ್ಲುಗಾವಲು ಪ್ರವೇಶಿಸಿತೆಂಬ ಕ್ಷುಲ್ಲಕ ಕಾರಣಕ್ಕೆ ಆ ಎರಡು ಗೋತ್ರಗಳ ನಡುವೆ ಬರೋಬ್ಬರಿ 40 ವರ್ಷಗಳಷ್ಟು ಕಾಲ ಕಾಳಗ ನಡೆಯಿತು.ಈ ಕಾಳಗದಲ್ಲಿ ಎರಡು ಗೋತ್ರಕ್ಕೆ ಸೇರಿದ ಸುಮಾರು 70,000 ಜನರು ಪರಸ್ಪರ ಕೊಲ್ಲಲ್ಪಟ್ಟರು. ಕೊನೆಗೆ ಈ ಗೋತ್ರಗಳ ಜನರ ಪೈಕಿ ಯಾರೊಬ್ಬರೂ ಜೀವಂತ ಉಳಿಯಲಾರರೇನೋ ಎಂಬ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಯಿತು. ಇಷ್ಟು ಕಠೋರ ಮನಸ್ಥಿತಿಯ ಅರಬ್ಬರಿಗೆ ಪ್ರವಾದಿವರ್ಯರು (ಸ) ಆತ್ಮಸಂಯಮದ ಶಿಕ್ಷಣವನ್ನು ನೀಡಿ, ಅವರನ್ನು ಯುದ್ಧರಂಗದಲ್ಲಿಯೂ ಸಂಘಟಿತರಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಶಿಸ್ತುಬದ್ಧ ಸಿಪಾಯಿಗಳನ್ನಾಗಿ ರೂಪಿಸಿದರು.

ಶಾಂತಿ ಸಂಧಾನಕ್ಕಾಗಿ ಅವರು ಪಟ್ಟ ಎಲ್ಲ ಪ್ರಯತ್ನಗಳು ವಿಫಲಗೊಂಡಾಗ, ಉದ್ಭವಿಸಿದ ಸಂದಿಗ್ಧ ಪರಿಸ್ಥಿತಿಗಳು ಅವರನ್ನು ಯುದ್ಧದ ಮೈದಾನಕ್ಕೆ ಎಳೆದು ತಂದವು. ಇದು ಪ್ರವಾದಿವರ್ಯರ (ಸ) ರಕ್ಷಣಾತ್ಮಕ ಹೆಜ್ಜೆಯಾಗಿತ್ತೇ ವಿನಃ, ತಾವಾಗಿಯೇ ಯುದ್ಧಕ್ಕೆ ಆಮಂತ್ರಣ ಕೊಟ್ಟು, ಶತ್ರು ಸೇನೆಗಳನ್ನು ಸದೆಬಡಿಯಲು ತಾವಾಗಿಯೇ ಅವರು ಆಕ್ರಮಣಕ್ಕೆ ಇಳಿದ ಉದಾಹರಣೆಗಳಿಲ್ಲ. ಇದರ ಹೊರತಾಗಿಯೂ ಅವರು ಯುದ್ಧಭೂಮಿಯ ಚಿತ್ರಣವನ್ನವರು ಸಂಪೂರ್ಣವಾಗಿ ಬದಲಾಯಿಸಿದರು. ಪೂರ್ತಿ ಅರಬ್ ಭೂಮಿಯು ಪ್ರವಾದಿವರ್ಯರ ಅಧೀನಕ್ಕೆ ಬರುವ ತನಕ, ಅವರು ತಮ್ಮ ಜೀವನದಲ್ಲಿ ಎದುರಿಸಿದ ಯುದ್ಧಗಳಲ್ಲಿ ಹತರಾದವರ ಸಂಖ್ಯೆ ಸಾವಿರಕ್ಕೂ ಕಮ್ಮಿ.

ಒಬ್ಬರನ್ನೊಬ್ಬರು ಸಹಿಸಲು ತಯಾರಿಲ್ಲದ, ಅಕ್ಷರಶಃ ಮೃಗೀಯ ವ್ಯಕ್ತಿತ್ವವನ್ನು ಹೊಂದಿದ್ದ ಜನರಿಗವರು, ಎಲ್ಲರೂ ಒಟ್ಟಾಗಿ ಸಾಮೂಹಿಕ ನಮಾಝ್ ಅನ್ನು ನಿರ್ವಹಿಸುವಷ್ಟು ಸಹನೆಯನ್ನು ಕಲಿಸಿದರು. ಎಲ್ಲಿಯ ತನಕವೆಂದರೆ ಯುದ್ಧದ ರಣರಂಗದಲ್ಲಿ ಶತ್ರುಸೇನೆಯವರು ಪ್ರಾಣಹರಣ ಮಾಡುವ ಭೀತಿಯ ನಡುವೆಯೂ ಪ್ರಾರ್ಥನೆಯ ಸಮಯವಾದಾಗ (ಮುಸ್ಲಿಮರ ಮೇಲೆ ದಿನದಲ್ಲಿ ಐದುಬಾರಿ ನಮಾಝ್ ಅದರ ಸಮಯಪಾಲನೆಯೊಂದಿಗೆ ನಿರ್ವಹಿಸುವುದು ಖಡ್ಡಾಯವಾಗಿದೆ) ಖಡ್ಡಾಯವಾಗಿ ದೇವನ ಮುಂದೆ ಸಾಷ್ಟಾಂಗವೆರಗುವ ಶಿಷ್ಟಾಚಾರವನ್ನವರು ಕಲಿಸಿಕೊಟ್ಟರು. ಮುಸ್ಲಿಮರ ಸೇನೆಯ ಒಂದು ತಂಡವು ಶತ್ರುಗಳ ದಾಳಿಯನ್ನು ಪ್ರತಿರೋಧಿಸುತ್ತಿದ್ದರೆ ಇನ್ನೊಂದು ತಂಡವು ದೇವನ ಮುಂದೆ ಬಾಗುತ್ತಾ ತನ್ನ ಪ್ರಾರ್ಥನೆಯನ್ನು ಮುಗಿಸಿ, ಮತ್ತೊಂದು ತಂಡಕ್ಕೆ ಪ್ರಾರ್ಥಿಸಲು ಅನುವು ಮಾಡಿಕೊಡುತ್ತಿತ್ತು.

ಅನಾಗರಿಕತೆಯ ಯುಗದಲ್ಲಿ ಮೃಗಗಳಂತೆ ಬದುಕುತ್ತಿದ್ದ ಜನರಿಗವರು ಕಠಿಣವಾದ ರಣರಂಗದಲ್ಲೂ ಯುದ್ಧನಿಯಮಗಳನ್ನು ರೂಪಿಸಿಕೊಟ್ಟು, ಯಾವುದೇ ಕಾರಣಕ್ಕೂ ಮಾನವೀಯ ಮೌಲ್ಯಗಳನ್ನು ತೊರೆಯಕೂಡದು ಎಂಬ ಆಜ್ಞೆ ಜಾರಿಮಾಡಿದರು. "ವಂಚಿಸಕೂಡದು, ಕೊಟ್ಟ ಮಾತಿಗೆ ತಪ್ಪ ನಡೆಯಬಾರದು, ಶತ್ರುಸೇನೆಯ ಯೋಧರನ್ನು ವಿಕಲಾಂಗಗೊಳಿಸಬಾರದು, ಸ್ತ್ರೀಯರು, ಮಕ್ಕಳು ಮತ್ತು ವೃದ್ಧರನ್ನು ವಧಿಸಕೂಡದು, ಫಲಭರಿತ ತೋಟಗಳನ್ನು, ವೃಕ್ಷಗಳನ್ನು ಕಡಿಯುವುದಾಗಲೀ ಅಥವಾ ಅವುಗಳಿಗೆ ಬೆಂಕಿ ನೀಡಿ

ನಾಶಗೊಳಿಸುವುದಾಗಲೀ ಮಾಡಬಾರದು. ಆರಾಧಾನಲಯಗಳಲ್ಲಿ ಆರಾಧನೆಯಲ್ಲಿ ನಿರತರಾದವರಿಗೆ ಯಾವುದೇ ರೀತಿಯ ತೊಂದರೆ ನೀಡಕೂಡದು." ಇವೆಲ್ಲವೂ ಯುದ್ಧದ ಸಂದರ್ಭದಲ್ಲಿ ಪ್ರವಾದಿವರ್ಯರು (ಸ) ತಮ್ಮ ಸೇನೆಗೆ ನೀಡುತ್ತಿದ್ದ ನಿರ್ದೇಶನಗಳಾಗಿದ್ದವು.

ಸ್ವತಃ ತನ್ನ ಕಡುವೈರಿಗಳೊಂದಿಗೆ ಪ್ರವಾದಿವರ್ಯರು (ಸ) ನಡೆದುಕೊಂಡ ರೀತಿಯಲ್ಲಿಯೂ ಅವರ ಅನುಯಾಯಿಗಳಿಗೆ ಅತ್ಯುತ್ತಮ ಮಾದರಿಯಿದೆ. ಮಕ್ಕಾ ವಿಜಯದ ಬಳಿಕ ಅಲ್ಲಿನ ಅಧಿಕಾರವೆಲ್ಲವೂ ಪ್ರವಾದಿವರ್ಯರ (ಸ) ಅಧೀನಕ್ಕೆ ಬಂತು. ಈ ಮೊದಲು ಮಕ್ಕಾವಾಸಿಗಳು ಪ್ರವಾದಿವರ್ಯರು (ಸ) ತಂದ ದೇವಸಂದೇಶವನ್ನು ಒಪ್ಪಿರಲಿಲ್ಲ ಮಾತ್ರವಲ್ಲ ಪ್ರವಾದಿ ಮತ್ತವರ ಸಹಚರರಿಗೆ ತರತರಹದ ಚಿತ್ರಹಿಂಸೆಗಳನ್ನು ನೀಡುವ ಮೂಲಕ ಅವರೆಲ್ಲರ ಮೇಲೆ ತೀವ್ರತರದ ದಬ್ಬಾಳಿಕೆಯನ್ನೂ ನಡೆಸಿದ್ದರು. ಪ್ರವಾದಿವರ್ಯರು (ಸ) ಮತ್ತವರ ಸಹಚರರನ್ನು ಅವರ ತಾಯ್ನಾಡಾದ ಮಕ್ಕಾವನ್ನು ತೊರೆಯುವಂತೆ ನಿರ್ಬಂಧಿಸಿ, 200 ಮೈಲಿಗಳಷ್ಟು ದೂರದ ಮದೀನಾದಲ್ಲಿ ಹೋಗಿ ನೆಲೆಸುವಂತೆ ಮಾಡಿದ್ದರು. ಮದೀನಾಕ್ಕೆ ವಲಸೆ ಹೋದ ಮೇಲೂ, ಮುಸ್ಲಿಮರನ್ನು ನೆಮ್ಮದಿಯಿಂದ ಜೀವಿಸಲು ಬಿಟ್ಟಿರಲಿಲ್ಲ ಈ ಮಕ್ಕಾದ ಜನರು. ಅಲ್ಲಿಯೂ ತಮ್ಮ ಒಳಸಂಚುಗಳ ಮೂಲಕ ಮುಸ್ಲಿಮರ ಸಂಪತ್ತು ಮತ್ತು ಜೀವಗಳಿಗೆ ಹಾನಿಯನ್ನು ತಲುಪಿಸಿದ ಕ್ರೂರ ಜನರಾಗಿದ್ದರು ಈ ಮಕ್ಕಾವಾಸಿಗಳು. ಇಂದು ಅದೇ ಮಕ್ಕಾ ಮತ್ತದರ ವಾಸಿಗಳು ಪ್ರವಾದಿವರ್ಯರ ಕೈ ಕೆಳಗಿರುವರು. ಪ್ರವಾದಿಯವರು ಇಚ್ಛಿಸಿದ್ದರೆ ತಮ್ಮ ಮತ್ತು ತಮ್ಮ ಸಹಚರರ ಮೇಲೆ ಮಕ್ಕಾವಾಸಿಗಳು ನಡೆಸಿದ್ದ ದೌರ್ಜನ್ಯದ ಪ್ರತೀಕಾರವನ್ನು ತುಂಬ ಸುಲಭವಾಗಿ ತೀರಿಸಿಕೊಳ್ಳಬಹುದಿತ್ತು. ಇಸ್ಲಾಂನ ಕಾನೂನು ಪ್ರಕಾರ ಮೊಕದ್ದಮೆಗನುಗುಣವಾಗಿ ಸಮಾನ ಪ್ರತೀಕಾರನ್ನು ತೆಗೆದುಕೊಳ್ಳುವ ಅನುಮತಿಯೂ ಇತ್ತು. ಇಷ್ಟಾಗಿಯೂ ಮಕ್ಕಾವಾಸಿಗಳ ಕುರಿತು ಪ್ರವಾದಿವರ್ಯರ (ಸ) ಹೃದಯದಲ್ಲಿ ಕಿಂಚಿತ್ತೂ ಪ್ರತೀಕಾರ ಭಾವನೆಯಾಗಲೀ, ದ್ವೇಷವಾಗಲೀ ಇರಲಿಲ್ಲ. ಮಕ್ಕಾವಾಸಿಗಳ ಕುರಿತು ಅವರೊಳಗಿದ್ದದ್ದು ಕೇವಲ ಸಹಾನೂಭೂತಿ, ಪ್ರೇಮ, ಅನುಕಂಪ, ಸೋದರತ್ವ. ಹಾಗಾಗಿಯೇ ಮಕ್ಕಾ ವಿಜಯದ ದಿನ ಅವರು ಸಾರ್ವಜನಿಕವಾಗಿ ಹೀಗೆ ಘೋಷಿಸಿಬಿಟ್ಟರು: "ಹೋಗಿರಿ, ನಿಮ್ಮ

ಮೇಲಿಂದು ಯಾವುದೇ ಮೊಕದ್ದಮೆಗಳಿಲ್ಲ. ನಿಮ್ಮಿಂದ ಯಾವುದೇ ಪ್ರತೀಕಾರವನ್ನು ತೆಗೆದುಕೊಳ್ಳಲಾಗುವುದಿಲ್ಲ. ನೀವೆಲ್ಲರೂ ಸಂಪೂರ್ಣ ಸ್ವತಂತ್ರರು."

ಈ ಮೊದಲು ಆತ್ಮರಕ್ಷಣೆಗಾಗಿ ಅವರು ಯುದ್ಧಕ್ಕೆ ಅನುಮತಿಯನ್ನು ನೀಡಿದ್ದರು. ಅನ್ಯಾಯವು ಅಳಿದು ನ್ಯಾಯದ ಸ್ಥಾಪನೆಯಾಗಲಿ, ಮಾನವ ಕುಲದವರು ಪರಸ್ಪರ ಸೋದರತ್ವದಿಂದ ಬಾಳಲಿ ಎಂಬುದೂ ಇದರ ಹಿಂದಿರುವ ಸದುದ್ದೇಶವಾಗಿತ್ತು. ತಮ್ಮ ಈ ಧ್ಯೇಯದಲ್ಲಿ ಅವರು ಯಶಸ್ವಿಯಾದ ಬಳಿಕ, ತಮ್ಮ ಕಡುವೈರಿಗಳನ್ನೂ ಅವರು ಕ್ಷಮಿಸಿದರು. ಎಲ್ಲಿಯ ತನಕವೆಂದರೆ ತಮ್ಮ ಪ್ರೀತಿಯ ಚಿಕ್ಕಪ್ಪರಾದ ಹಂಝಾರನ್ನು ಕೊಂದು, ಅವರ ಶವವನ್ನು ವಿಕಾರಗೊಳಿಸಿದ ಜನರಿಗೂ ಅಂದು ಪ್ರವಾದಿವರ್ಯರಿಂದ (ಸ) ಸಂಪೂರ್ಣ ಕ್ಷಮೆ ಸಿಕ್ಕಿತು.

ಪ್ರವಾದಿವರ್ಯರು (ಸ) ಸಾರಿದ ವಿಶ್ವಬಾಂಧವ್ಯ ಮತ್ತು ಸಮಾನತೆಯ ಸಂದೇಶವು ಮನುಷ್ಯನ ಸಾಮಾಜಿಕ ಏಳ್ಗೆಯಲ್ಲಿ ಬಹುದೊಡ್ಡ ಪಾತ್ರವನ್ನು ಹೊಂದಿದೆ. ಜಗತ್ತಿನಲ್ಲಿರುವ ಇತರ ಪ್ರಮುಖ ಧರ್ಮಗಳೂ ಈ ಮೌಲ್ಯಗಳನ್ನು ಬೋಧಿಸಿವೆಯಾದರೂ ಅದನ್ನು ಸಂಪೂರ್ಣ ಕಾರ್ಯರೂಪಕ್ಕೆ ತರುವಲ್ಲಿ ಸಂಪೂರ್ಣ ಯಶಸ್ವಿಯಾದವರು ಪ್ರವಾದಿವರ್ಯರು (ಸ) ಮಾತ್ರ. ಲೋಕದಲ್ಲಿ ಹಬ್ಬಿರುವ ಜಾತಿ–ಕುಲ, ಮೇಲು–ಕೀಳು, ವರ್ಣಬೇಧ ಇತ್ಯಾದಿ ಜನಾಂಗೀಯ ಪೂರ್ವಗ್ರಹಗಳು ಮೂಲೋತ್ಪಾಟನೆಗೊಂಡು, ಸರಿಯಾದ ಅರ್ಥದಲ್ಲಿ ಮಾನವ ಬಾಂಧವ್ಯವು ಸ್ಥಾಪಿತವಾಗಲು ಸಾಧ್ಯವಾದಾಗ ಮಾತ್ರ ಪ್ರವಾದಿವರ್ಯರು ತಂದ ಈ ವಿಶ್ವಬಾಂಧವ್ಯದ ಸಂದೇಶವನ್ನು ಯಥಾರ್ಥ ರೂಪದಲ್ಲಿ ಈ ಜಗತ್ತು ಅರ್ಥೈಸಿಕೊಂಡಂತಾಗುವುದು.

ಈ ವಾಸ್ತವದ ಕುರಿತು ಮಾತನಾಡುತ್ತಾ ಸರೋಜಿನಿ ನಾಯ್ಡುರವರು ಹೇಳುತ್ತಾರೆ: "ಪ್ರಜಾಪ್ರಭುತ್ವಕ್ಕೆ ಅತ್ಯಂತ ಹೆಚ್ಚು ಒತ್ತುಕೊಟ್ಟ, ಅದನ್ನು ಸರಿಯಾದ ಅರ್ಥದಲ್ಲಿ ಕಾರ್ಯರೂಪಕ್ಕೆ ತಂದ ಮೊದಲ ಧರ್ಮ ಇಸ್ಲಾಮ್ ಆಗಿದೆ. ಅಝಾನ್ (ಮಸೀದಿಯಲ್ಲಿ ದಿನದಲ್ಲಿ ಐದು ಬಾರಿ ಮೊಳಗುವ ಸಾಮೂಹಿಕ ನಮಾಝ್‌ನ ಕರೆ) ಮೊಳಗಿದಾಗ, ಸಾಮಾನ್ಯವ್ಯಕ್ತಿ ಮತ್ತು ರಾಜ ಒಂದೇ ಸಾಲಿನಲ್ಲಿ ಭುಜಕ್ಕೆ ಭುಜ ತಾಗಿಸಿ ನಿಂತು ಪ್ರಾರ್ಥನೆ ನಿರ್ವಹಿಸುತ್ತಾರೆ. ಒಟ್ಟಿಗೆ ಬಾಗುತ್ತಾ "ದೇವನು ಅತ್ಯಂತ ಮಹಾನನು" ಎಂದು ಜೊತೆಯಾಗಿ ಘೋಷಿಸುತ್ತಾರೆ. ಸಾಮೂಹಿಕ

ನಮಾಝ್ ಗಾಗಿ ಈ ರೀತಿ ಒಗ್ಗೂಡುವುದು, ರಾಜ–ಪ್ರಜೆ ಎಂಬ ಬೇಧಭಾವವಿಲ್ಲದೆ ಒಂದೇ ಸಾಲಿನಲ್ಲಿ ನಿಂತು ಪ್ರಾರ್ಥನೆ ಸಲ್ಲಿಸುವುದು ನೈಜ ಪ್ರಜಾಪ್ರಭುತ್ವದ ಪ್ರತಿಬಿಂಬವಾಗಿದೆ. ಮುಂದುವರಿಯುತ್ತಾ ಭಾರತದ ಪ್ರಸಿದ್ಧ ಕವಯತ್ರಿ ಹೇಳುತ್ತಾರೆ: ನೈಸರ್ಗಿಕವಾಗಿ ಪರಸ್ಪರ ಮನುಷ್ಯರ ನಡುವೆ ಸಹೋದರತ್ವವನ್ನು ಉಂಟುಮಾಡುವ ಇಸ್ಲಾಂನ ಯಾವುದೇ ಬೇಧಭಾವವಿಲ್ಲದ ಈ ಏಕತಾನೀತಿ, ಅದರ ಪರಸ್ಪರ ಸಮಾನತೆಯ ಈ ತತ್ವವು ನನ್ನನ್ನು ಅನೇಕ ಬಾರಿ ಮಂತ್ರಮುಗ್ಧಗೊಳಿಸಿದೆ. ಇದು ಎಷ್ಟು ದೊಡ್ಡ ವಿಶ್ವಭ್ರಾತೃತ್ವದ ಸಂದೇಶವನ್ನು ಹೊಂದಿದೆ ಎಂದರೆ ಭಾರತ, ಟರ್ಕಿ, ಈಜಿಪ್ಟ್ ಮತ್ತು ಓಮನ್ ನ ವ್ಯಕ್ತಿಗಳು ಲಂಡನ್ ನಲ್ಲಿ ಪರಸ್ಪರ ಭೇಟಿಯಾದರೆಂದಿಟ್ಟುಕೊಳ್ಳಿ. ಅವರ ನಡುವೆ ಓರ್ವ ಈಜಿಪ್ಟ್ ನಲ್ಲಿ ಹುಟ್ಟಿದವ ಇನ್ನೋರ್ವ ಭಾರತದಲ್ಲಿ ಹುಟ್ಟಿದವ ಎಂಬ ಜನ್ಮಸ್ಥಳಗಳ ವ್ಯತ್ಯಾಸಗಳ ಹೊರತು ಬೇರೇನೂ ವ್ಯತ್ಯಾಸಗಳೇ ಇಲ್ಲವೇನೋ ಎಂಬಷ್ಟು ಬಲಿಷ್ಠ ಸಹೋದರತ್ವವನ್ನು ನಿರ್ಮಿಸುವುದು.

ಇಸ್ಲಾಂನ ಕುರಿತು ಮಹಾತ್ಮಾ ಗಾಂಧೀಜಿ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಹೀಗೆ ಬರೆಯುತ್ತಾರೆ: "ಸ್ಪೈನ್ ಜನರಿಗೆ ನಾಗರಿಕತೆಯನ್ನು ಕಲಿಸಿದ, ಮೊರಕ್ಕೋದಲ್ಲಿ ತನ್ನ ಜ್ಞಾನದದೀಪ ಬೆಳಗಿದ, ಜಗತ್ತಿಗೆ ಸೋದರತ್ವದ ಪಾಠವನ್ನು ಕಲಿಸಿದ ಇಸ್ಲಾಂ ಈಗ ದಕ್ಷಿಣ ಆಫ್ರಿಕಾದತ್ತ ಮುಖಮಾಡಿರುವುದನ್ನು ನೋಡಿ ಯುರೋಪಿಯನ್ನರು ಹೆದರಿದ್ದಾರೆಂದು ಯಾರೋ ಹೇಳಿರುವರು. ಹೌದು. ಯುರೋಪಿಯನ್ನರು ಹೆದರುತ್ತಿರುವುದು ಸರಿಯೇ ಇರಬಹುದೇನೋ, ಏಕೆಂದರೆ ಇಸ್ಲಾಂ ಎಲ್ಲಿ ಪ್ರವೇಶಿಸುತ್ತದೋ ಅಲ್ಲಿ ಕರಿಯರು–ಬಿಳಿಯರೆಂಬ ಬೇಧವಿರದು. ಇಸ್ಲಾಂ ಎಲ್ಲಿ ಪ್ರವೇಶಿಸುತ್ತದೋ ಅಲ್ಲಿ ಅದು ಎಲ್ಲರಿಗೂ ಸಮಾನತೆಯ ಹಕ್ಕನ್ನು ನೀಡುವುದು. ಒಂದು ವೇಳೆ ಮೇಲು–ಕೀಳೆಂಬ ಬೇಧಭಾವವಿರದ, ಪರಸ್ಪರ ಸೋದರ ಭಾವ ನೀಡುವ ಸೌಹಾರ್ದ ಸಮಾಜ ನಿರ್ಮಾಣವಾಗುತ್ತಿರುವುದು ನೋಡಿ ಹೆದರುವುದು ಸರಿ ಎಂದಾದರೆ ಯುರೋಪಿಯನ್ನರು ಇಸ್ಲಾಂಗೆ ಹೆದರುವುದು ಕೂಡ ಸರಿಯೇ ಆಗಿದೆ".

ವರ್ಷಂಪ್ರತಿ ಹಜ್ಜ್ ನ ಸಂದರ್ಭದಲ್ಲಿ ಕುಲ–ವರ್ಣ, ಅಂತಸ್ತು ಇದ್ಯಾವುದರ ಪರಿವೆಯೇ ಇಲ್ಲದೆ, ಸಮಾನತೆಯ ಭಾವದೊಂದಿಗೆ ಜನರು ಒಗ್ಗೂಡಿಕೊಂಡು ಹಜ್ಜ್ ನ ಸಾಮೂಹಿಕ ಆರಾಧನಾ ವಿಧಿಯಲ್ಲಿ ತೊಡಗಿರುವ ಸುಂದರ ದೃಶ್ಯಗಳನ್ನು ಜಗತ್ತು

ಬೆರಗುಗಣ್ಣಿನಿಂದ ವೀಕ್ಷಿಸುತ್ತದೆ. ಯುರೋಪಿಯನ್ನರು, ಚೀನಿಯರು, ಭಾರತೀಯರು, ಇರಾನಿಯನ್ನರು ಇವರೆಲ್ಲರೂ ಒಂದು ದೈವಿಕ ಕುಟುಂಬದ ಸದಸ್ಯರೆಂಬಂತೆ ಮಕ್ಕಾದಲ್ಲಿ ಒಂದುಗೂಡುತ್ತಾರೆ. ಅಲ್ಲಿ ಒಂದುಗೂಡುವ ಜನರೆಲ್ಲರೂ ಹೊಲಿಗೆಯಿಲ್ಲದ ಸಾಮಾನ್ಯವಾದ ಬಿಳಿಬಣ್ಣದ ಎರಡು ತುಂಡು ಬಟ್ಟೆಗಳಲ್ಲಿರುವುದು ವಿಶೇಷ. ಅವುಗಳ ಪೈಕಿ ಒಂದು ತುಂಡನ್ನು ಸೊಂಟದಲ್ಲಿ ಕಟ್ಟಿಕೊಂಡು, ಇನ್ನೊಂದನ್ನು ಭುಜದ ಮೇಲೆ ಹೊದೆದ, ಯಾವುದೇ ಅಹಂಕಾರ–ಆಡಂಬರ ಇಲ್ಲದ ಸ್ಥಿತಿಯಲ್ಲಿ, "ಒಡೆಯನೇ, ನಿನ್ನ ಕರೆಗೆ ಓಗೊಟ್ಟು ಇದೋ ನಾನು ಹಾಜರಿದ್ದೇನೆ, ನನ್ನೊಡೆಯನೇ ಇದೋ ನಾನು ಹಾಜರಿದ್ದೇನೆ, ನಿನಗಾರೂ ಭಾಗೀದಾರರಿಲ್ಲ, ಆಕಾಶ ಭೂಮಿಗಳ ಒಡೆತನವೆಲ್ಲ ನಿನ್ನದೇ" ಎನ್ನುವ ದೇವಮಹಾನತೆಯನ್ನು ಸಾರುವ ಉದ್ಘೋಷವನ್ನು ಪದೇ ಪದೇ ಉಚ್ಚರಿಸುತ್ತಾ ಅವರು ಮುಂದೆ ಸಾಗುತ್ತಾರೆ. ಈ ರೀತಿ ಹಜ್ಜ್ ಯಾತ್ರೆಯುದ್ದಕ್ಕೂ ಎಲ್ಲಿಯೂ ಬಡವ–ಬಲ್ಲಿದ, ಮೇಲು–ಕೀಳು, ಉಚ್ಛ–ನೀಚ, ಕುಲೀನ–ಕುಲಹೀನ ಎಂಬ ಯಾವ ಪ್ರತ್ಯೇಕತೆಗೂ ಅವಕಾಶವಿಲ್ಲದೇ, ಎಲ್ಲರೂ ಸರಿಸಮಾನರಾಗಿ ಭಾಗಿಯಾಗಿ ಸಾಮೂಹಿಕ ಹಜ್ಜ್ ಆರಾಧನಾ ವಿಧಿ–ವಿಧಾನಗಳನ್ನು ಪೂರೈಸಿ, ಇಸ್ಲಾಂನಲ್ಲಿರುವ ವಿಶ್ವಭ್ರಾತೃತ್ವವದ ಮಹತ್ವವನ್ನು ಪ್ರಾಯೋಗಿಕವಾಗಿ ಮನಗಂಡು, ಒಂದು ವಿಶಿಷ್ಟ ಅನುಭವದೊಂದಿಗೆ ಹಜ್ಜ್ ಯಾತ್ರಿಕನು ಮನೆಗೆ ಮರುಳುತ್ತಾನೆ.

ಪ್ರೊಫೆಸರ್ ಹರ್ ಗ್ರೊಂಜ್ (Prof Hurgronje) ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ, "ಪ್ರವಾದಿವರ್ಯರು (ಸ) ಕಲಿಸಿದ ಜಾಗತಿಕ ಐಕ್ಯತೆ ಮತ್ತು ಸೋದರತ್ವದ ತತ್ವವು ಜಾಗತಿಕ ಮಟ್ಟದಲ್ಲಿ ಸೌಹಾರ್ದತೆ, ಸಹೋದರತೆ ಬಯಸುವ ಪ್ರತಿಯೋರ್ವರ ವ್ಯಕ್ತಿಗೂ ಮಾರ್ಗದರ್ಶನ ನೀಡಬಲ್ಲಷ್ಟು ಬಲಿಷ್ಠವಾಗಿದೆ. ಈ ವಿಷಯದಲ್ಲಿ ಪ್ರಪಂಚದ ಬೇರಾವ ತತ್ವಗಳೂ ಪ್ರವಾದಿವರ್ಯರು (ಸ) ನೀಡಿದ ಶಿಕ್ಷಣಕ್ಕೆ ಸರಿಸಾಟಿಯಾಗಿ ನಿಲ್ಲಲಾರವು.

ಪ್ರವಾದಿವರ್ಯರು (ಸ) ಪ್ರಜಾಪ್ರಭುತ್ವವನ್ನು ಅದರ ಅತ್ಯುನ್ನತ ರೂಪದಲ್ಲಿ ಕಾರ್ಯರೂಪಕ್ಕೆ ತಂದರು. ಖಲೀಫಾ ಉಮರ್ (ರ), ಪ್ರವಾದಿವರ್ಯರ (ಸ) ಅಳಿಯ ಖಲೀಫಾ ಅಲಿ (ರ), ಖಲೀಫಾ ಮನ್ಸೂರ್ ಅಬ್ಬಾಸಿ ಇವರೆಲ್ಲರೂ ಇಸ್ಲಾಮಿ ಸಾಮ್ರಾಜ್ಯದ

ಅತ್ಯುನ್ನತ ಪ್ರತಿನಿಧಿಗಳಾಗಿದ್ದರೂ ವಿಚಾರಣೆಗಾಗಿ ನ್ಯಾಯಾಧೀಶರ ಮುಂದೆ ಸಾಮಾನ್ಯ ಪ್ರಜೆಗಳಂತೆ ಹಾಜರಾಗಬೇಕಾಯಿತು. ಜಗತ್ತು ಇಷ್ಟು ಮುಂದುವರಿದ ಹೊರತಾಗಿಯೂ ಇಂದಿಗೂ ಕರಿಯರೊಂದಿಗೆ ಬಿಳಿಜನರು ಎಷ್ಟು ಕೆಟ್ಟದಾಗಿ ವರ್ತಿಸುತ್ತಾರೆ ಎಂಬುದನ್ನು ನಾವು ದಿನನಿತ್ಯ ನೋಡುತ್ತಲೂ ಕೇಳುತ್ತಲೂ ಇರುತ್ತೇವೆ. 1,400 ವರ್ಷಗಳಷ್ಟು ಹಿಂದೆ 'ಬಿಲಾಲ್' ಎಂಬ ಕರಿಯ ಗುಲಾಮ ವ್ಯಕ್ತಿಯ ಇದ್ದರು. ಅವರು ಪ್ರವಾದಿವರ್ಯರ (ಸ) ಆಪ್ತ ಸಹಚರರಲ್ಲಿ ಒಬ್ಬರೆಂದು ಪರಿಗಣಿಸಲ್ಪಡುತ್ತಿದ್ದರು. ಸಾಮೂಹಿಕ ಪ್ರಾರ್ಥನೆಗಾಗಿ ಕರೆ ಕೊಡುವುದು (ಅಝಾನ್ ನೀಡುವುದು) ಬಹಳ ಪುಣ್ಯದಾಯಕ ಮತ್ತು ಶ್ರೇಷ್ಠಕಾರ್ಯವೆಂದು ಭಾವಿಸಲಾಗುತ್ತಿದ್ದ ಆ ಕಾಲದಲ್ಲಿ, ಅಝಾನ್ ನೀಡುವ ಗೌರವ ಒಲಿದು ಬಂದಿದ್ದು ಬಿಲಾಲ್ (ರ) ಪಾಲಿಗಾಗಿತ್ತು. ಇಸ್ಲಾಮಿನಲ್ಲಿ ಅತ್ಯಂತ ಗೌರವಾನ್ವಿತ ಸ್ಥಾನವಿರುವ, ಭೂಮಿಯಲ್ಲಿ ದೇವಾರಾಧನೆಗೆಂದು ನಿರ್ಮಿಸಿದ ಮೊತ್ತಮೊದಲ ಆರಾಧನಾಲಯ ಎಂಬ ಹೆಗ್ಗಳಿಕೆ ಕಅಬಾ (ಮಕ್ಕಾದಲ್ಲಿರುವ ದೇವಭವನ) ಹೊಂದಿದೆ. ಮಕ್ಕಾದ ವಿಜಯದ ಸಂದರ್ಭದಲ್ಲಿ ಭೂಮಿಯಲ್ಲಿರುವ ಆರಾಧಾನಾಲಯಗಳ ಪೈಕಿ ಅತ್ಯಂತ ಶ್ರೇಷ್ಠ ಆರಾಧನಾಲಯವಾದ ಈ ಕಅಬಾದ ತುತ್ತು ತುದಿಯ ಮೇಲೆ ಹತ್ತಿ ನಿಂತು ಪ್ರವಾದಿವರ್ಯರು (ಸ) ನಮಾಝ್ ಗಾಗಿ ಕರೆಕೊಡಲು ಆದೇಶಿಸಿದ್ದು ಇದೇ ಬಿಲಾಲ್ (ರ) ರವರಿಗೆ. ಪ್ರವಾದಿವರ್ಯರು (ಸ) ಆದೇಶದನ್ವಯ ಕಅಬಾದ ಮೇಲೆ ಹತ್ತಿನಿಂತು ಬಿಲಾಲರು ಅಝಾನ್ ಕೊಡುತ್ತಿರುವ ಮನಮೋಹಕ ದೃಶ್ಯವನ್ನು ಕಂಡು, ಅದನ್ನು ಅರಗಿಸಿಕೊಳ್ಳಲಾಗದ ಅಜ್ಞಾನಿ ಅರಬರು, 'ಕಅಬಾದಂತಹ ಪವಿತ್ರಸ್ಥಳದ ಮೇಲೆ ಈ ದಪ್ಪ ತುಟಿಯ ಕರಿಯ ಗುಲಾಮ ಹತ್ತಿ ಅಝಾನ್ ಕೊಡುವುದೇ? ಇವನು ಈ ಕೂಡಲೇ ನಾಶವಾಗಬಾರದೇ?' ಎನ್ನುತ್ತಾ ತಮ್ಮ ಅಜ್ಞಾನಕಾಲದ ಅಸಹನೆಯನ್ನು ಪ್ರದರ್ಶಿಸತೊಡಗಿದರು.

ಕುಲ–ಗೋತ್ರದ ಆಧಾರದಲ್ಲಿ ಅರಬರು ಪ್ರದರ್ಶಿಸುತ್ತಿದ್ದ ದರ್ಪ ಮತ್ತು ಅಜ್ಞಾನಕಾಲದ ಆಡಂಬರಗಳಿಗೆಲ್ಲವೂ ಪ್ರವಾದಿವರ್ಯರು ಕೊನೆಹಾಡಲು ಬಯಸಿದ್ದರು. ಆದುದರಿಂದಲೇ ಅವರು ತಮ್ಮ ಅನುಯಾಯಿಗಳನ್ನುದ್ದೇಶಿಸಿ ಉಪದೇಶ ಮಾಡುತ್ತಾ ತಮ್ಮ ಭಾಷಣವೊಂದರಲ್ಲಿ, 'ನಾವೆಲ್ಲರೂ; ಅಜ್ಞಾನಕಾಲದ ದರ್ಪ, ಅಹಂಕಾರ–ಆಡಂಬರಗಳಂತಹ ಕೆಡುಕುಗಳನ್ನು ನಮ್ಮಿಂದ ದೂರೀಕರಿಸಿ, ನಮಗೆ ನೇರಮಾರ್ಗವನ್ನು ತೋರಿಸಿದ ದೇವನನ್ನು ಸ್ತುತಿಸುತ್ತಾ

ಅವನಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ಮನುಷ್ಯರು ಕೇವಲ ಎರಡು ವಿಧಗಳಲ್ಲಿ ವಿಂಗಡಿಸಲ್ಪಟ್ಟಿರುವರು. ಈ ಪೈಕಿ ಮೊದಲನೆಯವರು ದೇವನಿಗೆ ಭಯಪಟ್ಟು ವರ್ತಿಸುತ್ತಾ ಅವನ ನಿರ್ದೇಶನದಂತೆ ಬದುಕು ಸಾಗಿಸುವ ದೇವನಿಷ್ಠ ಸಜ್ಜನರು. ಈ ವರ್ಗದವರೇ ದೇವನಿಗೆ ಅತ್ಯಂತ ಪ್ರಿಯವಾದವರು. ಎರಡನೆಯವ ವರ್ಗದವರು ಸದಾ ಪಾಪಕಾರ್ಯಗಳಲ್ಲಿ ನಿರತರಾಗಿರುವ ವಕ್ರ ಮನಸ್ಥಿತಿಯವರು. ಇಂತಹವರು ದೇವನ ಬಳಿ ಯಾವುದೇ ಸ್ಥಾನ–ಮಾನವಿಲ್ಲದ ನಿಕೃಷ್ಠರು. ನಾವೆಲ್ಲರೂ ಆದಮರ ಸಂತಂತಿಗಳು. ಆದಮರಾದರೋ ಮಣ್ಣಿನಿಂದ ಸೃಷ್ಟಿಸಲ್ಪಟ್ಟವರು.

ಇದನ್ನು ಕುರ್ ಆನಿನಲ್ಲಿ ಈ ರೀತಿಯಾಗಿ ಹೇಳಲಾಗಿದೆ:

**“ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.” (49-13)**

ಪ್ರವಾದಿವರ್ಯರು ತಮ್ಮ ಇಂತಹ ಮನಮುಟ್ಟುವ ಉಪದೇಶಗಳಿಂದ ಎಂತಹ ಉನ್ನತ ಕ್ರಾಂತಿ ತಂದರೆಂದರೆ, ಉನ್ನತ ಕುಲ–ಗೋತ್ರಗಳಿಗೆ ಸೇರಿದ ಅರಬರು ತಮ್ಮ ಹೆಣ್ಣುಮಕ್ಕಳನ್ನು ಇದೇ ಕರಿಗುಲಾಮರಾಗಿದ್ದ ಬಿಲಾಲ್ (ರ) ರಿಗೆ ವಿವಾಹ ಮಾಡಿಕೊಡಲು ಸಿದ್ಧರಾದರು. ಇಸ್ಲಾಮಿನ ಎರಡನೆಯ ಖಲೀಫಾರಾಗಿದ್ದ ಉಮರ್ (ರ), ಬಿಲಾಲ್ ರನ್ನು ಕಂಡಾಗ ಅವರನ್ನು ಗೌರವಿಸುತ್ತಾ ಎದ್ದ ನಿಲ್ಲುತ್ತಿದ್ದರು. ‘ನಮ್ಮ ನಾಯಕ, ನಮ್ಮ ಗುರುವರ್ಯರು ಬಂದರು’ ಎನ್ನುತ್ತಾ ಅವರನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದರು. ತಮ್ಮ ಉನ್ನತ ಕುಲ–ಗೋತ್ರಗಳ ಕಾರಣ ಅತ್ಯಂತ ದರ್ಪ ತೋರುತ್ತಿದ್ದ, ಅನ್ಯರಿಂದ ‘ದುರಹಂಕಾರಿ, ಅಜ್ಞಾನಿ ಜನಾಂಗ’ ಎಂದು ಕರೆಸಿಕೊಳ್ಳುತ್ತಿದ್ದ ಅರಬರ ಮಧ್ಯೆ ಅತ್ಯಂತ ಸಣ್ಣ ಅವಧಿಯಲ್ಲಿ ಕುರ್–ಆನ್ ಮತ್ತು ಪ್ರವಾದಿವರ್ಯರ (ಸ) ಶಿಕ್ಷಣದ ಮೂಲಕ ಮೂಡಿದ ದೊಡ್ಡಮಟ್ಟದ ಕ್ರಾಂತಿ ನಿಜಕ್ಕೂ ಮೂಗಿನ ಮೇಲೆ ಬೆರಳಿಡುವಂತೆ ಮಾಡುತ್ತದೆ. ಹೀಗಾಗಿಯೇ ಜರ್ಮನ್ ನ ಅತಿದೊಡ್ಡ ಕವಿ

ಗೋಯ್ಟೆ, ಕುರ್–ಆನ್ ನ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, 'ಈ ಗ್ರಂಥವು ತನ್ನ ಸಾರ್ವಕಾಲಿಕ ಶ್ರೇಷ್ಠತೆಯೊಂದಿಗೆ ತನ್ನ ಪ್ರಭಾವವನ್ನು ಸಾಬೀತುಪಡಿಸುವುದು' ಎಂದು ಹೇಳಿದ್ದಾರೆ. ಆದುದರಿಂದಲೇ ಜಾರ್ಜ್ ಬರ್ನಾಡ್ ಷಾ ರಂತಹ ಅತ್ಯಂತ ಪ್ರಭಾವಿತ ವ್ಯಕ್ತಿಗೂ, 'ಮುಂದಿನ 100 ವರ್ಷದೊಳಗೆ ಕೇವಲ ಇಂಗ್ಲೆಂಡ್ ಮಾತ್ರವಲ್ಲ, ಪೂರ್ತಿ ಯುರೋಪ್ ಅನ್ನು ಆಳುವ ಸಾಮರ್ಥ್ಯವಿರುವ ಯಾವುದಾದರೂ ಧರ್ಮವಿದ್ದರೆ ಅದು ಇಸ್ಲಾಮ್ ಮಾತ್ರವಾಗಿದೆ' ಎಂದು ಒಪ್ಪಿಕೊಳ್ಳಬೇಕಾಯಿತು.

ಮಹಿಳೆಯರನ್ನು ಪುರುಷರ ಗುಲಾಮಗಿರಿಯಿಂದ ಮುಕ್ತಗೊಳಿಸಿದ ಶ್ರೇಯಸ್ಸು ಇಸ್ಲಾಮಿನ ಪ್ರಜಾಸತ್ತಾತ್ಮಕ ಬೋಧನೆಗೆ ಸಲ್ಲುತ್ತದೆ. ಸರ್ ಚಾರ್ಲ್ಸ್ ಎಡ್ವರ್ಡ್ ಹ್ಯಾಮಿಲ್ಟನ್ ಹೇಳುತ್ತಾರೆ, 'ಇಸ್ಲಾಮ್, ಮನುಷ್ಯನು ಹುಟ್ಟಿನಿಂದ ಮುಗ್ಧನು ಎಂದು ಹೇಳುತ್ತದೆ. ಸ್ತ್ರೀ–ಪುರುಷರಿಬ್ಬರೂ ಒಂದೇ ಸತ್ವದಿಂದ ಸೃಷ್ಟಿಸಲ್ಪಟ್ಟವರು. ಇಬ್ಬರೊಳಗೂ ಇರುವುದು ಒಂದೇ ತೆರನಾದ ಆತ್ಮ. ಅವರೀರ್ವರೂ ತಮ್ಮೊಳಗಿನ ಮಾನಸಿಕತೆ, ಆಧ್ಯಾತ್ಮಿಕತೆ ಮತ್ತು ನೈತಿಕತೆಯನ್ನು ಬೆಳೆಸಿಕೊಳ್ಳುವುದರಲ್ಲಿ ಸಮಾನ ಮಟ್ಟದ ಸಾಮರ್ಥ್ಯವನ್ನು ಹೊಂದಿದದ್ದಾರೆ ಎಂಬುದನ್ನು ಅದು ಸಾರುತ್ತದೆ.' ಅರಬ್ಬರಲ್ಲಿ, 'ಈಟಿ ಎಸೆಯಬಲ್ಲ, ಖಡ್ಗವನ್ನು ಜಳಪಿಸಬಲ್ಲ ವ್ಯಕ್ತಿಗಷ್ಟೇ ಆಸ್ತಿಯಲ್ಲಿ ಹಕ್ಕು ಪಡೆಯಲು ಅರ್ಹ' (ಅರ್ಥಾತ್ ಪುರುಷರು ಮಾತ್ರ ಅರ್ಹರು) ಎಂಬ ಅಜ್ಞಾನದಿಂದ ಕೂಡಿದ ಸಂಪ್ರದಾಯವಿತ್ತು. ಆದರೆ, ಇಸ್ಲಾಮ್ 'ಅಬಲೆಯರ ಹಕ್ಕನ್ನು ಎತ್ತಿಹಿಡಿಯುತ್ತಾ, 'ಆಸ್ತಿಯಲ್ಲಿ ಮಹಿಳೆಯರ ಪಾಲನ್ನು ನೀಡುವುದು ಖಡ್ಡಾಯ. ಇದು ದೇವನಿಯಮ. ಈ ನಿಯಮವನ್ನು ಮೀರಕೂಡದು' ಎಂದು ಎಚ್ಚರಿಸಿತು. ಈ ರೀತಿ ಇಸ್ಲಾಮ್ ಸಹಸ್ರಾರು ವರ್ಷಗಳ ಹಿಂದೆಯೇ ಅಬಲೆಯರ ಹಕ್ಕನ್ನು ಎತ್ತಿಹಿಡಿಯಿತು. ಮಹಿಳೆಯರಿಗೂ ಆಸ್ತಿಯಲ್ಲಿ ಪಾಲಿದೆ ಎಂಬುದನ್ನು ಅದು ಬಲವಾಗಿ ಪ್ರತಿಪಾದಿಸಿತು. ಇಸ್ಲಾಮ್ ಬಂದ ಹನ್ನೆರಡು ಶತಮಾನಗಳ ನಂತರ ಪ್ರಜಾಪ್ರಭುತ್ವದ ತವರು ಎಂದು ಪರಿಗಣಿಸಲ್ಪಡುವ ಇಂಗ್ಲೆಂಡ್ ಇಸ್ಲಾಮ್ ನ ಈ ಬೋಧನೆಯನ್ನು ಒಪ್ಪಿಕೊಂಡಿತು. ಮಹಿಳೆಯರ ಪರವಾದ ಈ ಕಾನೂನು 'ವಿವಾಹಿತ ಮಹಿಳೆಯರ ಕಾಯಿದೆ' (The Married Women's Act) ಎಂಬ ಹೆಸರಿನಲ್ಲಿ ಅಲ್ಲಿ 1881ನೆಯ ಇಸವಿಯಲ್ಲಿ ಜಾರಿಗೊಂಡಿತು. ಆದರೆ ಸಹಸ್ರಾರು ವರ್ಷಗಳ ಹಿಂದೆಯೇ

ಪ್ರವಾದಿವರ್ಯರು 'ಮಹಿಳೆ ಪುರುಷನ ದ್ವಿತಿಯಾರ್ಧ ಭಾಗವಾಗಿರುವಳು' (ಮಹಿಳೆಯು ಪುರುಷನ ಜೀವನದ ಅವಿಭಾಜ್ಯ ಅಂಗ), 'ಮಹಿಳೆಯ ಹಕ್ಕು ಎಲ್ಲಾ ಸ್ಥಿತಿಗಳಲ್ಲೂ ಮಾನ್ಯವಾಗಿರುವುದು', 'ಜಾಗ್ರತೆ, ಮಹಿಳೆಯರಿಗೆ ನೀಡಿರುವ ಹಕ್ಕುಗಳಿಂದ ಅವರು ವಂಚಿತರಾಗಕೂಡದು ಎಂಬುದನ್ನು ಸದಾ ನೆನಪಿನಲ್ಲಿಡಿ' ಎನ್ನುವ ಮೂಲಕ ಅಬಲೆಯರಾದ ಸ್ತ್ರೀಯರ ಹಕ್ಕುಗಳನ್ನು ಎತ್ತಿಹಿಡಿದಿರುವರು.

ಇಸ್ಲಾಮ್ ನೇರವಾಗಿ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯತ್ತ ಬೊಟ್ಟು ಮಾಡುವುದಿಲ್ಲವಾದರೂ, ಎಲ್ಲೆಲ್ಲಾ ರಾಜಕೀಯ ಮತ್ತು ಆರ್ಥಿಕ ವಿಷಯಗಳು ಮನುಷ್ಯನ ನಡವಳಿಕೆ ಮತ್ತು ಆತನ ನೈತಿಕತೆಯ ಮೇಲೆ ಪರಿಣಾಮ ಬೀರಬಲ್ಲವೋ, ಅಲ್ಲೆಲ್ಲ ಅದು ತನ್ನ ಅನುಯಾಯಿಗಳಿಗೆ ಕೆಲವು ಪ್ರಮುಖ ತತ್ವಗಳನ್ನು ಪಾಲಿಸಲು ಬೋಧಿಸಿದೆ. ಪ್ರೊಫೆಸರ್ ಮೆಸ್ಸಿನಾರವರ ಪ್ರಕಾರ, ಇಸ್ಲಾಂ ಉತ್ಪ್ರೇಕ್ಷಿತ ವಿಪರೀತಗಳ ನಡುವೆ ಸಮತೋಲನ ಕಾಯ್ದುಕೊಳ್ಳುತ್ತದೆ. ಅದು ಯಾವಾಗಲೂ ಮಾನವೀಯತೆಯ ಬುನಾದಿಯಾಗಿರುವ ನೈತಿಕತೆಯನ್ನು ಬೆಳೆಸಿಕೊಳ್ಳಲು ಹಾಗೂ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಬೇಕಿರುವ ತತ್ವಗಳನ್ನು ಪಾಲಿಸಲು ಹೆಚ್ಚು ಒತ್ತು ನೀಡುತ್ತದೆ. ಇಸ್ಲಾಮ್ ಇದನ್ನು ತನ್ನ ಕೆಲವು ಮೂಲಭೂತ ತತ್ವಗಳ ಮೂಲಕ ಖಾತರಿಪಡಿಸಿದೆ. ಉದಾ: ವಾರೀಸತ್ವದ ನಿಯಮ, ಝಕಾತ್ ವ್ಯವಸ್ಥೆ(ಖಡ್ಡಾಯ ದಾನ), ಬೈತುಲ್ ಮಾಲ್ ವ್ಯವಸ್ಥೆಯಂತಹ ಸಮಾಜಸ್ನೇಹಿ ನಿಯಮಗಳನ್ನು ಜಾರಿಗೆ ತಂದಿದ್ದು ಒಂದೆಡೆಯಾದರೆ, ಇನ್ನೊಂದೆಡೆ ಬಡ್ಡಿ ವ್ಯವಸ್ಥೆ, ಏಕಸ್ವಾಮ್ಯ ವ್ಯವಸ್ಥೆ, ಲಂಚ ಮತ್ತು ಮಾರುಕಟ್ಟೆಯಲ್ಲಿರುವ ಎಲ್ಲಾ ವಸ್ತುಗಳನ್ನು ಖರೀದಿಸಿ ಸಂಗ್ರಹಣೆ ಮಾಡುವ ಮೂಲಕ ಕೃತಕ ಅಭಾವ ಸೃಷ್ಟಿಸಿ ವಸ್ತುಗಳ ಬೆಲೆ ಏರಿಸುವುದು ಮುಂತಾದ ಎಲ್ಲಾ ಸಮಾಜ ವಿರೋಧಿ ಚಟುವಟಿಕೆಗಳನ್ನು ಅದು ಕಟ್ಟುನಿಟ್ಟಾಗಿ ನಿಷೇಧಗೊಳಿಸಿ ಅವುಗಳನ್ನೆಲ್ಲ ಇಸ್ಲಾಮ್ 'ಕಾನೂನು ಬಾಹಿರ ಚಟುವಟಿಕೆಗಳು' ಎಂದು ಘೋಷಿಸಿದೆ. ಅನಾಥಾಲಯ, ಆರಾಧಾನಾಲಯ, ಆಸ್ಪತ್ರೆ ಮತ್ತು ಕುಡಿಯುವ ನೀರಿನ ಯೋಜನೆಗಳು (ಉದಾ: ಬಾವಿ, ಕೊಳವೆ ತೋಡಿ ಅದನ್ನು ಸಾರ್ವಜನಿಕ ಬಳಕೆಗಾಗಿ ನೀಡುವುದು) ಮುಂತಾದ ಸಮಾಜಮುಖಿ ಕಾರ್ಯಗಳನ್ನದು ಪ್ರೋತ್ಸಾಹಿಸುವುದರ ಜೊತೆಗೆ ಇಂತಹ ಪುಣ್ಯಕಾರ್ಯಗಳಿಗೆ ದೇವನ ಬಳಿ ಹೇರಳ

ಪ್ರತಿಫಲವಿದೆ ಎಂದು ಉತ್ತೇಜಿಸಿದೆ. 'ಜಗತ್ತಿನಲ್ಲಿ ಮೊತ್ತ ಮೊದಲ ಬಾರಿಗೆ ಅನಾಥಾಶ್ರಮಗಳು ಸ್ಥಾಪನೆಗೊಳ್ಳಲು ಸ್ವತಃ ಅನಾಥರಾಗಿದ್ದ ಪ್ರವಾದಿವರ್ಯರ ಬೋಧನೆಗಳೇ ಪ್ರೇರಣೆ' ಎಂದು ಹೇಳಲಾಗುತ್ತದೆ. ಈ ಕಾರಣಕ್ಕಾಗಿಯೂ ಜಗತ್ತು ಪ್ರವಾದಿವರ್ಯರಿಗೆ ಕೃತಜ್ಞವಾಗಿರಬೇಕು. ಕಾರ್ಲೈಲ್ ಪ್ರವಾದಿ ಮುಹಮ್ಮದರ (ಸ) ಬಗ್ಗೆ ಬರೆಯುತ್ತಾ ಹೇಳುತ್ತಾರೆ: "ಶಾಂತಿ ಮತ್ತು ಮಾನವೀಯತೆಯೆಡೆಗೆ ಕರೆ, ಏಕತೆ ಮತ್ತು ಸಮಾನತೆಯ ಧ್ವನಿ, ಧರ್ಮನಿಷ್ಠತೆ ಮತ್ತು ನೈತಿಕತೆಯ ಮಾದರಿ ಈ ಎಲ್ಲಾ ಸದ್ಗುಣಗಳು ಮರುಭೂಮಿಯ ಆ ಶಾಂತಿಪುತ್ರನ ಒಡಲಲ್ಲಿ ಮಾರ್ದನಿಸುತ್ತಿದ್ದುದಂತೂ ಸ್ಪಷ್ಟವಾಗಿತ್ತು" .

ಇತಿಹಾಸದ ಮಹಾನ್ ವ್ಯಕ್ತಿಯನ್ನು (ಅವರು ಮಹಾನ್ ವ್ಯಕ್ತಿ ಆಗಿದ್ದರೇ ಇಲ್ಲವೇ ಎಂಬುದನ್ನು) ಮೂರು ವಿಷಯಗಳ ಬೆಳಕಿನಲ್ಲಿ ಗುರುತಿಸಲು ಅಥವಾ ಅಳೆಯಲು ಸಾಧ್ಯ. ಮೊದಲನೆಯದು; ಆ ವ್ಯಕ್ತಿ ತನ್ನ ಸಮಕಾಲೀನ ಜನರ ದೃಷ್ಟಿಯಲ್ಲಿ ನಿಜಕ್ಕೂ ನೈತಿಕತೆಯ ಅತ್ಯುನ್ನತ ಮಟ್ಟದಲ್ಲಿ ಇದ್ದರೆ?. ಎರಡನೆಯದು, ತನ್ನ ಕಾಲದ ಮಾನದಂಡಗಳಿಗೂ ಮೀರಿ ಆ ವ್ಯಕ್ತಿಯ ಹಿರಿಮೆಯು ಹಬ್ಬಿದೆಯೇ?, ಮೂರನೆಯದು, ತನ್ನ ನಂತರದ ಪೀಳಿಗೆಗಳಿಗೆ ಆ ವ್ಯಕ್ತಿಯು ನೀಡಿದ ಕೊಡುಗೆಗಳೇನು?.. ಈ ಪಟ್ಟಿಯನ್ನು ಇನ್ನೂ ವಿಸ್ತರಿಸಬಹುದಾದರೂ ಮೇಲೆ ಹೇಳಿದ ಮೂರು ಮಾನದಂಡಗಳಲ್ಲಿಯೂ ಪ್ರವಾದಿ ಮುಹಮ್ಮದರ (ಸ) ವ್ಯಕ್ತಿತ್ವವು ಅತ್ಯುನ್ನತ ಮಟ್ಟದಲ್ಲಿ ರಾರಾಜಿಸುತ್ತಿದೆ ಎಂಬುದಂತೂ ಸ್ಪಷ್ಟ. ಈ ಮೂರು ಮಾನದಂಡಗಳ ಪೈಕಿ ಕೊನೆಯ ಎರಡನ್ನು ಈಗಾಗಲೇ ಈ ಮೇಲೆ ವಿವರಿಸಲಾಗಿದೆ.

ಇನ್ನು ಮೊದಲನೆಯ ಮಾನದಂಡದ ಪ್ರಕಾರ ಪ್ರವಾದಿ ಮುಹಮ್ಮದರು ನಿಜಕ್ಕೂ ತನ್ನ ಸಮಕಾಲೀನರ ದೃಷ್ಟಿಯಲ್ಲಿ ನೈತಿಕತೆಯ ಉನ್ನತ ಮಟ್ಟವನ್ನು ಹೊಂದಿದ್ದರೆ? ಎಂಬುದು; ಪ್ರವಾದಿ ಮುಹಮ್ಮದರ (ಸ) ಸಮಕಾಲೀನರೆಲ್ಲರೂ, ಅದು ಅವರ ಸ್ನೇಹಿತರಾಗಿರಲಿ ಅಥವಾ ಶತ್ರುಗಳೇ ಆಗಿರಲಿ ಅವರ ಪ್ರಾಮಾಣಿಕತೆ, ಅವರ ಸತ್ಯಸಂಧತೆ ಅವರ ಕಳಂಕರಹಿತ ವಿಶ್ವಸಾರ್ಹತೆ ಮತ್ತು ಬದುಕಿನ ಎಲ್ಲ ರಂಗಗಳಲ್ಲೂ ಅವರು ಹೊಂದಿದ್ದ ಸದ್ಗುಣಗಳ ಕುರಿತು ಒಮ್ಮತಾಭಿಪ್ರಾಯವನ್ನು ಹೊಂದಿದ್ದರು. ಎಲ್ಲಿಯ ತನಕವೆಂದರೆ ಯಹೂದಿಗಳು ಮತ್ತು ಮುಹಮ್ಮದರು ತಂದ ಧರ್ಮದ ಮೇಲೆ ವಿಶ್ವಾಸವಿರಿಸದ ಜನರು ಕೂಡ ಅವರ ನಡುವಿನ

ವ್ಯಾಜ್ಯಗಳನ್ನು ಇತ್ಯರ್ಥಗೊಳಿಸಲು ಪ್ರವಾದಿ ಮುಹಮ್ಮದರನ್ನೇ ನೆಚ್ಚಿಕೊಂಡಿದ್ದರು ಎಂಬುದು ಇತಿಹಾಸದಿಂದ ರುಜುವಾತಾದ ವಾಸ್ತವ. ಪ್ರವಾದಿ ಮುಹಮ್ಮದರನ್ನು ದೇವಪ್ರವಾದಿ ಎಂದು ಒಪ್ಪಲು ತಯಾರಿರದ ಮಕ್ಕಾದ ಬಹುದೇವವಿಶ್ವಾಸಿ ಜನರು ಕೂಡ, "ಓ,ಮುಹಮ್ಮದ್, ನಾವು ನಿಮ್ಮನ್ನು ಸುಳ್ಳುಗಾರನೆಂದು ಹೇಳುವುದಿಲ್ಲ. ಆದರೆ ನೀವು ತಂದ ಸಂದೇಶವನ್ನು ನಾವು ಒಪ್ಪಲು ತಯಾರಿಲ್ಲವೆಂದು ನಿಮ್ಮಲ್ಲಿ ಸ್ಪಷ್ಟಪಡಿಸಲು ಬಯಸುತ್ತೇವೆ ಅಷ್ಟೆ!" ಎನ್ನುತ್ತಿದ್ದರು.

ಮಕ್ಕಾದ ಬಹುದೇವವಿಶ್ವಾಸಿಗಳ ಪೈಕಿ ಕೆಲವರು ಪ್ರವಾದಿ ಮುಹಮ್ಮದರ ಮೇಲೆ ಯಾವುದೋ ಆತ್ಮದ ಕರಿನೆರಳು ಆವರಿಸಿಕೊಂಡಿದೆ ಎಂದೇ ನಂಬಿದ್ದರು. ಇದೇ ಕಾರಣಕ್ಕಾಗಿ ಅವರು ಪ್ರವಾದಿ ಮುಹಮ್ಮದರನ್ನು 'ಚಿಕಿತ್ಸೆ ಪಡೆದುಕೊಳ್ಳಿ' ಎಂದು ಪದೇ ಪದೇ ಪೀಡಿಸುತ್ತಲೂ ಇದ್ದರು. ಮಕ್ಕಾವಾಸಿಗಳ ಪೈಕಿ ಸ್ವಲ್ಪ ತಿಳುವಳಿಕೆಯಿದ್ದ ಉತ್ತಮ ವರ್ಗದ ಜನರು, ಮುಹಮ್ಮದರು ಪ್ರವಾದಿಯ ರೂಪದಲ್ಲಿ ತನ್ನೊಂದಿಗೆ ಸನ್ಮಾರ್ಗದ ಸಂದೇಶವನ್ನು ತಂದಿರುವರು ಎಂದರಿತು, ಆ ಸಂದೇಶವನ್ನು ತಮ್ಮ ಜೀವನದ ದಾರಿದೀಪವಾಗಿಸಿಕೊಳ್ಳಲು ಮುಂದಾದರು. ಪ್ರವಾದಿ ಮುಹಮ್ಮದರನ್ನು (ಸ) ತುಂಬಾ ಹತ್ತಿರದಿಂದ ಬಲ್ಲ ಅವರ ಪತ್ನಿ ಖದೀಜಾ (ರ), ಅವರ ರಕ್ತಸಂಬಂಧಿಗಳಾದ ಚಿಕ್ಕಪ್ಪ ಹಂಝಾ, ಸೋದರ ಸಂಬಂಧಿ ಅಲಿ, ಅವರ ಆಪ್ತಮಿತ್ರರಾಗಿದ್ದ ಅಬೂಬಕರ್ (ರ) ಇವರೆಲ್ಲರೂ ಮುಹಮ್ಮದರು (ಸ) ತಂದಿದ್ದ ದೇವಸಂದೇಶದಿಂದ ಆಳವಾಗಿ ಪ್ರಭಾವಿತರಾಗಿದ್ದರು. ಪ್ರವಾದಿ ಮುಹಮ್ಮದರ ವೈಯಕ್ತಿಕ ಜೀವನವನ್ನು ತುಂಬಾ ನಿಕಟವಾಗಿ ಬಲ್ಲ ಇವರ ಪೈಕಿ ಯಾರೊಬ್ಬರೂ ಅವರ (ಸ) ಮೇಲೆ ದೇವವಾಣಿಯು ಅವತೀರ್ಣವಾಗುತ್ತಿರುವುದರ ಕುರಿತು ಕಿಂಚಿತ್ತೂ ಸಂದೇಹ ಹೊಂದಿರಲಿಲ್ಲ. ಒಂದು ವೇಳೆ, ಪ್ರವಾದಿ ಮುಹಮ್ಮದರು ತಂದ ಸಂದೇಶದಲ್ಲಿ ಸಾಸಿವೆ ಕಾಳಿನಷ್ಟಾದರೂ ಕಾಪಟ್ಯ, ವಂಚನೆ, ಕುತಂತ್ರವಿರುತ್ತಿದ್ದರೆ, ಇದೆಲ್ಲವನ್ನೂ ಮುಹಮ್ಮದರು ತಮ್ಮ ಹೆಸರು ಮತ್ತು ಖ್ಯಾತಿಗಾಗಿ ಮಾಡಿದ್ದಾರೆ ಎಂಬುದರ ಕುರಿತು ಕಿಂಚಿತ್ತಾದರೂ ಅವರ ಈ ಆಪ್ತಬಳಗಕ್ಕೆ ಸಂದೇಹವುಂಟಾಗಿರುತ್ತಿದ್ದರೆ, ಪ್ರವಾದಿ ಮುಹಮ್ಮದರು ಜಾಗತಿಕ ಮಟ್ಟದಲ್ಲಿ ಮೂಡಿಸಲು ಬಯಸಿದ್ದ ಆಧ್ಯಾತ್ಮಿಕ ಜಾಗೃತಿ, ಅವರು ತರಲು ಬಯಸಿದ್ದ ಸಾಮಾಜಿಕ ಸುಧಾರಣೆಗಳು ಮತ್ತು ಅವರು ತನ್ನ ಅನುಯಾಯಿಗಳಲ್ಲಿ ಬೆಳೆಸಲು ಬಯಸಿದ್ದ ನೈತಿಕ ಮಟ್ಟ ಇವ್ಯಾವುದರಲ್ಲಿಯೂ

ಅವರಿಗೆ ಎಳ್ಳಷ್ಟೂ ಯಶಸ್ಸನ್ನು ಕಾಣಲು ಸಾಧ್ಯವಿರುತ್ತಿರಲಿಲ್ಲ. ಆದರೆ, ಇತಿಹಾಸದ ಪುಟಗಳಲ್ಲಿ ಪ್ರವಾದಿವರ್ಯರ (ಸ) ಅನುಯಾಯಿಗಳು, ಅವರ ವೈಯಕ್ತಿಕ ಜೀವನವನ್ನು ಬಹಳ ನಿಕಟವಾಗಿ ಬಲ್ಲ ಅವರ ಆಪ್ತಬಳಗ ಎಲ್ಲರೂ ಅವರ ಸಜ್ಜನ, ಸರಳ ವ್ಯಕ್ತಿತ್ವಕ್ಕೆ ಎಷ್ಟು ಮಾರುಹೋಗಿದ್ದರೆಂದರೆ, ಅವರೆಲ್ಲರೂ ಪ್ರವಾದಿ ಮುಹಮ್ಮದರನ್ನು (ಸ) ತಮ್ಮ ಸ್ವಂತ ಜೀವಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದರು. ಪ್ರವಾದಿ ಮುಹಮ್ಮದರ ಮೇಲಿನ ಗೌರವಾದರದಿಂದಾಗಿ ಇವರೆಲ್ಲರೂ ತಮ್ಮದೇ ಕುಲ–ಗೋತ್ರಗಳ ಜನರನ್ನು ಎದುರು ಹಾಕಿಕೊಂಡರು. ಜನರ ದಬ್ಬಾಳಿಕೆ, ಮಾನಸಿಕ–ದೈಹಿಕ ಹಿಂಸೆ, ಹಸಿವೆ–ಕಿತ್ತುತಿನ್ನುವ ಬಡತನ ಇವೆಲ್ಲವನ್ನೂ ಸಹಿಸುತ್ತಾ ಪ್ರವಾದಿ ಮುಹಮ್ಮದರು ತಂದ ಧರ್ಮದ ಶ್ರೇಯಸ್ಸಿಗಾಗಿ ಹೋರಾಡಿದರು. ಪ್ರವಾದಿ ಮುಹಮ್ಮದರ ಸೂಚನೆಯಂತೆ ತಮ್ಮದೇ ನೆಲದಿಂದ ತಮ್ಮೆಲ್ಲವನ್ನೂ ತೊರೆದು ದೂರದೂರಿಗೆ ವಲಸೆ ಹೋದರು. ಪ್ರವಾದಿ ಮುಹಮ್ಮದರನ್ನು ಅನುಸರಿಸಿದುದುಕ್ಕಾಗಿ ಇಷ್ಟೆಲ್ಲಾ ಸಂಕಷ್ಟಗಳನ್ನು ಸಹಿಸಬೇಕಾಗಿ ಬಂದರೂ ಅವರ ಅನುಯಾಯಿಗಳ ಹೃದಯದಲ್ಲಿ ದಿನದಿಂದ ದಿನಕ್ಕೆ ಪ್ರವಾದಿವರ್ಯರ ಮೇಲಿನ ಪ್ರೇಮ ಹೆಚ್ಚಾಗುತ್ತಲೇ ಹೋಯಿತು. ಒಂದು ವೇಳೆ ಪ್ರವಾದಿವರ್ಯರ (ಸ) ನಡೆ–ನುಡಿಗಳಲ್ಲಿ, ಅವರ ವೈಯಕ್ತಿಕ ಬದುಕಿನಲ್ಲಿ ಯಾವುದೇ ರೀತಿಯ ಕುಂದು–ಕೊರತೆಗಳನ್ನು ಅವರ ಹಿಂಬಾಲಕರು ಕಂಡಿರುತ್ತಿದ್ದರೆ ಪ್ರವಾದಿ ಮುಹಮ್ಮದರು (ಸ) ತಮ್ಮ ಅನುಯಾಯಿಗಳ ಹೃದಯದಲ್ಲಿ ಇಷ್ಟು ದೊಡ್ಡ ಸ್ಥಾನ–ಮಾನಗಳನ್ನು ಗಳಿಸಲು ಸಾಧ್ಯವಿತ್ತೇ?.

ಇತಿಹಾಸದ ಪುಟಗಳನ್ನು ತೆರೆದು ಓದಿದರೆ, ಪ್ರವಾದಿ ಮುಹಮ್ಮದರ (ಸ) ತಮ್ಮ ಪ್ರವಾದಿತ್ವದ ಆರಂಭಿಕ ದಿನಗಳಲ್ಲಿ, ಅವರು ತಂದ ದೇವಸಂದೇಶವನ್ನು ನೆಚ್ಚಿಕೊಂಡು ಇಸ್ಲಾಂನ ಹಿಂಬಾಕರಾಗಿದ್ದ ಸ್ತ್ರೀ–ಪುರುಷರ ಮೇಲೆ ಮಕ್ಕಾವಾಸಿಗಳು ನಡೆಸಿದ ದಬ್ಬಾಳಿಕೆ, ಅವರು ನೀಡಿದ ಪೈಶಾಚಿಕ ಹಿಂಸೆ ಎಂತಹ ಕಲ್ಲು ಹೃದಯವನ್ನೂ ಕರಗಿಸುವಂತಹದ್ದು. ಸುಮಯ್ಯಾ ಎನ್ನುವ ಬಡಮಹಿಳೆಯು ಪ್ರವಾದಿ ತಂದ ದೇವಸಂದೇಶವನ್ನು ಸ್ವೀಕರಿಸಿ, ಅವರ ಹಿಂಬಾಲಕರಾದರು ಎಂಬ ಒಂದೇ ಕಾರಣಕ್ಕೆ ಆಕೆಯ ಮರ್ಮಾಂಗವನ್ನು ಈಟಿಯಿಂದ ಚುಚ್ಚಿ ಆಕೆಯನ್ನು ಬರ್ಬರವಾಗಿ ಹತ್ಯೆ ಮಾಡಲಾಯಿತು. ಖಬ್ಬಾಬ್ ಬಿನ್ ಅರಥ್ ಎನ್ನುವ ಇನ್ನೋರ್ವ

ಪ್ರವಾದಿಯ ಅನುಯಾಯಿಯನ್ನು, ಇಸ್ಲಾಮ್ ಸ್ವೀಕರಿಸಿದರು ಎಂಬ ಒಂದೇ ಕಾರಣಕ್ಕಾಗಿ ಉರಿಯುವ ಕೆಂಡದ ಮೇಲೆ ಮಲಗಿಸಿ, ನಿರ್ದಯಿ ವ್ಯಕ್ತಿಯೋರ್ವ ಅವರ ಎದೆಯ ಮೇಲೆ ತನ್ನ ಪಾದವನ್ನು ಒತ್ತಿ ಅವರನ್ನು ಅಲ್ಲಿಂದ ಅಲುಗಾಡದಂತೆ ತಡೆದನು. ಈ ಬರ್ಬರ ಚಿತ್ರಹಿಂಸೆಯ ಕಾರಣ ಅವರ ದೇಹದಲ್ಲಾದ ಆಳವಾದ ಸುಟ್ಟಗಾಯವಾಯಿತು. ಈ ಪೈಶಾಚಿಕ ಹಿಂಸೆಗೆ ಸಾಕ್ಷಿಯಾಗಿ ಆ ಸುಟ್ಟ ಗಾಯದ ಕಲೆ ಶಾಶ್ವತವಾಗಿ ಹಾಗೆಯೇ ಉಳಿಯಿತು. ಖಬ್ಬಾಬ್ ಬಿನ್ ಅದಿ ಅವರನ್ನು ಅತ್ಯಂತ ಕ್ರೂರವಾಗಿ ಕೊಲ್ಲುವ ಮೊದಲು ಅವರ ದೇಹಕ್ಕೆ ಕತ್ತಿಯಿಂದ ಬಲವಾಗಿ ತಿವಿಯುತ್ತಾ, 'ನಿಜ ಹೇಳು, ನಿನ್ನ ಜಾಗದಲ್ಲಿ ಪ್ರವಾದಿ ಮುಹಮ್ಮದ್ ಇರಬೇಕಿತ್ತು ಎಂದು ನೀನೀಗ ಬಯಸುತ್ತಿರಬಹುದಲ್ಲವೇ?' ಎಂದು ಕೇಳಲಾದಾಗ, ಆ ತೀವ್ರವಾದ ನೋವಿನ ನಡುವೆಯೂ ಖಬ್ಬಾಬ್ (ರ) 'ಪ್ರವಾದಿವರ್ಯರಿಗೆ (ಸ) ಒಂದು ಮುಳ್ಳು ಚುಚ್ಚುವುದನ್ನು ತಪ್ಪಿಸಲು ನಾನು ನನ್ನ ಸಹಿತ ನನ್ನ ಇಡೀ ಕುಟುಂಬವನ್ನು ಬಲಿಕೊಡುವುದು ನನಗೆ ಹೆಚ್ಚು ಪ್ರಿಯ.' ಎಂದು ಉತ್ತರಿಸುತ್ತಾರೆ. ಇಂತಹ ಹತ್ತಾರು ಘಟನೆಗಳನ್ನು ನಾವಿಲ್ಲಿ ನೀಡಬಹುದು. ಆದರೆ, ಇಂತಹ ಘಟನೆಗಳಿಂದ ನಮಗೆ ವ್ಯಕ್ತವಾಗುವುದೇನು?. ಪ್ರವಾದಿ ಮುಹಮ್ಮದರ (ಸ) ನಿಕಟ ಅನುಯಾಯಿಗಳು ಕೇವಲ ತಮ್ಮ ನಂಬಿಕೆಯನ್ನಷ್ಟೇ ಮುಹಮ್ಮದರ ಸುಪರ್ದಿಗೆ ವಹಿಸಿದುದಲ್ಲ. ತಮ್ಮ ದೇಹ, ಮನಸ್ಸು ಆತ್ಮ ಎಲ್ಲವನ್ನೂ ಆ ಮಹಾನ್ ವ್ಯಕ್ತಿಗಾಗಿ ಧಾರೆಯೆರೆದರು. ಪ್ರವಾದಿ ಮುಹಮ್ಮದರು ಅತ್ಯಂತ ಸತ್ಯಸಂಧ, ಪ್ರಾಮಾಣಿಕ ವ್ಯಕ್ತಿತ್ವವುಳ್ಳವರಾಗಿದ್ದುದರಿಂದಲೇ, ಜನರ ಹಿತಕ್ಕಾಗಿ ಹಗುಲಿರುಳು ಅವರು ಪಡುತ್ತಿದ್ದ ಅಪಾರ ಪರಿಶ್ರಮವನ್ನು, ವಿಶೇಷವಾಗಿ ಅವರು ತಂದ ದೇವಸಂದೇಶದಲ್ಲಿ ಅವರ ಹೊಂದಿದ್ದ ನಿಸ್ವಾರ್ಥತೆಯನ್ನು ಬಹಳ ಹತ್ತಿರದಿಂದ ಕಂಡ ಸಲುವಾಗಿಯೇ ಅವರ ಆಪ್ತಬಳಗವು ತನ್ನೆಲ್ಲವನ್ನೂ ಆ ಮಹಾನ್ ವ್ಯಕ್ತಿತ್ವದ ಮುಂದೆ ಧಾರೆಯೆರೆಯಲು ಸಿದ್ಧವಾಯಿತು.

ವ್ಯಕ್ತಿಯೋರ್ವರಿಗಾಗಿ ತಮ್ಮೆಲ್ಲವನ್ನೂ ಧಾರೆಯೆರೆದ ಮಾತ್ರಕ್ಕೆ ಪ್ರವಾದಿವರ್ಯರ ಈ ಆಪ್ತಬಳಗವು ತೀರಾ ಕೆಳವರ್ಗಕ್ಕೆ ಸೇರಿದ ಅನಕ್ಷರಸ್ಥ ಅಥವಾ ಕುರುಡು ಮನಸ್ಥಿತಿ ಹೊಂದಿದ ಜನರಾಗಿದ್ದಿರಬಹುದು ಎಂದು ಊಹಿಸುವುದು ತೀರಾ ತಪ್ಪು. ಮುಹಮ್ಮದರ ಪ್ರವಾದಿತ್ವದ ಆರಂಭಿಕ ದಿನಗಳಲ್ಲೇ ಅವರು ತಂದ ದೇವಸಂದೇಶವನ್ನರಿತು ಅವರ ಹಿಂಬಾಲಕ–

ರಾದವರೆಲ್ಲರೂ ಮಕ್ಕಾದ ಬಹಳ ಪ್ರತಿಷ್ಠಿತವರ್ಗದ ಜನರಾಗಿದ್ದರು. ಅವರು ಅಧಿಕಾರ, ಸಂಪತ್ತು ಎಲ್ಲವನ್ನೂ ಹೊಂದಿದ್ದ ಸುಸಂಸ್ಕೃತ ಮನೆತನದ ಸುಶಿಕ್ಷಿತ ವ್ಯಕ್ತಿಗಳಾಗಿದ್ದರು. ಈ ಪೈಕಿ ಕೆಲವರು ಪ್ರವಾದಿವರ್ಯರ ವೈಯಕ್ತಿಕ ಜೀವನದ ಆಂತರಿಕ ಮತ್ತು ಬಾಹ್ಯವಿಷಯಗಳನ್ನು ಬಹಳಚೆನ್ನಾಗಿ ಬಲ್ಲ ಅವರ ಸಂಬಂಧಿಕರೂ ಇದ್ದರು. ಪ್ರವಾದಿ ಮುಹಮ್ಮದರ ಕಾಲಾನಂತರ ಇಸ್ಲಾಮ್ ಆಳ್ವಿಕೆಯ ಆರಂಭದ ನಾಲ್ಕು ಜನ ಖಲೀಫಾರು (ಇಸ್ಲಾಮ್ ಪ್ರಜಾಪ್ರಭುತ್ವದ ಮೊದಲ ನಾಲ್ಕು ಜನಪ್ರತಿನಿಧಿಗಳು) ಕೂಡ ಮುಹಮ್ಮದರ ಪ್ರವಾದಿತ್ವದ ಆರಂಭಿಕ ದಿನಗಳಲ್ಲಿ ಇಸ್ಲಾಮ್ ಸ್ವೀಕರಿಸಿದ ಉನ್ನತ ಮನೆತನಕ್ಕೆ ಸೇರಿದ್ದ ಸುಶಿಕ್ಷಿತ ವ್ಯಕ್ತಿಗಳಾಗಿದ್ದರು. ಎನ್ ಸೈಕ್ಲೋಪೀಡಿಯಾ ಆಫ್ ಬ್ರಿಟಾನಿಕಾ ಹೇಳುತ್ತದೆ, "ಪ್ರವಾದಿ ಮುಹಮ್ಮದ್ ಇತರ ಎಲ್ಲಾ ಪ್ರವಾದಿಗಳು ಮತ್ತು ಧಾರ್ಮಿಕ ವ್ಯಕ್ತಿಗಳಿಗಿಂತ ಅತ್ಯಂತ ಹೆಚ್ಚು ಯಶಸ್ಸನ್ನು ಪಡೆದ ವ್ಯಕ್ತಿಯಾಗಿರುವರು" ಎಂದು. ಆದರೆ ಇದು ಕಾಕಾತಾಳೀಯವಾಗಿ ದೊರೆತ ಅಥವಾ ಆಕಸ್ಮಿಕವಾಗಿ ದಕ್ಕಿದ ಯಶಸ್ಸಂತೂ ಖಂಡಿತಾ ಆಗಿರಲಿಲ್ಲ. ಪ್ರವಾದಿ ಮುಹಮ್ಮದರ (ಸ) ಸಮಕಾಲೀನರು ಅವರನ್ನು ಅತ್ಯಂತ ಉನ್ನತ ನೈತಿಕ ಮಟ್ಟ ಮತ್ತು ಚಾರಿತ್ರ್ಯ ಹೊಂದಿದ ಉದಾತ್ತ ವ್ಯಕ್ತಿತ್ವವುಳ್ಳರನ್ನಾಗಿ ಅವರನ್ನು ಕಂಡಿದ್ದರಿಂದಲೇ ಮುಹಮ್ಮದರಿಗೆ ಇಂತಹ ದೊಡ್ಡ ಯಶಸ್ಸೊಂದನ್ನು ಪಡೆಯಲು ಸಾಧ್ಯವಾಯಿತು. ಖಂಡಿತವಾಗಿಯೂ ಈ ಮಹಾ ಯಶಸ್ಸು ಪ್ರವಾದಿ ಮುಹಮ್ಮದರ (ಸ) ಅತ್ಯಂತ ಅದ್ಭುತ ಮತ್ತು ಅವರ ಪ್ರಭಾವಶಾಲಿ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಪ್ರವಾದಿ ಮುಹಮ್ಮದರ ಜೀವನದ ಎಲ್ಲಾ ಮಗ್ಗಲುಗಳನ್ನು ಓದುಗರ ಮುಂದಿರಿಸುವುದು ಅಷ್ಟು ಸುಲಭದ ಮಾತೇನಲ್ಲ. ಹಾಗಾಗಿ ಅವರ ಜೀವನದಲ್ಲಿ ನಾನು ಕಂಡ ಕೆಲವು ಪ್ರಮುಖ ಭಾಗಗಳನ್ನಷ್ಟೇ ನಾನಿಲ್ಲಿ ಓದುಗರ ಮುಂದಿರಿಸಲು ಬಯಸುತ್ತೇನೆ. ಅವರ ಜೀವನವನ್ನು ನಾವು ಓದಿದಾಗ, ಅವರು ನಿರ್ವಹಿಸಿದ ಮಹತ್ತರ ಜವಾಬ್ದಾರಿಗಳು ಸಿನಿಮೀಯ ಶೈಲಿಯ ಸುಂದರ ದೃಶ್ಯಗಳಂತೆ ಒಂದೊಂದಾಗಿ ನಮ್ಮ ಮುಂದೆ ತೆರೆದುಕೊಳ್ಳುತ್ತಾ ಹೋಗುತ್ತವೆ. ಮುಹಮ್ಮದರು; ಓರ್ವ ಪ್ರವಾದಿಯಾಗಿ, ಓರ್ವ ದಕ್ಷ ಸೇನಾಧಿಪತಿಯಾಗಿ, ಓರ್ವ ಮಾದರಿ ಆಡಳಿತಗಾರನಾಗಿ, ಓರ್ವ ಹೋರಾಟಗಾರನಾಗಿ, ಓರ್ವ ವ್ಯಾಪಾರಿಯಾಗಿ, ಓರ್ವ ಬೋಧಕನಾಗಿ, ಓರ್ವ ತತ್ವಜ್ಞಾನಿಯಾಗಿ, ಓರ್ವ ನುರಿತ ರಾಜಕಾರಣಿಯಾಗಿ, ಓರ್ವ

ಭಾಷಣಕಾರನಾಗಿ, ಓರ್ವ ಸುಧಾರಕನಾಗಿ, ಅನಾಥರ ರಕ್ಷಕನಾಗಿ, ಗುಲಾಮರ ಪಾಲಿನ ವಿಮೋಚನಕಾರನಾಗಿ, ನ್ಯಾಯಾಧೀಶನಾಗಿ ಮತ್ತು ಓರ್ವ ಸಮರ್ಥ ನಾಯಕನಾಗಿ ಇತಿಹಾಸದ ಪುಟಗಳಲ್ಲಿ ಮಿಂಚುತ್ತಾರೆ. ಅವರು ತಮ್ಮ ಜೀವನದಲ್ಲಿ ನಿರ್ವಹಿಸಿದ ಈ ಎಲ್ಲಾ ಪಾತ್ರಗಳಲ್ಲಿ 'ಅವರಿಗೆ ಅವರೇ ಸಾಟಿ' ಎಂಬಂತೆ ಓರ್ವ ಅಪ್ರತಿಮ ಹೀರೋ ಎಂಬ ನೆಲೆಯಲ್ಲಿ ನನಗವರು ಗೋಚರಿಸಿದ್ದಾರೆ.

**ಈ ಜಗತ್ತಿನಲ್ಲಿ ಅನಾಥ ಬದುಕು ಸಾಗಿಸುವುದು, ಸಂಕಷ್ಟದ ಪರಮಾವಧಿ ಎನ್ನಬಹುದು. ಅನಾಥನಾಗಿ ಜನಿಸುವುದರ ಮೂಲಕ ತೀವ್ರ ಸಂಕಷ್ಟದ ಸ್ಥಿತಿಯಲ್ಲಿ ಪ್ರವಾದಿ ಮುಹಮ್ಮದರ ಜೀವನದ ಆರಂಭವಾಗುತ್ತದೆ. ಆಳ್ವಿಕೆಯು ಭೌತಿಕ ಶಕ್ತಿಯ ಪರಾಕಷ್ಠೆಯಾಗಿದೆ. ಆಳ್ವಿಕೆಯ ಪರಾಕಷ್ಠೆಯಲ್ಲಿರುವಾಗಲೇ ಪ್ರವಾದಿ ಮುಹಮ್ಮದರ (ಸ) ಬದುಕು ಕೊನೆಗೊಳ್ಳುತ್ತದೆ.**

ಹುಟ್ಟಿದ ನೆಲ ಮಕ್ಕಾದಲ್ಲಿ ಅನಾಥ ಬಾಲ್ಯವನ್ನು ಸಾಗಿಸಿ, ಯೌವ್ವನದಲ್ಲಿ ಅಲ್ಲಿನ ಜನರಿಂದಲೇ ತೀವ್ರ ದಬ್ಬಾಳಿಕೆಗೆ ಒಳಗಾಗಿ ಅಲ್ಲಿಂದ ಮದೀನಾಕ್ಕೆ ವಲಸೆ ಹೋಗಬೇಕಾಗಿ ಬಂದ ಮುಹಮ್ಮದರು (ಸ) ಆ ಬಳಿಕ ಆಧ್ಯಾತ್ಮಿಕ ಹಾಗೂ ಭೌತಿಕವಾಗಿ ಆ ಇಡೀ ನಾಡಿನ ಅಪ್ರತಿಮ ನಾಯಕನಾಗಿ ಹೊರಹೊಮ್ಮಿದ್ದು, ಆ ನಾಡಿನ ಭವಿಷ್ಯವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದು ಅಲಕ್ಷಿಸಬಹುದಾದ ಸಾಮಾನ್ಯ ವಿಷಯವೇನಲ್ಲ. ಈ ಪ್ರಕ್ರಿಯೆಗಳ ನಡುವೆ ಅವರಿಗೆ ಎದುರಾದ ಸತ್ವ–ಪರೀಕ್ಷೆ, ಸಂಕಷ್ಟಗಳು, ಪರೀಕ್ಷೆಗಳು, ತೊಂದರೆಗಳು, ಅವರ ಜೀವನವಿನ್ನೇನು ಮುಗಿದೇ ಬಿಟ್ಟಿತು ಎನ್ನುವಷ್ಟರ ಮಟ್ಟಿಗೆ ಅವರ ಬದುಕನ್ನಾವರಿಸಿದ ಕಾರ್ಮೋಡ, ಆ ಬಳಿಕ ಊಹಿಸದೆಯೇ ಇರದ ದಿಕ್ಕಿನಿಂದ ಆಶಾಕಿರಣದಂತೆ ಕಂಡ ಹೊಂಬೆಳಕು, ಈ ನಡುವೆ ಅವರು ತಮ್ಮ ಬದುಕಿನಲ್ಲಿ ಕಂಡ ಏರಿಳಿತ, ಇವೆಲ್ಲವನ್ನೂ ಅವರು ಓರ್ವ ದಿಟ್ಟ ಯೋಧನಂತೆ ಅತ್ಯಂತ ಯಶಸ್ವಿಯಾಗಿ ಎದುರಿಸಿದ ಪರಿಯು ಬಹಳ ಅನನ್ಯ ಮತ್ತು ಎಲ್ಲಕಾಲಕ್ಕೂ ಮಾದರಿ ಎನಿಸುವಂತಹದ್ದು. ಮಾನವನ ಸಾಮಾಜಿಕ ಮತ್ತು ವೈಯಕ್ತಿಕ ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ, ಎಲ್ಲ ಮಗ್ಗಲುಗಳಲ್ಲೂ ಅನುಸರಿಸಲು ಯೋಗ್ಯವಾದ ತಮ್ಮ ಹೆಜ್ಜೆಗುರುತುಗಳನ್ನು ಪ್ರವಾದಿ ಮುಹಮ್ಮದರು ಮಾನವಕುಲಕ್ಕಾಗಿ ಬಿಟ್ಟುಹೋಗಿರುವರು ಎಂದರೆ ಅತಿಶಯೋಕ್ತಿಯಾಗಲಾರದು.

ಒಂದು ವೇಳೆ, ತೀವ್ರ ಅನಾಗರಿಕತೆಯಲ್ಲಿದ್ದ ಜನಾಂಗವನ್ನು ಸುಶಿಕ್ಷಿತ–ಸುಸಂಸ್ಕೃತ ಜನರನ್ನಾಗಿ ಮಾರ್ಪಡಿಸುವುದು ಮಹಾನ್ ಕಾರ್ಯವೆಂದಾದರೆ; ನಾಗರಿಕತೆ ಮತ್ತು ನೈತಿಕತೆಯ ಗಂಧಗಾಳಿಯಿಲ್ಲದ, ಅಜ್ಞಾನದ ತೀವ್ರ ಗಾಢಾಂಧಕಾರದಲ್ಲಿ ಬಿದ್ದಿದ್ದ ಜನಾಂಗವೊಂದನ್ನು ಶಿಸ್ತುಬದ್ಧ, ಸುಸಂಸ್ಕೃತ ಮತ್ತು ಸುಶಿಕ್ಷಿತ ಜನಾಂಗವನ್ನಾಗಿ ಮೇಲಕ್ಕೆತ್ತಿದ ಶ್ರೇಯಸ್ಸು ಪ್ರವಾದಿ ಮುಹಮ್ಮದರಿಗೆ ಸಲ್ಲುತ್ತದೆ. ಈ ನಿಟ್ಟಿನಲ್ಲಿ ಅವರಿಗೆ ಸರಿಸಾಟಿಯಾದ ಬೇರೊಬ್ಬ ಮಹಾನ್ ವ್ಯಕ್ತಿ ಇತಿಹಾಸದಲ್ಲಿ ನಮಗೆ ಕಾಣಸಿಗಲಾರರು. ಒಂದು ವೇಳೆ ಸಮಾಜದಲ್ಲಿನ ಅಶಾಂತಿ–ಕ್ರೌರ್ಯವನ್ನು ತೊಡೆದುಹಾಕಿ ಸಹೋದರತ್ವವನ್ನು ನೆಲೆಗೊಳಿಸುವುದು ಅತ್ಯುನ್ನತ ಕಾರ್ಯವೆಂದಾದರೆ, ಶತ–ಶತಮಾನಗಳ ತನಕ ಕೌಟಂಬಿಕ ಕಲಹಗಳಲ್ಲಿ ಮುಳುಗಿ, ಪರಸ್ಪರರ ರಕ್ತವನ್ನು ಹರಿಸಲು ಹಾತೊರೆಯುತ್ತಿದ್ದ, ಕಾಡುಮೃಗಗಳಂತೆ ಕ್ರೌರ್ಯತೆ ತುಂಬಿದ್ದ ಜನರ ನಡುವೆ ಸಹೋದರತ್ವ ಮತ್ತು ಪರಸ್ಪರರ ಕುರಿತು ಸದ್ಭಾವನೆ ಮತ್ತು ಸಾಮರಸ್ಯವನ್ನು ಮೂಡಿಸಿದ ಸಂಪೂರ್ಣ ಶ್ರೇಯಸ್ಸು ಪ್ರವಾದಿ ಮುಹಮ್ಮದರಿಗೆ ಸಲ್ಲುವುದು. ಒಂದು ವೇಳೆ ಮಹಾನ್ ವ್ಯಕ್ತಿಯ ಮಾನದಂಡವು ವ್ಯಕ್ತಿಯ ಚಾರಿತ್ರ್ಯ ಹಾಗೂ ಆತನ ನೈತಿಕಮಟ್ಟ ಎಂದಾದರೆ, ಪ್ರವಾದಿ ಮುಹಮ್ಮದರು ಹುಟ್ಟಿ ಬೆಳೆದ ನೆಲದಲ್ಲಿ, ತನ್ನ ಜೀವನದ ಅರ್ಧಶತಮಾನವನ್ನು ತೇಯ್ದು ಆ ಪರಿಸರದಲ್ಲಿ ಸ್ನೇಹಿತ–ಶತ್ರು ಎಂಬ ಬೇಧಭಾವವಿಲ್ಲದೆ ಎಲ್ಲರೂ ಅವರನ್ನು "ಅಲ್ ಅಮೀನ್" (ಬಲು ಪ್ರಾಮಾಣಿಕ) "ಸಾದಿಕ್" (ಅತ್ಯಂತ ಸತ್ಯಸಂಧ) ಎಂಬ ಬಿರುದುಗಳಿಂದ ಸತ್ಕರಿಸುತ್ತಿದ್ದರು. ಒಂದು ವೇಳೆ, ಇತರರ ಮೇಲೆ ವಿಜಯ ಸಾಧಿಸಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ ಚಕ್ರವರ್ತಿಗಳು ಇತಿಹಾಸದ ಮಹಾನ್ ವ್ಯಕ್ತಿಗಳೆಂದಾದರೆ, ಅನಾಥನಾಗಿ ಜನಿಸಿ ತೀರಾ ಸಂಕಷ್ಟದ ಬದುಕನ್ನು ಸವೆಸಿ, ಕೊನೆಗೆ ಸಂಪೂರ್ಣ ಅರಬ್ ದ್ವೀಪದ ಮೇಲೆ ಹಿಡಿತ ಸಾಧಿಸಿ ಆಗಿನ ಕಾಲದ ರೋಮ್ನ ಚಕ್ರವರ್ತಿ ಕೈಸರ್, ಇರಾನಿನ ದೊರೆ ಖುಸ್ರಾರಿಗೆ ಸರಿಸಾಟಿಯಾಗಿ ನಿಂತ ಮುಹಮ್ಮದರಿಗಿಂತ ಮಹಾನ್ ವ್ಯಕ್ತಿತ್ವ ಯಾರದಿರಬಹುದು?. ಒಂದು ವೇಳೆ, ಯಾವುದೇ ವ್ಯಕ್ತಿತ್ವದ ಅನುಯಾಯಿಗಳ ಸಂಖ್ಯೆಯು ಆ ವ್ಯಕ್ತಿತ್ವದ ಶ್ರೇಷ್ಠತೆಯನ್ನು ನಿರ್ಧರಿಸುವ ಮಾನದಂಡವಾದರೆ ಕಳೆದ ಹದಿನಾಲ್ಕು ಶತಮಾನಗಳಿಂದ ತನ್ನ ಅಸಂಖ್ಯಾತ ಅನುಯಾಯಿಗಳ ಹೃದಯದ ಸಾಮ್ರಾಟನಾಗಿರುವ ಪ್ರವಾದಿವರ್ಯರನ್ನು ಮೀರಿಸುವ ವ್ಯಕ್ತಿತ್ವ ಬೇರಾರದ್ದಿದೆ?.

## The Rarest Phenomenon on the Earth

Unlettered himself, he could yet speak with an eloquence and fervour which moved men to tears of ecstasy. Born an orphan and blessed with no worldly goods, he was loved by all. He had studied at no military academy; yet he could organise his forces against tremendous odds and gained victories through the moral forces which he marshelled. Gifted men with a genius for preaching are rare.Descartes included the perfect preacher among the rarest kind in the world.Hitler his mein kampf has expressed his similar view. He says: “A great thaeorist is seldom a great leader. An agitator is far more likely to posses these qualities.He will always be a better leader. For, Leadership means ability to move masses of men.The talent to produce ideas has nothing in common with capacity for leadership”. But, He says:”The union of the theorist, Organiser, a Leader in One man is the rarest phenomenon on this earth; therein consists greatness.” In the person of the prophet of Islam the world has seen this rearest phenomenon on the earth, walking in flesh and blood.

And more wonderful still is what the Reverened Bosworth Smith remarks: ”Head of the state as well as the Church, He was Caeser and pope in one; But, He was pope without the Pope’s claims, and Caeser without the legions of Caeser, without a standing army, without a bodyguard,without a palace,without a fixed revenue.If ever any man had the right to say that he ruled by a right devine, it was Muhammad, For he had all power without its instruments and without its supports. He cared not for the dressings of power.

The simplicity of his private life was in keeping with his public life.”

ಪ್ರವಾದಿ ಮುಹಮ್ಮದರು (ಸ) ಅಥೆನ್ಸ್, ರೋಮ್, ಭಾರತ ಅಥವಾ ಚೀನಾದಲ್ಲಿ ತತ್ವಶಾಸ್ತ್ರದ ಅಧ್ಯಯವನ್ನೇನೂ ಮಾಡಿರಲಿಲ್ಲ. ಆದರೆ ಮಾನವಕುಲಕ್ಕೆ ಅವರು ನೀಡಿದ ಕೊಡುಗೆ ಎಲ್ಲ ತತ್ವಶಾಸ್ತ್ರಗಳನ್ನು ಮೀರಿಸುವಂತಹದ್ದು. ಪ್ರವಾದಿವರ್ಯರು (ಸ) ಖುದ್ದು

ನಿರಕ್ಷರಿಯಾಗಿದ್ದರೂ ಅವರು ನೀಡುತ್ತಿದ್ದ ಮನ ಮುಟ್ಟುವ ಪ್ರವಚನ ಕೇಳುಗರನ್ನು ಮಂತ್ರಮುಗ್ಧಗೊಳಿಸಿ ಅವರನ್ನು ಅಳುವಂತೆ ಮಾಡುತ್ತಿತ್ತು. ಅನಾಥರಾಗಿ ಜನಿಸಿದ ಪ್ರವಾದಿವರ್ಯರ ಬಳಿ ಪ್ರಾಪಂಚಿಕ ಸಂಪತ್ತು–ಐಶ್ವರ್ಯಗಳಿಲ್ಲದಿದ್ದರೂ ಜನರು ಅವರನ್ನು ತಮ್ಮ ಜೀವಕ್ಕಿಂತ ಮಿಗಿಲಾಗಿ ಪ್ರೀತಿಸುತ್ತಿದ್ದರು. ಅವರು ಯಾವುದೇ ಮಿಲಿಟರಿ ಕಾಲೇಜಿನ ಪದವೀಧರನಾಗಿರದಿದ್ದರೂ, ಬಹಳ ಯಶಸ್ವಿಯಾಗಿ ಸೈನ್ಯವನ್ನು ಸಂಘಟಿಸಿ, ಯುದ್ಧರಂಗದಲ್ಲಿ ಎದುರಾದ ಎಲ್ಲ ಸವಾಲುಗಳನ್ನು ಮೆಟ್ಟಿನಿಂತು, ತಮ್ಮ ಚಾರಿತ್ರಿಕ ಮತ್ತು ನೈತಿಕ ಬಲದಿಂದಲೇ ಶತ್ರುಸೈನ್ಯದ ಮೇಲೆ ಅಮೋಘ ವಿಜಯ ಸಾಧಿಸಿದರು. ಪರರಿಗೆ ಒಳಿತಾಗಲೆಂದು ಹಗುಲಿರುಳು ಪ್ರಯಾಸ ಪಡುವಂತಹ ಇಂತಹ ನಿಸ್ವಾರ್ಥ ಸದ್ಗುಣ ಸಂಪನ್ನ ವ್ಯಕ್ತಿಗಳು ಬೆರಳೆಣಿಕೆಯಷ್ಟು ವಿರಳ. "ಜಗತ್ತಿನಲ್ಲಿ ಜನರಿಗೆ ಎಲ್ಲ ರಂಗಗಳಲ್ಲಿಯೂ ಮಾರ್ಗದರ್ಶನ ನೀಡಬಲ್ಲ ಪರಿಪೂರ್ಣ ಬೋಧಕರು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ" ಎಂದು ಇತಿಹಾಸ ತಜ್ಞರಾದ ಡೆಸ್ಕಾರ್ಟ್ಸ್ ಹೇಳುತ್ತಾರೆ. ಹಿಟ್ಲರ್ ತನ್ನ ಜೀವನ ಚರಿತ್ರೆಯಾದ 'Mein kempf' ನಲ್ಲಿ ಬರೆಯುತ್ತಾನೆ, "ಒಬ್ಬ ಅದ್ಭುತ ತತ್ವ–ಸಿದ್ಧಾಂತಗಳನ್ನು ಹೊಂದಿರುವ ಸೈದ್ಧಾಂತಿಕ ವ್ಯಕ್ತಿಯು ಮಹಾನ್ ನಾಯಕನಾಗಿ ಗುರುತಿಸಿಕೊಳ್ಳುವುದು ಬಹಳ ವಿರಳ. ಇದಕ್ಕೆ ತದ್ವಿರುದ್ಧವಾಗಿ ಒಬ್ಬ ಆಂದೋಲಕನು ನಾಯಕನಾಗುವ ಗುಣಲಕ್ಷಣಗಳನ್ನು ಹೊಂದಿರುವ ಸಾಧ್ಯತೆ ಬಹಳ ಹೆಚ್ಚು. ಏಕೆಂದರೆ ನಾಯಕನಾದವನು ಜನಸಮೂಹದೊಳಗೆ ಸದಾ ಚಲನ–ವಲನಗಳನ್ನು ಸೃಷ್ಟಿಸುತ್ತಿರಬೇಕು. ಆ ಮೂಲಕ ಸಮೂಹವನ್ನು ಸದಾ ಸಜ್ಜುಗೊಳಿಸುತ್ತಿರಬೇಕು. ಇದು ಕೇವಲ ಆಂದೋಲಕನಿಗಷ್ಟೇ ಸಾಧ್ಯ. ತತ್ವ–ಸಿದ್ಧಾಂತವನ್ನು ರೂಪಿಸುವ ಸಾಮರ್ಥ್ಯ ಮತ್ತು ಆಂದೋಲನವನ್ನು ಮುನ್ನಡೆಸುವ ತಾಕತ್ತು ಇವರೆಡು ತೀರಾ ಭಿನ್ನ ವಿಷಯಗಳು. ಆದರೆ, ಬಹಳ ಅಪರೂಪದ ವಿದ್ಯಮಾನ ಎನ್ನುವಂತೆ ಮಹಾನ್ ತತ್ವ–ಸಿದ್ಧಾಂತ ಹೊಂದಿದ್ದ ವ್ಯಕ್ತಿಯೋರ್ವರು ಒಬ್ಬ ಆಂದೋಲಕನಾಗಿಯೂ ಆ ಬಳಿಕ ಮಹಾನ್ ನಾಯಕನಾಗಿಯೂ ಅಮೋಘ ಯಶಸ್ಸು ಕಂಡಿರುವರು. ಅವರು ಇಸ್ಲಾಮಿನ ಪ್ರವಾದಿ ಮುಹಮ್ಮದರು. ಮುಹಮ್ಮದರು ತನ್ನ ತತ್ವ–ಸಿದ್ಧಾಂತದ ಪ್ರಚಾರದ ಜೊತೆ–ಜೊತೆಗೆ ಒಬ್ಬ ಸಂಘಟಕನಾಗಿಯೂ, ಒಬ್ಬ

ಆಂದೋಲನಕಾರನಾಗಿಯೂ ಮತ್ತು ಒಬ್ಬ ಮಹಾನ್ ನಾಯಕನಾಗಿಯೂ ಗುರುತಿಸಿಕೊಂಡಿದ್ದು ಭೂಮಿಯ ಮೇಲಿನ ಬಹಳ ಅಚ್ಚರಿಯ ಮತ್ತು ಅತ್ಯಂತ ಅಪರೂಪದ ವಿದ್ಯಮಾನವಾಗಿದೆ."

ಪ್ರೊಫೆಸರ್ ಬಾಸ್ ವರ್ಥ್ ಸ್ಮಿತ್ ರು ಪ್ರವಾದಿ ಮುಹಮ್ಮದರ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯವು ಇನ್ನಷ್ಟು ಗಮನಾರ್ಹವಾಗಿದೆ. "ಪ್ರವಾದಿ ಮುಹಮ್ಮದರು ಒಂದು ಮಹಾನ್ ಸಾಮ್ರಾಜ್ಯವನ್ನು ಮುನ್ನಡೆಸುವ ಅಧಿಪತಿಯಾಗಿದ್ದುದರ ಜೊತೆಗೆ ಓರ್ವ ಮಹಾನ್ ಧಾರ್ಮಿಕ ಗುರುವಾಗಿದ್ದರು. ಅವರು ಅತ್ಯುನ್ನತ ಧಾರ್ಮಿಕ ನಾಯಕನೂ ಹೌದು. ಇಸ್ಲಾಮೀ ಆಡಳಿತದ ಅನಭಿಷಿಕ್ತ ದೊರೆಯೂ ಹೌದು. ಅವರು ಅತ್ಯುನ್ನತ ಧಾರ್ಮಿಕ ವ್ಯಕ್ತಿತ್ವ ಹೊಂದಿದ್ದರೂ, ಈಗಿನ ಧಾರ್ಮಿಕ ನಾಯಕರಂತೆ ಯಾವುದೇ ವೈಭವೋಪೇತ ಸಂಸ್ಥಾನದ ಮಾಲೀಕರಾಗಿರಲಿಲ್ಲ. ಅವರು ಇಸ್ಲಾಮೀ ಸಾಮ್ರಾಜ್ಯದ ಅನಭಿಷಿಕ್ತ ದೊರೆಯಾಗಿದ್ದರೂ ಯಾವುದೇ ಐಶಾರಾಮೀ ಅರಮನೆಗಳಾಗಲೀ, ನಾಲ್ಕು ಕಡೆಗಳಿಂದಲೂ ಸುತ್ತುವರಿದ ಅಂಗರಕ್ಷಕರಾಗಲೀ, ದೊಡ್ಡ ಮಟ್ಟದ ಸೈನ್ಯವಾಗಲೀ, ಪ್ರಜೆಗಳಿಂದ ವಸೂಲು ಮಾಡಿದ ಖಜಾನೆಯ ಹೇರಳ ಸಂಪತ್ತಾಗಲೀ ಮುಂತಾದ ದೊರೆಗಳು, ಅರಸರು ಹೊಂದುವ ಯಾವುದೇ ಸುಖ–ಸವಲತ್ತುಗಳು ಅವರ ಬಳಿ ಇರಲಿಲ್ಲ. "ಈ ಭೂಮಿಯಲ್ಲಿ ಸಂಪೂರ್ಣ ದೇವ ನಿರ್ದೇಶನದಂತೆ ದೈವಿಕ ಆಡಳಿತವನ್ನು ನೀಡಿದ್ದೇನೆ" ಎಂದು ಹೇಳುವ ಹಕ್ಕನ್ನು ಯಾರಾದರೂ ಹೊಂದಿದ್ದರೆ ಅದು ಕೇವಲ ಪ್ರವಾದಿ ಮುಹಮ್ಮದರು (ಸ) ಮಾತ್ರವಾಗಿರುವರು. ಏಕೆಂದರೆ ಬೇರೆಲ್ಲಾ ಅರಸರು, ದೊರೆಗಳು ಚಕ್ರವರ್ತಿಗಳಂತೆ ಎಲ್ಲ ರೀತಿಯ ಸುಖ–ಸಂಪತ್ತನ್ನು ತನ್ನದಾಗಿಸಿಕೊಳ್ಳುವ ಸಂಪೂರ್ಣ ಅವಕಾಶವಿದ್ದರೂ ಪ್ರವಾದಿವರ್ಯರು (ಸ) ಸರಳತೆಯನ್ನೇ ಹೆಚ್ಚು ಇಷ್ಟಪಟ್ಟರು. ಇಡೀ ಅರಬ್ ದ್ವೀಪಗಳ ಮೇಲೆ ಸಂಪೂರ್ಣ ಹಿಡಿತ, ಅಧಿಕಾರವನ್ನು ಹೊಂದುವ ಮೊದಲು ಅವರ ಜೀವನಶೈಲಿ ಹೇಗಿತ್ತೋ, ಅರಬ್ನ ಅಧಿಪತ್ಯ ದೊರೆತ ಬಳಿಕವೂ ಅದಕ್ಕಿಂತ ಹೆಚ್ಚಿನ ಸರಳ ಬದುಕನ್ನು ಸಾಗಿಸಿ ತನ್ನ ಜೀವನದ ಧ್ಯೇಯ ದೇವಸಂಪ್ರೀತಿಯಾಗಿದೆ ಎಂಬುದನ್ನವರು ಸಾಬೀತುಗೊಳಿಸಿದರು. ಖಾಸಗಿ ಬದುಕಿಗೂ ಸಾಮಾಜಿಕ ಬದುಕಿಗೂ ಯಾವುದೇ ಅಂತರವಿರದ ಪಾರದರ್ಶಕ ಬದುಕು ಅವರದಾಗಿತ್ತು."

ಮಕ್ಕಾದ ವಿಜಯದ ಬಳಿಕ ಪ್ರವಾದಿ ಮುಹಮ್ಮದರಿಗೆ 10,00,000 ಚದರ ಮೈಲಿಗಳಷ್ಟು ವಿಶಾಲ ಸಾಮ್ರಾಜ್ಯದ ಅಧಿಪತ್ಯವು ದೊರೆತ ಬಳಿಕವೂ ತನ್ನ ಪಾದರಕ್ಷೆ ಕಿತ್ತು ಹೋದಾಗ, ಬಟ್ಟೆ ಹರಿದು ಹೋದಾಗ ಖುದ್ದು ತಾನೇ ಹೊಲಿದು ಸರಿಪಡಿಸಿಕೊಳ್ಳುತ್ತಿದ್ದರು. ಆಡಿನ ಹಾಲನ್ನು ಕರೆಯುವುದು, ಕಸ ಗುಡಿಸುವುದು ಮತ್ತು ಮನೆಗೆಲಸಗಳಲ್ಲಿ ತಮ್ಮ ಮನೆಯವರಿಗೆ ಸಹಾಯ ಮಾಡುವುದು ಅವರ ದಿನಚರಿಗಳಲ್ಲಿ ಒಂದಾಗಿತ್ತು. ಪ್ರವಾದಿವರ್ಯರ ಜೀವನದ ಕೊನೆಯ ದಿನಗಳಲ್ಲಿ ಅವರು ನೆಲೆಸಿದ್ದ ಮದೀನಾ ಪಟ್ಟದ ಸುತ್ತಮುತ್ತಲಿನ ಜನರೆಲ್ಲರೂ ಶ್ರೀಮಂತರಾಗತೊಡಗಿದ್ದರು. ಅಲ್ಲಿನ ಜನರ ಸಂಕಷ್ಟದ ದಿನಗಳು ದೂರವಾಗಿ ಎಲ್ಲಿ ನೋಡಿದರೂ ಆ ನಾಡು ಸಂಪದ್ಭರಿತವಾಗಿ ಕಾಣಿಸತೊಡಗಿತ್ತು. ಈ ಸಂತೋಷದ ದಿನಗಳಲ್ಲಿಯೂ ಇಡೀ ಅರಬ್ ದ್ವೀಪದ ಅಧಿಪತ್ಯವನ್ನು ಹೊಂದಿದ್ದ ಪ್ರವಾದಿ ಮುಹಮ್ಮದರ (ಸ) ಮನೆಯ ಒಲೆಯು ಉರಿಯದೆ ವಾರಗಳೇ ಕಳೆದು ಹೋಗುತ್ತಿದ್ದವು. ಅಂತಹ ಸಂದರ್ಭಗಳಲ್ಲಿ ಮುಹಮ್ಮದರು (ಸ) ಕೇವಲ ಖರ್ಜೂರ ಮತ್ತು ನೀರಿನಿಂದ ತಮ್ಮ ಹಸಿವೆಯನ್ನು ನೀಗಿಸಿಕೊಳ್ಳುತ್ತಿದ್ದರು. ಸಂಜೆಯ ಹೊತ್ತು ಸೇವಿಸಲು ಏನೂ ಸಿಗದ ಕಾರಣ ಪ್ರವಾದಿ ಮುಹಮ್ಮದ್ (ಸ) ಮತ್ತವರ ಕುಟುಂಬ ಹಾಗೆಯೇ ನಿದ್ದೆಗೆ ಜಾರಿದ ರಾತ್ರಿಗಳು ಅದೆಷ್ಟೋ!. ಹಗಲು–ರಾತ್ರಿ ಬಿಡುವಿಲ್ಲದೆ ಜನರ ಒಳಿತಿಗಾಗಿ ಶ್ರಮಿಸಿದ ಈ ಜೀವ, ಸಂಕಷ್ಟದ ದಿನಗಳು ದೂರಾಗಿ ಒಳ್ಳೆಯ ದಿನಗಳು ಬಂದ ಬಳಿಕ ಒಂದು ದಿನವೂ ಮೃದು ಹಾಸಿಗೆಯಲ್ಲಿ ಮಲಗಲಿಲ್ಲ. ಅವರು ತನ್ನ ಕೊನೆಯ ದಿನಗಳ ತನಕವೂ ಮಲಗುತ್ತಿದ್ದುದು ಖರ್ಜೂರದ ಒಣ ಎಲೆಯಿಂದ ಮಾಡಿದ ಚಾಪೆಯ ಮೇಲೆಯೇ. ರಾತ್ರಿಯ ನಿಶಬ್ದ–ನೀರವತೆಯ ಹೊತ್ತು ಏಕಾಗ್ರಚಿತ್ತನಾಗಿ ತನ್ನ ಸೃಷ್ಟಿಕರ್ತನನ್ನು ಕರೆದು ಪ್ರಾರ್ಥಿಸುತ್ತಿದ್ದರು. 'ಜನರಿಗೆ ಒಳಿತನ್ನು ತಲುಪಿಸುವ ತನ್ನ ಸದುದ್ದೇಶದಲ್ಲಿ ತನ್ನನ್ನು ಸಫಲನನ್ನಾಗಿಸು ಪ್ರಭುವೇ' ಎಂದು ಅವರು ದೇವನ ಬಳಿ ರೋದಿಸುತ್ತಾ ಬೇಡಿಕೊಳ್ಳುತ್ತಿದ್ದರು. ಹದೀಸ್ ನ ವರದಿಗಳ ಪ್ರಕಾರ ಮುಹಮ್ಮದರು ತನ್ನ ಒಡೆಯನಲ್ಲಿ ಮೊರೆಯಿಡುವಾಗ, ಪಾತ್ರೆಯಲ್ಲಿ ಕುದಿಯುವ ನೀರಿನಂತಹ ಧ್ವನಿ ಅವರ ಗಂಟಲಿನಿಂದ ಹೊರಹೊಮ್ಮುತ್ತಿತ್ತು (ಪ್ರಾರ್ಥನೆಯಲ್ಲಿ ರೋದಿಸುವ ಕಾರಣದಿಂದಾಗಿ). ಮುಹಮ್ಮದರು ಮರಣ ಮರಣ ಹೊಂದಿದಾಗ ಅವರು ಬಿಟ್ಟುಹೋದ

ಆಸ್ತಿಯೆಂದರೆ ಕೆಲವೇ ಕೆಲವು ಬೆರಳೆಣಿಕೆಯ ನಾಣ್ಯಗಳು. ಅವುಗಳ ಪೈಕಿ ಸ್ವಲ್ಪ ಮುಹಮ್ಮದರು ಮಾಡಿದ್ದ ಕೈ–ಸಾಲವನ್ನು ತೀರಿಸಲಾಯಿತು. ಉಳಿದುದನ್ನು ಅವರ ಮನೆಗೆ ಬೇಡಲು ಬರುತ್ತಿದ್ದ ಬಡವ್ಯಕ್ತಿಗೆ ನೀಡಲಾಯಿತು.

ಪ್ರವಾದಿವರ್ಯರು ಮರಣ ಹೊಂದಿದಾಗ ಧರಿಸಿದ್ದ ಅವರ ಜುಬ್ಬಾ ಬಹಳಷ್ಟು ತೇಪೆಗಳಿಂದ ಕೂಡಿತ್ತು. ಇಡೀ ಜಗತ್ತಿಗೆ ಬೆಳಕು ನೀಡಿಹೋದ ಆ ಮಹಾನ್ ಪುರುಷ ತನ್ನ ಮನೆಯಲ್ಲಿ ಕೊನೆಯುಸಿರೆಳೆಯುವಾಗ ಅವರ ಮನೆಯಲ್ಲಿ ದೀಪ ಬೆಳಗಲು ಎಣ್ಣೆ ಇರಲಿಲ್ಲ. ದುಃಸ್ಥಿತಿ ಕಳೆದು, ಸುಸ್ಥಿತಿಯು ಒದಗಿಬಂದಾಗಲೂ ಪ್ರವಾದಿ ಮುಹಮ್ಮದರ (ಸ) ಬದುಕಿನ ಶೈಲಿ. ಸರಳತೆ ಬದಲಾಗಲಿಲ್ಲ. ಇಡೀ ಅರಬ್ ದ್ವೀಪದ ಅಧೀನತೆಯನ್ನು ಹೊಂದಿದ್ದರೂ ಆಡಂಬರತೆ ಅವರ ಬಳಿ ಸುಳಿಯಲಿಲ್ಲ. ಸುಖ–ದುಃಖ, ಸೋಲು–ಗೆಲುವು, ಸುಸ್ಥಿತಿ–ದುಸ್ಥಿತಿ, ಪ್ರತೀಕೂಲತೆ–ಅನಾನುಕೂಲತೆ ಎಲ್ಲ ಸ್ಥಿತಿಗಳಲ್ಲಿಯೂ ಪ್ರವಾದಿ ಮುಹಮ್ಮದರು ಒಂದೇ ತೆರನಾಗಿದ್ದರು. ಹಮ್ಮುಬಿಮ್ಮಿಲ್ಲದ, ಸರಳತೆಯ ಸಾಕಾರಮೂರ್ತಿ ಅವರಾಗಿದ್ದರು. ಯಾವ ರೀತಿ ದೇವನ ಕಾನೂನುಗಳು, ದೇವಾದೇಶಗಳು ಬದಲಾಗುವುದಿಲ್ಲವೋ ಅದೇ ರೀತಿ ಮಾನವರ ಒಳಿತಿಗಾಗಿ ದೇವನು ಕಳಿಸಿದ ಅವನ ದೂತರೂ ಬದಲಾಗುವಂತಹ ವ್ಯಕ್ತಿತ್ವದವರಲ್ಲ.

"ಪ್ರಾಮಾಣಿಕ ವ್ಯಕ್ತಿಯು ದೇವನ ಅತ್ಯುತ್ತಮ ಸೃಷ್ಟಿಯಾಗಿರುವನು" ಎಂಬುದು ಜನಜನಿತ. ಪ್ರವಾದಿ ಮುಹಮ್ಮದರು (ಸ) ಪ್ರಾಮಾಣಿಕತೆಗಿಂತಲೂ ಮಿಗಿಲಾದ ವ್ಯಕ್ತಿತ್ವ ಹೊಂದಿದವರಾಗಿದ್ದರು. ಅವರ ಹೃದಯದಲ್ಲಿ ಸದಾ ಮಾನವೀಯತೆ, ಸಹಾನೂಭೂತಿ, ಕರುಣೆ, ಪರೋಪಕಾರಗಳ ರಾಗ ಮಿಡಿಯುತ್ತಿತ್ತು. ಮಾನವ ಸೇವೆಯೇ ಅವರ ಜೀವನದ ಅತ್ಯುನ್ನತ ಧ್ಯೇಯವಾಗಿತ್ತು. ಜನರ ನೈತಿಕ ಮತ್ತು ಶೈಕ್ಷಣಿಕ ಮಟ್ಟ ಮತ್ತು ಅವರ ಔನತ್ಯಕ್ಕಾಗಿ ಪ್ರವಾದಿ ಮುಹಮ್ಮದರು (ಸ) ಹಗುಲಿರುಳೂ ಶ್ರಮಿಸುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ಮನುಷ್ಯನನ್ನು ನಿಜವಾದ ಅರ್ಥದಲ್ಲಿ ಮನುಷ್ಯನನ್ನಾಗಿ ಮಾಡುವುದೇ ಅವರ ಪರಮ ಗುರಿಯಾಗಿತ್ತು. ಅದಕ್ಕಾಗಿ ಅವರು ಹಗುಲಿರುಳೂ ಶ್ರಮಿಸುತ್ತಿದ್ದರು. ಅವರ ಚಿಂತನೆ, ಮಾತು–ಕೃತಿ ಎಲ್ಲದರಲ್ಲಿಯೂ ಅವರ ಈ ಸದುದ್ದೇಶವು ಸ್ಪಷ್ಟವಿತ್ತು. ಯಾವುದೇ ತೋರಿಕೆ–ಆಡಂಬರವಿಲ್ಲದ, ಸ್ವಾನುರಾಗವಿಲ್ಲದ ನಿಸ್ವಾರ್ಥ ವ್ಯಕ್ತಿಯಾಗಿದ್ದರು ಪ್ರವಾದಿವರ್ಯರು (ಸ).

ಅವರು ತಮಗಾಗಿ ಆಯ್ದುಕೊಂಡ "ದೇವನ ಸೇವಕ" ಮತ್ತು "ದೇವದೂತ" (ಸಂದೇಶವಾಹಕ) ಈ ಎರಡು ಬಿರುದುಗಳು ಕೂಡ ಇದನ್ನೇ ಸೂಚಿಸುತ್ತವೆ. ಮೊಟ್ಟಮೊದಲು ತಾನು "ದೇವನ ಸೇವಕ" ಆ ಬಳಿಕ "ಅವನ ಸಂದೇಶವಾಹಕ" ಎಂದು ಮುಹಮ್ಮದರು ಹೇಳಿದ್ದು ಅವರ ವಿನಮ್ರತೆಯನ್ನು ಪ್ರದರ್ಶಿಸುತ್ತದೆ. ದೇವನು ಜಗತ್ತಿನ ಇತರ ಭೂಭಾಗಕ್ಕೆ ಕಳುಹಿಸಲ್ಪಟ್ಟ ಪ್ರವಾದಿಗಳಂತೆಯೇ (ಈ ಪೈಕಿ ಕೆಲವು ಪ್ರವಾದಿಗಳ ಕುರಿತು ನಾವು ತಿಳಿದಿರುವೆವು ಮತ್ತು ಹಲವರ ಕುರಿತು ನಮಗೆ ಹೆಚ್ಚೇನೂ ತಿಳಿದಿಲ್ಲ.) ಮುಹಮ್ಮದರು ಓರ್ವ ಗೌರವಾನ್ವಿತ ಪ್ರವಾದಿಯಾಗಿದ್ದರು. ಈ ಮೇಲಿನ ವಾಸ್ತವವನ್ನು ಒಪ್ಪದವನು ಮುಸ್ಲಿಮನಾಗಲಾರ ಎಂದು ಇಸ್ಲಾಮ್ ಹೇಳುತ್ತದೆ. ಇದು ಮುಸ್ಲಿಮರ ನಂಬಿಕೆಯ ಅವಿಭಾಜ್ಯ ಅಂಗ. ಆಂಗ್ಲ ಲೇಖಕರೊಬ್ಬರು ಈ ಕುರಿತು ಬರೆಯುತ್ತಾ ಹೇಳುತ್ತಾರೆ, "ಪ್ರವಾದಿ ಮುಹಮ್ಮದರ (ಸ) ಕಾಲದ ಜನರ ಸ್ಥಿತಿ–ಗತಿಗಳು, ಅವರ ಅನುಯಾಯಿಗಳು ಅವರ ಮೇಲೆ ಇಟ್ಟಿದ್ದ ಬಲವಾದ ನಂಬಿಕೆಯ ಹೊರತಾಗಿಯೂ ಪ್ರವಾದಿ ಮುಹಮ್ಮದರು ಎಂದಿಗೂ ತಾನೊಬ್ಬ 'ಪವಾಡಪುರುಷ' ಎಂದು ಹೇಳಿಕೊಂಡಿಲ್ಲ ಎಂಬುದು ಸೋಜಿಗದ ವಿಷಯ." (ಅರ್ಥಾತ್ ಪ್ರವಾದಿ ಮುಹಮ್ಮದರು ತನ್ನನ್ನು ತಾನು ಹಾಗೆ ಕರೆದುಕೊಳ್ಳದಿರುವುದು ಅವರ ಪ್ರಾಮಾಣಿಕತೆಯನ್ನು ಸೂಚಿಸುತ್ತದೆ.) ಮುಹಮ್ಮದರ ಮುಖಾಂತರ ಪವಾಡಗಳು ಘಟಿಸಿವೆಯಾದರೂ ಅವರು ಅದನ್ನು "ದೇವನ ಪರೋಕ್ಷ ಸಹಾಯ" ವೆಂದು ಕರೆದರೆ ವಿನಹ ತನ್ನ ಸ್ವ–ಪ್ರಚಾರಕ್ಕಾಗಿ ಎಂದೂ ಆ ಘಟನೆಗಳನ್ನವರು ದುರುಪಯೋಗಪಡಿಸಿಕೊಳ್ಳಲಿಲ್ಲ. ಅವರು ತನ್ನನ್ನು ತಾನು ಇತರರಂತೆ ಓರ್ವ ಸಾಮಾನ್ಯ ವ್ಯಕ್ತಿಯಾಗಿ ಪರಿಗಣಿಸಿ. ನನ್ನ ಸ್ಥಾನ–ಮಾನಕ್ಕೆ ಮೀರಿ ನನ್ನನ್ನು ಮೇಲೇರಿಸದಿರಿ ಎಂದು ತನ್ನ ಅನುಯಾಯಿಗಳಿಗೆ ಸದಾ ಎಚ್ಚರಿಸುತ್ತಿದ್ದರು. ಎಲ್ಲಿ ನೋಡಿದರೂ ಕಣ್ಣುಮುಚ್ಚಿಕೊಂಡು ಜಾದೂ–ಪವಾಡಗಳನ್ನು ನಂಬುವ, ಪವಾಡಗಳನ್ನು ತೋರಿಸಬಲ್ಲ ವ್ಯಕ್ತಿಗಳನ್ನು 'ದೇವನ ಸ್ವರೂಪ' ಎಂದು ಆರಾಧಿಸುತ್ತಿದ್ದ ಜನರಿದ್ದ ಆ ಕಾಲದಲ್ಲಿಯೂ ಅವರು, 'ಈ ಭೂಮಿ–ಆಕಾಶಗಳ ಯಾವುದೇ ವಸ್ತುವೂ ನನ್ನ ಅಧೀನದಲ್ಲಿ ಇಲ್ಲ. ನನ್ನಲ್ಲಿ ನಾಳೆಯ ಕುರಿತ ಪರೋಕ್ಷ ಜ್ಞಾನವೂ ಇಲ್ಲ. ನಾನು ಕೇವಲ ನನ್ನ ಮತ್ತು ನಿಮ್ಮೆಲ್ಲರ ಏಕೈಕ ಸೃಷ್ಟಿಕರ್ತನೂ, ಪರಿಪಾಲಕನೂ ಪ್ರಭುವೂ ಆದ ಅಲ್ಲಾಹನಿಂದ ಕಳುಹಿಸಲ್ಪಟ್ಟ ಅವನ ದಾಸ ಮತ್ತು ಅವನ

ಸಂದೇಶವಾಹಕನಾಗಿರುವೆನು ಅಷ್ಟೆ' ಎನ್ನುತ್ತಿದ್ದರು. ಅವರು ತನ್ನ ಅನುಯಾಯಿಗಳಿಗೆ ನೈಸರ್ಗಿಕ ಆಗು–ಹೋಗುಗಳ ಕುರಿತು ಚಿಂತಿಸಲು, ಆ ಮೂಲಕ ಸೃಷ್ಟಿಕರ್ತನ ಮಹಾನತೆಯನ್ನು ಅರಿಯಲು ಕರೆಕೊಟ್ಟರು. ಕುರ್ ಆನ್ ಹೇಳುತ್ತದೆ: " **ಈ ಭೂಮಿ–ಆಕಾಶಗಳನ್ನೂ ಅವುಗಳ ನಡುವೆ ಇರುವ ವಸ್ತುಗಳನ್ನೂ ನಾವೇನೂ ಲೀಲೆಗಾಗಿ ಉಂಟು ಮಾಡಿದುದಲ್ಲ. ನಾವು ಅವುಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿದ್ದೇವೆ. ಆದರೆ ಈ ಜನರ ಪೈಕಿ ಹೆಚ್ಚಿನವರಿಗೆ ಅರಿವೇ ಇಲ್ಲ." (ಅದ್ದುಖಾನ್ 38–39)**

ಈ ಜಗತ್ತು ಮತ್ತು ಇಲ್ಲಿರುವ ವಸ್ತುಗಳು ಮೋಜಿಗಾಗಿಯೋ ಅಥವಾ ಉದ್ದೇಶರಹಿತವಾಗಿಯೋ ಸೃಷ್ಟಿಸಲ್ಪಟ್ಟುದುದಲ್ಲ. ಈ ಜಗತ್ತನ್ನು ಅದರ ಸೃಷ್ಟಿಕರ್ತನು ಉದ್ದೇಶಪೂರ್ವಕವಾಗಿಯೇ ಸೃಷ್ಟಿಸಿರುವನು. ಕುರ್–ಆನ್ ನಲ್ಲಿ "ಈ ಜಗತ್ತಿನ ಕುರಿತು ಅವಲೋಕನ ಮಾಡಿ" ಎಂದು ಹೇಳುವ ಸೂಕ್ತಗಳ ಸಂಖ್ಯೆ ನಮಾಝ್, ಉಪವಾಸ, ಝಕಾತ್ (ಖಡ್ಡಾಯದಾನ), ಹಜ್ಜ್ ಗಳ ಕುರಿತು ಆದೇಶ ನೀಡುವ ಸೂಕ್ತಗಳ ಸಂಖ್ಯೆಗಳಿಗಿಂತ ಅದೆಷ್ಟೋ ಹೆಚ್ಚಿದೆ ಎಂಬುದು ಗಮನಾರ್ಹ. ಕುರ್ ಆನ್ ನ ಆದೇಶದನುಸಾರ ಮುಸ್ಲಿಮರು ಆಳವಾದ ನೈಸರ್ಗಿಕ ಅಧ್ಯಯನಕ್ಕಿಳಿದರು. ಇದರ ಫಲಿತಾಂಶವೆಂಬಂತೆ ಆಗಿನ ಕಾಲದ ಅಭಿವೃದ್ಧಿಯ ಶಿಖರದಲ್ಲಿದ್ದ ಗ್ರೀಸ್ ಜನರಲ್ಲಿಯೂ ಇಲ್ಲದ ವೈಜ್ಞಾನಿಕ ಹಾಗೂ ಪ್ರಯೋಗಶಾಲಿ ಮನೋಭಾವ ಮುಸ್ಲಿಮರಲ್ಲಿ ಬೆಳೆಯತೊಡಗಿತು. ಪ್ರಖ್ಯಾತ ಮುಸ್ಲಿಮ್ ಸಸ್ಯಶಾಸ್ತ್ರಜ್ಞರಾದ ಇಬ್ನೆ ಬೈತಾರ್ ಸಸ್ಯಶಾಸ್ತ್ರದ ಕುರಿತು ಎಂತಹ ಅದ್ಭುತ ಗ್ರಂಥವನ್ನು ರಚಿಸಿದರೆಂದರೆ, ಇನ್ನೋರ್ವ ಸಸ್ಯಶಾಸ್ತ್ರಜ್ಞ ಫೆಡ್ರಿಚ್ ಮೇಯರ್ ತನ್ನ ಪುಸ್ತಕ "Geschichte Der Botanik" ನಲ್ಲಿ ಬೈತಾರ್ ರ ಗ್ರಂಥವನ್ನು "ಕಠಿಣ ಪರಿಶ್ರಮದ ಶಿಖರ" ಎಂದು ಶ್ಲಾಘಿಸಿರುವರು. ಕುರ್ ಆನ್ ನ ಈ ಕರೆಯಿಂದಾಗಿಯೇ 'ಅಲ್ ಬೈರೂನಿ' ಮುಸ್ಲಿಂ ವಿಜ್ಞಾನಿ 40 ವರ್ಷಗಳಷ್ಟು ದೀರ್ಘಕಾಲ ವಿವಿಧ ಭೂಭಾಗಗಳನ್ನು ಸಂಚರಿಸಿ ಖನಿಜಗಳ ಮಾದರಿಯನ್ನು ಸಂಗ್ರಹಿಸಿದರು. ಆದುದರಿಂದಲೇ ಮುಸ್ಲಿಂ ಖಗೋಳ ಶಾಸ್ತ್ರಜ್ಞರು ಹನ್ನೆರಡು ವರ್ಷಗಳಷ್ಟು ದೀರ್ಘಕಾಲ ಆಕಾಶಕಾಯಗಳ ಚಲನವಲನಗಳ ಕುರಿತು ಆಳವಾದ ಅಧ್ಯಯನ ಕೈಗೊಂಡರು. ಇದಕ್ಕೆ ತದ್ವಿರುದ್ಧವಾಗಿ ಗ್ರೀಕ್ ತಜ್ಞ ಅರಿಸ್ಟಾಟಲ್ ಯಾವುದೇ ಪ್ರಾಯೋಗಿಕ ಅನುಭವವನ್ನು ಹೊಂದದೆ

ವೈದ್ಯಕೀಯ ಲೋಕದಲ್ಲಿ ತನ್ನ ಮನಸೋಇಚ್ಛೆ ಬರೆದಿರುವನು. ಉದಾ: "ಮನುಷ್ಯನು ಪ್ರಾಣಿಗಳಿಗಿಂತ ಹೆಚ್ಚು ಹಲ್ಲುಗಳನ್ನು ಹೊಂದಿದ್ದಾನೆ" ಎಂದು ಬರೆಯುವ ಮೊದಲು ಅದನ್ನಾತ ದೃಢೀಕರಿಸುವುದು ಅಗತ್ಯವೆಂದು ಭಾವಿಸಲಿಲ್ಲ. ಈ ವಿಷಯದ ದೃಢೀಕರಣಕ್ಕೆ ಬಹಳ ಕಷ್ಟ ಪಡುವ ಅಗತ್ಯವೂ ಇರಲಿಲ್ಲ. ಯಾವುದೇ ಪ್ರಮಾಣಿಕೃತ, ಪ್ರಾಯೋಗಿಕ ಅನುಭವವನ್ನು ಮಾಡಿ ನೋಡದೆ, ಕೇವಲ ಊಹೆಯ ಆಧಾರದಲ್ಲಿ ಇದನ್ನಾತ ಬರೆದಿರುವುದು ಬಹಳ ದೊಡ್ಡ ಪ್ರಮಾದ (ಕುದುರೆ, ಬಸವನ ಹುಳು ಇವುಗಳೆಲ್ಲವೂ ಮನುಷ್ಯನಿಗಿಂತ ಹೆಚ್ಚು ದಂತಗಳನ್ನು ಹೊಂದಿವೆ). ಪುರಾತನ ವಿಜ್ಞಾನದ ಶ್ರೇಷ್ಠ ಶಿಕ್ಷಕ ಎಂದು ಪರಿಗಣಿಸಲ್ಪಟ್ಟಿರುವ ಗ್ಯಾಲೆನ್ 'ಕೆಳಗಿನ ದವಡೆಯು ಎರಡು ಎಲುಬುಗಳನ್ನು ಹೊಂದಿದೆ' ಎಂದು ಬರೆದಿದ್ದಾನೆ. ಹಲವು ಶತಮಾನಗಳ ತನಕ ಇದನ್ನೇ ಪರಮಸತ್ಯವೆಂದು ಬಹಳಷ್ಟು ಮಂದಿ ನಂಬಿದ್ದರು. ಆದರೆ ಅಬ್ದುಲ್ ಲತೀಫ್ ಎನ್ನುವ ವಿಜ್ಞಾನಿ ಮಾನವ ಅಸ್ಥಿಪಂಜರವನ್ನು ಅಧ್ಯಯನ ಮಾಡಿದ ಬಳಿಕವಷ್ಟೆ ಗ್ಯಾಲೆನ್ ಹೇಳಿಕೆ ಸರಿಯಲ್ಲ ಎಂಬುದು ಸಾಬೀತಾಯಿತು. ಇಂತಹ ಅನೇಕ ಘಟನೆಗಳನ್ನು ವಿವರಿಸುತ್ತಾ ರಾಬಲ್ಟ್ ಬ್ರೆಫಾಲ್ಟ್ ತನ್ನ ಕೃತಿ 'The Making History' ಯಲ್ಲಿ ಬರೆಯುತ್ತಾರೆ, "ನಾವು ಯುರೋಪಿಯನ್ನರು ಮತ್ತು ನಮ್ಮ ವಿಜ್ಞಾನಿಗಳು ಅರಬ್ ಮುಸ್ಲಿಮರಿಗೆ ಸದಾ ಋಣಿಯಾಗಿರಬೇಕು. ಅರಬ್ಬರು ಮಾಡಿದ ವೈಜ್ಞಾನಿಕ ಆವಿಷ್ಕಾರ ಮತ್ತು ಅವರ ಕ್ರಾಂತಿಕಾರಿ ಅನ್ವೇಷಣೆಗಷ್ಟೇ ಅಲ್ಲ. ಅವರ (ಮುಸ್ಲಿಮ್ ಅರಬ್ಬರ) ಸಂಸ್ಕೃತಿಯಿಂದಲೂ, ಅವರ ನಾಗರಿಕತೆಯಿಂದಲೂ ನಾವು ಬೇಕಾದಷ್ಟು ಪಡೆದಿದ್ದೇವೆ." ಇನ್ನೂ ಮುಂದುವರಿಯುತ್ತಾ ಈ ಲೇಖಕ ಬರೆಯುತ್ತಾರೆ: "ಗ್ರೀಕರು ತೀರಾ ಸಾಮಾನ್ಯ ಸಿದ್ಧಾಂತ ಮತ್ತು ದೃಷ್ಟಿಕೋನಗಳಡಿಯಲ್ಲಿ ವ್ಯವಸ್ಥೆಗಳ ಅಡಿಪಾಯವನ್ನೇನೋ ಹಾಕಿದರು. ಆದರೆ, ಅನ್ವೇಷಣೆಗೆ ಬೇಕಾದ ಅದಮ್ಯ ಸಹನೆ, ಆವಿಷ್ಕಾರಕ್ಕೆ ಬೇಕಾದ ಸಕಾರಾತ್ಮಕ ಮಾಹಿತಿಯ ಸಂಗ್ರಹಣೆ, ವೈಜ್ಞಾನಿಕ ವಿಧಾನ ಮತ್ತು ದೀರ್ಘ ಪ್ರಾಯೋಗಿಕ ಅಧ್ಯಯನಗಳು ಇವೆಲ್ಲವೂ ಗ್ರೀಕರ ಮನೋಧರ್ಮಕ್ಕೆ ತೀರಾ ಅಪರಿಚಿತವಾಗಿತ್ತು. ಇಂದು ನಾವು ಯಾವುದನ್ನು 'ಯುರೋಪ್ ವಿಜ್ಞಾನ' ಎಂದು ಕರೆಯುತ್ತಿರುವೆವೋ ಅದು ಅಸ್ತಿತ್ವಕ್ಕೆ ಬಂದಿದ್ದು ಅನ್ವೇಷಣಾ ಮನೋಭಾವ, ಪ್ರಾಯೋಗಿಕ ಅಧ್ಯಯನ, ಆವಿಷ್ಕಾರಿಕ ಅನುಭವ, ತೂಕ–ಅಳತೆಯ ಪ್ರಮಾಣ ಮತ್ತು (ಅಲ್ ಜೀಬ್ರಾದಂತಹ) ಗಣಿತದ ಹೊಸ

ಅಭಿವೃದ್ಧಿಯುತ ವಿಧಾನಗಳಿಂದ. ಆದರೆ, ಮೊದಲೇ ಹೇಳಿದಂತೆ ಗ್ರೀಕರ ಮನೋಧರ್ಮಕ್ಕೆ ಇದೆಲ್ಲವೂ ತೀರಾ ಅಪರಿಚಿತವಾದ ವಸ್ತುಗಳಾಗಿದ್ದವು. ಇವನ್ನೆಲ್ಲಾ ಬೆಳಕಿಗೆ ತಂದಿದ್ದು ಅರಬ್ ಮುಸ್ಲಿಮರು. ಅವರ ಕೊಡುಗೆಯಿಂದಲೇ ಇಂದು ವಿಜ್ಞಾನವು ಇಷ್ಟು ಎತ್ತರಕ್ಕೆ ತಲುಪಿದೆ ಎಂದರೆ ಖಂಡಿತ ತಪ್ಪಾಗಲಾರದು. ಈ ನಿಟ್ಟಿನಲ್ಲಿ ವಿಜ್ಞಾನವು ಅರಬ್ ಮುಸ್ಲಿಮರಿಗೆ ಋಣಿಯಾಗಿರಬೇಕು."

ಪ್ರವಾದಿ ಮುಹಮ್ಮದರ (ಸ) ಬೋಧನೆಗಳ ಪ್ರಾಯೋಗಿಕ ಸ್ವರೂಪವನ್ನು ತಮ್ಮದಾಗಿಸಿಕೊಂಡ ಕಾರಣ ಅರಬ್ ಮುಸ್ಲಿಮರೊಳಗೆ ವೈಜ್ಞಾನಿಕ ಮನೋಭಾವವು ಜನ್ಮತಾಳಿತು. ದೈನಂದಿನ ಚಟುವಟಿಕೆ (ವ್ಯಕ್ತಿಗತ ಜವಾಬ್ದಾರಿ) ಹಾಗೂ ಲೌಕಿಕ ವ್ಯವಹಾರಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿದರೆ ಅದಕ್ಕೂ ದೇವನ ಬಳಿ ಪ್ರತಿಫಲವಿದೆ ಎಂಬ ಶಿಕ್ಷಣ ನೀಡುವ ಮೂಲಕ ತಮ್ಮ ಅನುಯಾಯಿಗಳಿಗೆ ಉನ್ನತ ನಾಗರಿಕತೆಯ ಪಾಠವನ್ನು ಕಲಿಸಿದರು. **"ಅಲ್ಲಾಹನು ತನ್ನ ಆರಾಧನೆಗಾಗಿ ಮನುಷ್ಯನನ್ನು ಸೃಷ್ಟಿಸಿದನು"** ಎಂದು ಕುರ್ ಆನ್ ಹೇಳುತ್ತದೆ. ಆರಾಧನೆಯು ಇಲ್ಲಿ ತನ್ನದೇ ಆದ ವಿಶೇಷ ಅರ್ಥವನ್ನು ಹೊಂದಿದೆ. ಇಸ್ಲಾಮಿನಲ್ಲಿ ಆರಾಧನೆ ಎಂಬುದು ಕೇವಲ ಪ್ರಾರ್ಥನೆ ಸಲ್ಲಿಸುವುದಕ್ಕಷ್ಟೇ ಸೀಮಿತವಲ್ಲ. ಬದಲಿಗೆ, ಮನುಷ್ಯನು ದೇವಸಂಪ್ರೀತಿಯನ್ನುದ್ದೇಶಿಸಿ ಮಾಡುವ ಪ್ರತಿಯೊಂದು ಕಾರ್ಯವೂ ಇಸ್ಲಾಮಿನ ದೃಷ್ಟಿಯಲ್ಲಿ ಆರಾಧನೆಯೇ ಆಗಿದೆ. ಜೀವನದ ಎಲ್ಲ ವಿಭಾಗಗಳು ಅದು ವೈಯಕ್ತಿಕವಿರಲಿ, ಸಾಮಾಜಿಕವಿರಲಿ ಅಥವಾ ಲೌಕಿಕವೇ ಇರಲಿ ಅವುಗಳನ್ನು ಸಂಪೂರ್ಣ ಸಂಕಲ್ಪ ಶುದ್ಧಿ ಹಾಗೂ ತುಂಬು ಪ್ರಾಮಾಣಿಕತೆಯೊಂದಿಗೆ ಮಾಡಿದ್ದೇ ಆದಲ್ಲಿ ಅದು ಇಸ್ಲಾಮಿನ ದೃಷ್ಟಿಯಲ್ಲಿ ಪವಿತ್ರಕಾರ್ಯ ಎಂದೇ ಪರಿಗಣಿಸಲ್ಪಡುವುದರ ಜೊತೆಗೆ ಅದಕ್ಕೆ ದೇವನ ವತಿಯಿಂದ ಉತ್ತಮ ಪ್ರತಿಫಲವೂ ದೊರೆಯುವುದು. ಇಸ್ಲಾಮ್ "ಧಾರ್ಮಿಕ" ಮತ್ತು "ಧರ್ಮೇತರ" ಎಂಬುದೆರಡು ಬೇರೆ ಬೇರೆ ಸೀಮೆಗಳು ಎಂಬ ಪರಿಮಿತಿಯನ್ನು ಕೊನೆಗೊಳಿಸಿತು. **"ನೀವು ಶುದ್ಧ ಆಹಾರವನ್ನುಂಡು ದೇವನಿಗೆ ಕೃತಜ್ಞತೆ ಸಲ್ಲಿಸುವುದು ದೇವಾರಾಧನೆಯಾಗಿದೆ"** ಎಂದು ಕುರ್ ಆನ್ ಹೇಳುತ್ತದೆ. 'ಪರಿಶ್ರಮದಿಂದ ದುಡಿದ ಹಣದಿಂದ ಪತ್ನಿಗೆ ಉಣ್ಣಿಸುವ ಒಂದೊಂದು ತುತ್ತಿಗೂ ದೇವನ ಬಳಿ ಹೇರಳ ಪ್ರತಿಫಲವಿದೆ' ಎಂದು ಪ್ರವಾದಿವರ್ಯರು (ಸ) ಹೇಳಿದ್ದಾರೆ. ಇನ್ನೊಂದು ಪ್ರವಾದಿವಚನದಲ್ಲಿ 'ತಮ್ಮ ಪತ್ನಿಯರೊಂದಿಗೆ ಲೈಂಗಿಕ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕೂ

ಪ್ರತಿಫಲವಿದೆ'  ಎಂದಿದೆ. ಇದನ್ನು ಕೇಳಿದ ಪ್ರವಾದಿವರ್ಯರ ಅನುಚರರೊಬ್ಬರು ಆಶ್ಚರ್ಯಚಕಿತರಾಗಿ ಕೇಳಿದರು 'ಓ ಪ್ರವಾದಿವರ್ಯರೇ, ಇದಕ್ಕೂ ಪ್ರತಿಫಲವಿದೆಯೇ?' ಅದಕ್ಕುತ್ತರವಾಗಿ ಪ್ರವಾದಿವರ್ಯರು (ಸ) ಹೇಳಿದರು: 'ಒಂದು ವೇಳೆ ಅನ್ಯ ಸ್ತ್ರೀಯಿಂದ ಲೈಂಗಿಕ ಬಯಕೆ ಈಡೇರಿಸಿಕೊಳ್ಳುತ್ತಿದ್ದರೆ ಅದು ಪಾಪವಾಗುತ್ತಿರಲಿಲ್ಲವೇ? ಹಾಗಾಗಿ ದೇವನು ಅನುಮತಿಸಿದ ಮಾರ್ಗದಲ್ಲಿ ಈಡೇರಿಸಿಕೊಂಡ ಕಾರಣ ಅದು ಪುಣ್ಯಕಾರ್ಯವೆನಿಸುವುದು ಮತ್ತು ಅದಕ್ಕೆ ಪ್ರತಿಫಲ ದೊರೆಯುವುದು.'

ಧರ್ಮವೆಂಬುದು ಮನುಷ್ಯ ಜೀವನದ ಎಲ್ಲಾ ಕೋನಗಳಲ್ಲಿಯೂ ಪ್ರತಿಫಲಿಸಬೇಕು ಹಾಗೂ ಧರ್ಮದಿಂದ ಅವನ ಜೀವನ ಸುಧಾರಣೆ ಹೊಂದಬೇಕು. ಕೇವಲ ಜೀವನದ ಕೆಲವು ಭಾಗಗಳಿಗಷ್ಟೇ ಧರ್ಮವನ್ನು ಮೀಸಲಿಟ್ಟು ಉಳಿದ ವಿಷಯಗಳಲ್ಲಿ ಸ್ವೇಚ್ಛೆಯನ್ನು ಅನುಸರಿಸುವುದು ಸರಿಯಲ್ಲ ಎಂಬುದು ಇಸ್ಲಾಮಿನ ತತ್ವವಾಗಿದೆ. ಧರ್ಮದ ಕುರಿತ ಇಸ್ಲಾಮಿನ ಈ ಹೊಸಪರಿಕಲ್ಪನೆಯು ಜನರೊಳಗೆ ಉನ್ನತ ನೈತಿಕ ಕ್ರಾಂತಿಯ ಜನ್ಮಕ್ಕೆ ಕಾರಣವಾಯಿತು. ಪ್ರವಾದಿ ಮುಹಮ್ಮದರು (ಸ) ಸಾಮಾಜಿಕ ಬದುಕಿನ ಪ್ರತಿಯೊಂದು ರಂಗದಲ್ಲೂ ಪರಸ್ಪರರ ಹಕ್ಕುಗಳು ಏನು? ಆ ಹಕ್ಕುಗಳನ್ನು ಸಂದಾಯ ಮಾಡಿದರೆ ಅದಕ್ಕಿರುವ ಪ್ರತಿಫಲವೇನು? ಒಂದು ವೇಳೆ ಹಕ್ಕುಗಳನ್ನು ಕಬಳಿಸಿದರೆ ದೇವನ ಬಳಿ ಅದಕ್ಕಿರುವ ಶಿಕ್ಷೆ ಏನು? ಎಂಬುದನ್ನು ಓರ್ವ ಶಿಕ್ಷಿತನಿಗೂ ಅಶಿಕ್ಷಿತನಿಗೂ, ನಾಗರಿಕನಿಗೂ ಅನಾಗರಿಕನಿಗೂ ಸಮಾನವಾಗಿ ಅರ್ಥವಾಗುವಂತೆ ಬಹಳ ಸರಳ ಮತ್ತು ಸ್ಪಷ್ಟ ಭಾಷೆಯಲ್ಲಿ ಹೇಳಿಕೊಟ್ಟಿರುವರು. ಇದು ಪ್ರವಾದಿವರ್ಯರ (ಸ) ತರಬೇತಿಯ ವಿಶೇಷತೆಯಾಗಿದೆ.

ಪ್ರವಾದಿ ಮುಹಮ್ಮದರು (ಸ) ತಮ್ಮ ಹಿಂಬಾಲಕರಿಗೆ ಉನ್ನತ ನೈತಿಕಮಟ್ಟದ ತರಬೇತಿ ನೀಡುವ ಜೊತೆಗೆ ಅವರೊಳಗಿನ ದೇವವಿಶ್ವಾಸವು ದುರ್ಬಲಗೊಳ್ಳದಂತೆ ನೋಡಿಕೊಂಡರು ಎಂಬುದಿಲ್ಲಿ ಗಮನಾರ್ಹ ಸಂಗತಿ. ಕೆಲವು ಸಂತ ಮಹನೀಯರು ಪರಸ್ಪರರ ಹಕ್ಕು ಬಾಧ್ಯತೆಗಳ, ಸಮಾಜಸೇವೆಯ ಕರೆಕೊಡುತ್ತಾರಾದರೂ ಅವರ ಹಿಂಬಾಲಕರು ಅಂಧವಿಶ್ವಾಸದಲ್ಲೇ ಬಳಲುತ್ತಿರುವುದನ್ನು ನಾವು ಕಾಣಬಹುದು. ಇನ್ನು ಕೆಲವು ವಿಚಾರಧಾರೆಗಳ ಪ್ರಕಾರ; ಯಾವುದೇ ರೀತಿಯಲ್ಲಾದರೂ (ವರ್ಷಗಟ್ಟಲೆ ತಪಸ್ಸು ಮಾಡಿಯಾದರೂ ಸರಿ) ದೇವನನ್ನು

ಒಲಿಸಿಕೊಂಡರಾಯಿತು ಮೋಕ್ಷ ನಿಶ್ಚಯ. ಆದರೆ, ಸಮಾಜದಲ್ಲಿನ ಓರ್ವ ಜವಾಬ್ದಾರಿಯುತ ವ್ಯಕ್ತಿಯಾಗಿ ಆತನ ಹೆಗಲ ಮೇಲಿರುವ ಹಕ್ಕು ಬಾಧ್ಯತೆಗಳೇನು?ಎಂಬುದು ಅವರ ಬಳಿ ಕಿಂಚಿತ್ತೂ ಗಣನೆಗೆ ಬಾರದು.ಇದಕ್ಕೆ ತದ್ವಿರುದ್ಧವಾಗಿ ಸೃಷ್ಟಿಕರ್ತನ ಹಕ್ಕುಗಳ ಜೊತೆಗೆ ಅವನ ಸೃಷ್ಟಿಯ ಹಕ್ಕುಗಳನ್ನು ನ್ಯಾಯಯುತವಾಗಿ ಸಂದಾಯ ಮಾಡಲು ಹೇಳಿದ ಏಕಮಾತ್ರ ಧರ್ಮ ಇಸ್ಲಾಮ್ ಆಗಿದೆ. ಒಂದು ಒಳ್ಳೆಯ ಫಲಿತಾಂಶವನ್ನು ತಲುಪಲು ಅದಕ್ಕೆ ಅವಶ್ಯವಿರುವ ಸಾಧನ-ಸಂಪನ್ಮೂಲಗಳು ಅತ್ಯಗತ್ಯ. ಸಾಧನ ಸಂಪನ್ಮೂಲಗಳ ಮೂಲಕವಷ್ಟೇ ಉನ್ನತ ಫಲಿತಾಂಶವನ್ನು ತಲುಪುವುದು ಸುಲಭಸಾಧ್ಯ. ಇವರೆಡರ ಮಧ್ಯೆ ಪರಸ್ಪರ ಬೇರ್ಪಡಿಸಲಾಗದ ಬಂಧವಿದೆ. ಇದೇ ರೀತಿ ಇಸ್ಲಾಮ್ ನಲ್ಲಿ ವಿಶ್ವಾಸ ಮತ್ತು ಸತ್ಕರ್ಮಗಳು ಪರಸ್ಪರ ಒಂದರಿಂದನ್ನೊಂದನ್ನು ಬೇರ್ಪಡಿಸಲಾಗದಷ್ಟು ಬಲವಾದ ಬಂಧವನ್ನು ಹೊಂದಿವೆ. ಸುಜ್ಞಾನದೊಂದಿಗೆ ಸತ್ಕರ್ಮವು ಸೇರಿದಾಗ ಅದ್ಭುತ ಫಲಿತಾಂಶವು ಹೊರಹೊಮ್ಮುವುದು. ಇದೇ ಕಾರಣಕ್ಕೆ ಕುರ್ ಆನ್ ನಲ್ಲಿ ಸುಮಾರು 50ಕ್ಕಿಂತಲೂ ಹೆಚ್ಚು ಬಾರಿ "ವಿಶ್ವಾಸವನ್ನು ಸ್ವೀಕರಿಸಿ, ಸತ್ಕರ್ಮವನ್ನು ಮಾಡಿದವರಿಗಷ್ಟೇ ಸ್ವರ್ಗ ಪ್ರಾಪ್ತಿಯಾಗುವುದು" ಎಂದು ಕುರ್ ಆನಿನಲ್ಲಿ ಹೇಳಲಾಗಿದೆ. ನೈಸರ್ಗಿಕ ಆಗು-ಹೋಗುಗಳ ಕುರಿತು ಚಿಂತನೆ ನಡೆಸಲು, ಅವಲೋಕನ ಮಾಡಲು ಕುರ್ ಆನ್ ಕರೆಕೊಟ್ಟಿದೆಯಾದರೂ, ಕೇವಲ ಅವಲೋಕನ ನಡೆಸಿ ಎಂದು ಹೇಳುವುದಷ್ಟೇ ಅದರ ಹಿಂದಿರುವ ಉದ್ದೇಶವಲ್ಲ. ವ್ಯಕ್ತಿಯೋರ್ವ "ನಾನು ದೇವವಿಶ್ವಾಸವನ್ನು ಹೊಂದಿದ್ದೇನೆ" ಎನ್ನುತ್ತಾ ಆ ವಿಶ್ವಾಸಕ್ಕೆ ಪೂರಕವಾದ ಸತ್ಕರ್ಮವನ್ನು ಮಾಡಲು ಸಿದ್ಧನಿಲ್ಲವೆಂದಾದರೆ ಅಂತಹ ವ್ಯಕ್ತಿಯ ವಿಶ್ವಾಸ ಇಸ್ಲಾಮ್ ನ ದೃಷ್ಟಿಯಲ್ಲಿ ಸಂಪೂರ್ಣ ಅಮಾನ್ಯ. ಓರ್ವ ವ್ಯಕ್ತಿ ಏಕಕಾಲದಲ್ಲಿ "ದುಷ್ಕರ್ಮಿಯಾಗಿರುವ ಜೊತೆಗೆ ದೇವವಿಶ್ವಾಸಿಯೂ ಹೌದು." ಇದು ಇಸ್ಲಾಮ್ ನಲ್ಲಿ ಊಹಿಸಲಿಕ್ಕೂ ಸಾಧ್ಯವಿಲ್ಲದ ಮಾತು. ಇಸ್ಲಾಮ್ ನಲ್ಲಿ ಸತ್ಯವಿಶ್ವಾಸದ ಜೊತೆಗೆ ಸತ್ಕರ್ಮಕ್ಕಿರುವ ಬೆಸುಗೆ ಅಂತಹದ್ದು. ಇಸ್ಲಾಮ್ ತೋರಿಸುವ ದೈವಿಕ ಜೀವನ ಶೈಲಿಯು ಕೇವಲ ಉನ್ನತ ಸಿದ್ಧಾಂತಕ್ಕಷ್ಟೇ ಸೀಮಿತವಾಗಿಲ್ಲ. ಬದಲಿಗೆ, ತನ್ನನ್ನು ತಾನು ದೇವವಿಶ್ವಾಸಿ ಎಂದು ಹೇಳಿಕೊಳ್ಳುವ ವ್ಯಕ್ತಿಯು ಆ ಉನ್ನತ ಸಿದ್ಧಾಂತವನ್ನು ತನ್ನ ಬದುಕಿನಲ್ಲಿ ಪ್ರಾಯೋಗಿಕ ರೂಪದಲ್ಲಿ ಅಳವಡಿಸಿಕೊಂಡು ತೋರಿಸಬೇಕು. ಸೃಷ್ಟಿಕರ್ತನ ಹಕ್ಕುಗಳನ್ನು

ಸಂದಾಯ ಮಾಡುವ ಜೊತೆಗೆ ಅವನ ಸೃಷ್ಟಿಗಳ ಹಕ್ಕನ್ನೂ ಆತ ಸಮಾನವಾಗಿ ಪರಿಗಣಿಸಬೇಕು. ಇಸ್ಲಾಮಿನ ದೈವಿಕ ಸಿದ್ಧಾಂತವು ವ್ಯಕ್ತಿಗೆ ಶಾಶ್ವತ ಮೋಕ್ಷವನ್ನು ಕೊಡಿಸಬಲ್ಲ ಸನ್ಮಾರ್ಗದೆಡೆಗೆ ಮಾರ್ಗದರ್ಶನ ಮಾಡುತ್ತದೆ. ಈ ಮೂಲಕ ವ್ಯಕ್ತಿಯು ಸುಜ್ಞಾನದೊಂದಿಗೆ ಸನ್ಮಾರ್ಗದಲ್ಲಿ ಪಯಣಿಸುತ್ತಾ ಲೌಕಿಕ–ಪಾರಲೌಕಿಕ ಔನತ್ಯವನ್ನು ತನ್ನದಾಗಿಸಿಕೊಳ್ಳುವ ಸಂತೃಪ್ತಿದಾಯಕ ಜೀವನಕ್ಕೆ ಅರ್ಹನೆನಿಸಿಕೊಳ್ಳುತ್ತಾನೆ.

ಹಾಗಾದರೆ, ಸತ್ಕರ್ಮಗಳಿಗೆ ಮೂಲಪ್ರೇರಣೆ ನೀಡಬಲ್ಲ, ಮನಸ್ಸಿಗೆ ಶಾಂತಿ–ಸಂತೃಪ್ತಭಾವವನ್ನು ಕೊಡಬಲ್ಲ, ಮನುಷ್ಯನನ್ನು ಮೋಕ್ಷದ ದಾರಿಯಲ್ಲಿ ನಡೆಸಬಲ್ಲ ಮೌಢ್ಯರಹಿತ ಮತ್ತು ಸರಿಯಾದ ವಿಶ್ವಾಸ ಯಾವುದು?. ಅದುವೇ ಏಕದೇವ ವಿಶ್ವಾಸವಾಗಿದೆ. "ಅಲ್ಲಾಹನ ಹೊರತು ಬೇರಾವ ಆರಾಧ್ಯನೂ ಇಲ್ಲ" ಎಂಬ ಸತ್ಯವನ್ನು ಹೃದಯಾಂತರಾಳದಿಂದ ಸ್ವೀಕರಿಸುವುದೇ ಏಕದೇವ ವಿಶ್ವಾಸವಾಗಿದೆ. ಇಸ್ಲಾಮಿನ ಎಲ್ಲಾ ಶಿಕ್ಷಣ ಮತ್ತು ಸತ್ಕರ್ಮಗಳ ಕೇಂದ್ರಬಿಂದು ಏಕದೇವ ವಿಶ್ವಾಸವಾಗಿದೆ. ಸೃಷ್ಟಿಕರ್ತನು ತನ್ನೆಲ್ಲಾ ಸೃಷ್ಟಿಗಳಿಗಿಂತ ಅತ್ಯಂತ ಭಿನ್ನ ಮತ್ತು ವಿಶಿಷ್ಟನು. ಅವನು ತನ್ನ ಅಸ್ತಿತ್ವ ಮತ್ತು ಗುಣವೈಶಿಷ್ಟ್ಯಗಳಿಂದಲೂ ಏಕಮಾತ್ರ ಮತ್ತು ಅನನ್ಯನು.

ಥಾಮಸ್ ಕಾರ್ಲೈಲ್ ಬರೆಯುತ್ತಾರೆ, 'ದೇವನಿಗೆ ಸಂಪೂರ್ಣ ಶರಣಾಗುವುದೇ ಇಸ್ಲಾಮ್ ನ ಮೂಲತತ್ವವಾಗಿದೆ. ದೇವನು ನಮ್ಮ ಪಾಲಿಗೆ ನೀಡುವುದೆಲ್ಲವೂ ಅವನ ಕಡೆಯಿಂದ ಬಂದ ಒಳಿತೆಂದು ಭಾವಿಸಿ ಅದರಲ್ಲಿ ಸಹನೆವಹಿಸುವುದು. ಮರಣ ಮತ್ತು ಅದಕ್ಕಿಂತ ಕೆಟ್ಟಸ್ಥಿತಿ ಒದಗಿಬಂದಾಗಲೂ ವಿಶ್ವಾಸದ ಸ್ಥಿರತೆಯನ್ನು ಕಾಪಾಡಿಕೊಂಡು, ಇದು ದೇವನ ಕಡೆಯಿಂದ ಬಂದ ಪರೀಕ್ಷೆ ಎಂದು ಭಾವಿಸಿ ಸಹನೆ ಪಾಲಿಸುವುದು, ತಮ್ಮ ಬದುಕನ್ನು ಸಂಪೂರ್ಣವಾಗಿ ದೇವನಿಗೆ ಅರ್ಪಿತಗೊಳಿಸಿ, ಸೃಷ್ಟಿಕರ್ತನಿಗೆ ವಿಧೇಯರಾಗಿ ಜೀವಿಸುವುದೇ ಇಸ್ಲಾಮ್ ಆಗಿದೆ.' ಮುಂದುವರಿಯುತ್ತಾ ಕಾರ್ಲೈಲ್ ಬರೆಯುತ್ತಾರೆ, 'ಗೋಯ್ಥೆ ಹೇಳುತ್ತಾರೆ; "ಒಂದು ವೇಳೆ ಇದೇ ಇಸ್ಲಾಮ್ ಆಗಿದ್ದರೆ, ನಾವೆಲ್ಲರೂ ಇಸ್ಲಾಮ್ ನಂತೆಯೇ ಜೀವಿಸುತ್ತಿರುವೆವು ಅಲ್ಲವೇ?", ನಮ್ಮನ್ನೂ ಒಳಗೊಂಡು, ಯಾರೆಲ್ಲಾ ನೈತಿಕತೆಯಿಂದ ಕೂಡಿದ ಜೀವನ ಸಾಗಿಸುತ್ತಿರುವರೋ ಅವರೆಲ್ಲರೂ ಜೀವಿಸುತ್ತಿರುವುದು ಇಸ್ಲಾಮ್ ನಲ್ಲಿಯೇ ಆಗಿದೆ.

ನಿಸ್ಸಂಶಯವಾಗಿಯೂ ಇಲ್ಲಿಯ ತನಕ ಬಾಹ್ಯಲೋಕದಿಂದ ಭೂಮಿಗೆ ಬಂದ ಅತ್ಯಂತ ಶ್ರೇಷ್ಠ ಜ್ಞಾನ ಇಸ್ಲಾಮ್ ನಲ್ಲಿ ಅಡಗಿದೆ' .

**Note: ಈ ಲೇಖನವು "ಮುಹಮ್ಮದ್ ದ ಪ್ರೊಫೆಟ್ ಆಫ್ ಇಸ್ಲಾಮ್" ಎಂಬ ಆಂಗ್ಲ ಕೃತಿಯ ಆಯ್ದ ಭಾಗವಾಗಿದೆ. ಮೈಸೂರಿನ ಸರಕಾರಿ ಮಹಿಳಾ ಕಾಲೇಜಿನ ತತ್ವಶಾಸ್ತ್ರದ ಮುಖ್ಯಸ್ಥರಾಗಿದ್ದ ಪ್ರೊ. ರಾಮಕೃಷ್ಣ ರಾವ್ ಇದರ ಲೇಖಕರಾಗಿದ್ದಾರೆ. 1979ರಲ್ಲಿ ಬೋರ್ಡ್ ಆಫ್ ಇಸ್ಲಾಮಿಕ್ ಪಬ್ಲಿಕೇಶನ್ಸ್ ದೆಹಲಿಯ ವತಿಯಿಂದ ಮೊದಲ ಬಾರಿಗೆ ಇದನ್ನು ಮುದ್ರಿಸಲಾಗಿತ್ತು.**

*********

❖ ಸೆಂಟರ್ ಫಾರ್ ಪೀಸ್ ಅಂಡ್ ಸ್ಪಿರಿಚುವಾಲಿಟಿ ಇಂಟರ್ ನ್ಯಾಶನಲ್, (CPS ಇಂಟರ್ ನ್ಯಾಶನಲ್) ಯಾವುದೇ ರಾಜಕೀಯ ಮತ್ತು ಲಾಭೋದ್ದೇಶವಿಲ್ಲದ ಸರ್ಕಾರೇತರ ಸಂಸ್ಥೆಯಾಗಿದೆ (NGO). ನಮ್ಮ ಸಂಸ್ಥೆಯ ಕೇಂದ್ರ ಕಾರ್ಯಾಲಯವು ದೆಹಲಿಯಲ್ಲಿದ್ದು, ನಮ್ಮದು ಅದರ ಬೆಂಗಳೂರು ಶಾಖೆಯಾಗಿದೆ. ಈ ಸಂಸ್ಥೆಯು ಆಧ್ಯಾತ್ಮಿಕತೆಯ ಸಂದೇಶಗಳನ್ನು ಸಾರುವ ಮೂಲಕ ಶಾಂತಿಯ ಮೌಲ್ಯಗಳನ್ನು ಪ್ರೋತ್ಸಾಹಿಸುವ ಮತ್ತು ಅದನ್ನು ಬಲಪಡಿಸುವ ಬೃಹತ್ ಗುರಿಯನ್ನು ಹೊಂದಿದೆ. ಈ ಸಂಸ್ಥೆಯು ಶಾಂತಿ ಮತ್ತು ಸದ್ವಿಚಾರಗಳನ್ನು ಸಾರುವ ಮೂಲಕ ದೇಶಾದ್ಯಂತ ಉತ್ತಮ ಸಮಾಜವನ್ನು ನಿರ್ಮಿಸಲು ನಿರಂತರವಾಗಿ ಶ್ರಮಿಸುತ್ತಿದೆ.

❖ ಈ ಸಂಸ್ಥೆಯನ್ನು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಮೌಲಾನಾ ವಹೀದುದ್ದೀನ್ ಖಾನ್ ರವರು 2001ರಲ್ಲಿ ಸಂಸ್ಥಾಪಿಸಿದರು. ಮೌಲಾನಾ ವಹೀದುದ್ದೀನ್ ಖಾನ್ ಇವರು ಅಗಾಧ ಜ್ಞಾನವುಳ್ಳ ಇಸ್ಲಾಮೀ ವಿದ್ವಾಂಸರಾಗಿದ್ದರು. ಮೌಲಾನರು ಶಾಂತಿಯುತ ಸಮಾಜದ ಸಂಸ್ಥಾಪನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಈ ನಿಟ್ಟನಿಲ್ಲಿ ಅವರು ಪಟ್ಟ ಪರಿಶ್ರಮವನ್ನು ಭಾರತ ಸರಕಾರ ಸೇರಿದಂತೆ ಅನೇಕ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಂಸ್ಥೆಗಳು ಗುರುತಿಸಿ ಮೌಲಾನರಿಗೆ ಪ್ರಶಸ್ತಿ ನೀಡಿ ಅವರನ್ನು ಸನ್ಮಾನಿಸಿ ಗೌರವಿಸಿವೆ.

❖ ಭಾರತದ ಎರಡನೆ ಅತಿದೊಡ್ಡ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣ ರಾಷ್ಟ್ರೀಯ ಪ್ರಶಸ್ತಿ ಸೇರಿದಂತೆ ಡಿಮಿಯುರ್ಗಸ್ ಅಂತರ್ ರಾಷ್ಟ್ರೀಯ ಶಾಂತಿ ಪ್ರಶಸ್ತಿ, ಶಾಂತಿಸ್ಥಾಪನೆಗಾಗಿ ಅವಿರತ ಪರಿಶ್ರಮವನ್ನು ಗುರುತಿಸಿ ಮುಸ್ಲಿಂ ಸಮುದಾಯದಲ್ಲಿ ನೀಡಲಾಗುವ ಸಯ್ಯಿದಿನಾ ಇಮಾಮ್ ಹಸನ್ ಇಬ್ನೆ ಅಲಿ ಪ್ರಶಸ್ತಿಗಳು ಮೌಲಾನಾರ ಮುಡಿಗೇರಿವೆ. ಮೌಲಾನಾರು ಇಸ್ಲಾಂನ ಆಧ್ಯಾತ್ಮಿಕ ರಾಯಭಾರಿ ಎಂದೇ ವಿಶ್ವದಾದ್ಯಂತ ಗುರುತಿಸಲ್ಪಟ್ಟಿದ್ದಾರೆ.


ಮೌಲಾನಾರ ಕೃತಿಗಳು ವಿಶ್ವದಾದ್ಯಂತ 16 ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿದೆ. ಮೌಲಾನರ ಪುಸ್ತಕಗಳು ಆರು ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಗಳ ಭಾಗವಾಗಿವೆ.


❖ ಮೌಲಾನರ ಆಧ್ಯಾತ್ಮಿಕ ಲೇಖನಗಳು ಟೈಮ್ಸ್ ಆಫ್ ಇಂಡಿಯಾದ "ಸ್ಪೀಕಿಂಗ್ ಟ್ರೀ" (Speaking Tree) ಯ ವಿಭಾಗದಲ್ಲಿ ಸತತವಾಗಿ ಪ್ರಕಟವಾಗುತ್ತಿತ್ತು. ಈಗ ಅವರ ಸುಪುತ್ರಿಯಾದ ಪ್ರೊ. ಫರೀದಾ ಖಾನಮ್ ಇವರುಈ ವಿಭಾಗದಲ್ಲಿ ಮೌಲಾನಾರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವರು.


❖ ಸಕಲ ಮಾನವರ ಒಳಿತಿಗಾಗಿ ಸಮಾಜದಲ್ಲಿ ಶಾಂತಿ ನೆಲೆಸಬೇಕು. ಜಾತಿ, ಧರ್ಮ ಮತಗಳ ಬೇಧವಿಲ್ಲದೆ ಪ್ರತಿಯೋರ್ವರೂ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದಯುತ ವಾತಾವರಣವನ್ನು ನಿರ್ಮಿಸಲು ತಮ್ಮ ಕೊಡುಗೆಗಳನ್ನು ನೀಡಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ. ಈ ನಿಟ್ಟಿನಲ್ಲಿ ಕೋಮು ಸಂಘರ್ಷ ಅಳಿಸಿ, ಸಮಾಜದಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ನಮ್ಮ ಸಂಸ್ಥೆಯು ಹಗುಲಿರುಳೂ ಕಾರ್ಯನಿರ್ವಹಿಸುತ್ತಿದೆ.


*********


# Books by Maulana Wahiduddin Khan

















www.goodwordbooks.com
www.quran.me www.cpsglobal.org

ಪ್ರವಾದಿ ಮುಹಮ್ಮದರಿಗಿಂತ ಮೊದಲು ಆಗಮಿಸಿದಂತಹ ಪ್ರವಾದಿಗಳ ಜೀವನ ಚರಿತ್ರೆಯನ್ನು ಇತಿಹಾಸದ ಪುಟಗಳಲ್ಲಿ ಸಂರಕ್ಷಿಸಿಡಲು ಸಾಧ್ಯವಾಗಲಿಲ್ಲ. ಇದರ ಪರಿಣಾಮವೆಂಬಂತೆ ಐತಿಹಾಸಿಕ ಹಾಗೂ ಶೈಕ್ಷಣಿಕ ನಿಟ್ಟಿನಲ್ಲಿ ಅವರ ಪ್ರವಾದಿತ್ವವನ್ನು ಸಾಬೀತು ಪಡಿಸುವುದು ಸುಲಭ ಸಾಧ್ಯವಲ್ಲ. ಆದರೆ ಅಂತ್ಯ ಪ್ರವಾದಿ ಮುಹಮ್ಮದರ (ಸ) ಜೀವನವು ಈ ವಿಷಯದಲ್ಲಿ ಸಂಪೂರ್ಣವಾಗಿ ಭಿನ್ನ; ಅಂತ್ಯ ಪ್ರವಾದಿಯ (ಸ) ಜೀವನ ಚರಿತ್ರೆಯು ಇತಿಹಾಸದ ಪುಟಗಳಲ್ಲಿ ಸಂಪೂರ್ಣವಾಗಿ ಸುರಕ್ಷಿತವಾಗಿದೆ. ಈ ಸತ್ಯವನ್ನು ಜಗತ್ತಿನ ಎಲ್ಲಾ ಪ್ರಖ್ಯಾತ ಇತಿಹಾಸಕಾರರೂ ಒಪ್ಪಿಕೊಂಡಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಪ್ರವಾದಿ ಮುಹಮ್ಮದರ (ಸ) ಜೀವನ ಮತ್ತು ಅವರು ತಂದ ಸಂದೇಶಗಳ ಕುರಿತು ಪ್ರಸಿದ್ಧ ವಿದ್ವಾಂಸರ ಹಾಗೂ ಸಂಶೋಧಕರ ಅಭಿಪ್ರಾಯ ಮತ್ತು ಲೇಖನಗಳನ್ನು ನೀಡಲಾಗಿದೆ.

goodwordbooks.com cpsglobal.org

Goodword Books

CPS International
centre for peace & spirituality

ISBN 978-93-94886-64-3

9 789394 886643

CPS Karnataka
shamuhallur2@gmail.com